ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 5 ಭಾನುವಾರ 2023

ಸಂಪುಟ: 44 | ಸಂಚಿಕೆ: 199 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಪಕ್ಷ, ಸರ್ಕಾರದ ಆಂತರಿಕ ವಿಷಯ ಹಾದಿ ಬೀದಿಯಲ್ಲಿ ಮಾತಾಡಬೇಡಿ...!

■ ಸಚಿವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ■ ಉಪಾಹಾರ ಕೂಟ ನೆಪದಲ್ಲಿ ಆಯ್ದ ಸಚಿವರಿಗೆ ಎಚ್ಚರಿಕೆ ಪಾಠ ■ ಲೋಕಸಭಾ ಚುನಾವಣೆಯಲ್ಲಿ ನೀವೆಲ್ಲಾ ವರಿಷ್ಠರ ಟಾರ್ಗೆಟ್ ಮುಟ್ಟದಿದ್ದರೆ ನಿಮಗೆಲ್ಲಾ ಕಷ್ಟವಾಗುತ್ತೆ



ಬೆಂಗಳೂರು, ನ.4(ಕೆಎಂಶಿ)–ಬರೀ ಹೇಳಿಕೆ ಬಿಡಿ, ಲೋಕಸಭಾ ಚುನಾವಣೆ ಕಡೆಗೆ ಗಮನ ಹರಿಸಿ. ಇಲ್ಲದಿದ್ದರೆ ನಿಮಗೆ ಕಷ್ಟವಾಗುತ್ತೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಂಪುಟ ಸಹೋದ್ಯೋಗಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಉಪಾಹಾರ ಕೂಟಕ್ಕೆ ಒಂದಷ್ಟು ಆಯ್ದ ಸಚಿವರನ್ನು ಮಾತ್ರ ಆಹ್ವಾನಿಸಿದ್ದ ಮುಖ್ಯಮಂತ್ರಿ ಅವರು, ಉಪಾಹಾರದ ನಂತರದ ಸಭೆಯಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಮುಂದಿಟ್ಟುಕೊಂಡು ಸಚಿವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಪಕ್ಷ ಮತ್ತು ಸರ್ಕಾರದ ಆಂತರಿಕ ವಿಚಾರಗಳನ್ನು ಹಾದಿಬೀದಿಯಲ್ಲಿ ಮಾತಾಡಿ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದೀರಿ. ಇದರಿಂದ ಮುಂಬರುವ ಲೋಕಸಭಾ ಚುನಾವಣೆಯ ಮೇಲೆ ▶ 9ನೇ ಪುಟಕ್ಕೆ

ಕೆಲ ಸಚಿವರು ಅನಗತ್ಯ ಹೇಳಿಕೆ ಮೂಲಕ ಪಕ್ಷದ ಜೊತೆಗೆ ಅವರ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ

● ಡಿಸಿಎಂ ಡಿ.ಕೆ.ಶಿವಕುಮಾರ್ ಮಾರ್ಮಿಕ ನುಡಿ ● ಲೋಕಸಭಾ ಚುನಾವಣೆ ನಮ್ಮ ಮುಂದಿನ ಗುರಿ

ಬೆಂಗಳೂರು, ನ.4(ಕೆಎಂಶಿ)–ಕೆಲ ಸಚಿವರು, ಶಾಸಕರು ಅನಗತ್ಯ ಹೇಳಿಕೆ ನೀಡಿ ಪಕ್ಷದ ಮತ್ತು ಅವರ ಭವಿಷ್ಯ ಹಾಳು ಮಾಡಿಕೊಳ್ಳುತ್ತಾರೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಮಾರ್ಮಿಕವಾಗಿ ನುಡಿದಿದ್ದಾರೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದ ಉಪಾಹಾರ ಕೂಟದ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯೇ ನಮಗೆ ಮುಂದಿನ ಗುರಿ. ವರಿಷ್ಠರು ನೀಡಿರುವ 20ರ ಮ್ಯಾಜಿಕ್ ಸಂಖ್ಯೆ ನಾವು ಮುಟ್ಟಬೇಕಿದೆ. ಇಂದಿನ ಸಭೆಯಲ್ಲಿ ಚುನಾವಣೆ ಸೇರಿದಂತೆ ಅಭಿವೃದ್ಧಿ ಮತ್ತು ಇತರ ವಿಷಯಗಳ ಬಗ್ಗೆಯೂ ಚರ್ಚೆ ಮಾಡಿದ್ದೇವೆ. ಪ್ರತಿ ಲೋಕಸಭಾ ಕ್ಷೇತ್ರದಲ್ಲಿ ಸಮರ್ಥ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಸಚಿವರುಗಳಿಗೆ ಉಸ್ತುವಾರಿ ವಹಿಸಲಾಗಿದೆ. ಉಸ್ತುವಾರಿಗಳು ಜಿಲ್ಲಾ ಉಸ್ತುವಾರಿ ಸಚಿವರ ಜತೆಗೂಡಿ ಸಂಭವನೀಯ ಮೂವರು ಅಭ್ಯರ್ಥಿಗಳ ಹೆಸರನ್ನು ಶಿಫಾರಸ್ಸು ಮಾಡಬೇಕು. ▶ 9ನೇ ಪುಟಕ್ಕೆ

“ಬಹಳ ಸಂತೋಷ... ಕುಮಾರಸ್ವಾಮಿಯವರು ಎನ್‌ಡಿಎ ಪಾರ್ಟ್‌ನರ್. ನಮಗೂ ಎನ್‌ಡಿಎಗೂ ಸಂಬಂಧ ಇಲ್ಲ. ಮೊದಲು ಅವರು ಎನ್‌ಡಿಎಯಿಂದ ಹೊರಗೆ ಬಂದು ಮಾತನಾಡಲಿ. ನಾವು 136 ಶಾಸಕರಿದ್ದೇವೆ. ಜನರು ನಮಗೆ ಕೊಟ್ಟಿರುವ ಆಶೀರ್ವಾದ ಸಾಕು. ಕುಮಾರಸ್ವಾಮಿ ಉತ್ತಮ ವಿರೋಧ ಪಕ್ಷದ ನಾಯಕನಾಗಿ ಸರ್ಕಾರವನ್ನು ತಿದ್ದುವ ಕೆಲಸ ಮಾಡಲಿ. ಒಮ್ಮೆ ಕಾಂಗ್ರೆಸ್ ಮತ್ತೊಮ್ಮೆ ಬಿಜೆಪಿ ಅವರನ್ನು ಮುಖ್ಯಮಂತ್ರಿ ಮಾಡಿದೆ. ಚಿಕ್ಕ ವಯಸ್ಸಿನಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಆ ಅನುಭವದ ಮೇರೆಗೆ ಸರ್ಕಾರವನ್ನು ಟೀಕೆ ಮಾಡುವ ಬದಲು ಮಾರ್ಗದರ್ಶನ ನೀಡಲಿ.



– ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಡಿ.ಕೆ.ಶಿವಕುಮಾರ್ ನಾಳೆಯೇ ಸಿಎಂ ಆಗೋದಾದರೆ 19 ಜೆಡಿಎಸ್ ಶಾಸಕರ ಬೆಂಬಲ: ಹೆಚ್‌ಡಿಕೆ ಆಫರ್



ಬೆಂಗಳೂರು, ನ.4– ಡಿ.ಕೆ.ಶಿವಕುಮಾರ್ ನಾಳೆಯೇ ಸಿಎಂ ಆಗುವುದಾದರೆ ಅವರಿಗೆ ಜೆಡಿಎಸ್ ಬೆಂಬಲ ನೀಡುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಜೆಡಿಎಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ನಾಳೆ ಬೆಳಗ್ಗೆ ಸಿಎಂ ಆದರೆ ಜೆಡಿಎಸ್ ಪಕ್ಷದ 19 ಶಾಸಕರು ಬೆಂಬಲ ನೀಡುತ್ತಾರೆ ಎಂದರು. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪರಿಸ್ಥಿತಿ ನೋಡಿದರೆ ಎಲ್ಲರೂ ತಾವು ಸಿಎಂ ಆಕಾಂಕ್ಷಿ ಎಂದು ಹೇಳಿ ಕೊಳ್ಳುತ್ತಿದ್ದಾರೆ. ಹೀಗಾಗಿ ರಾಜ್ಯ ಕಾಂಗ್ರೆಸ್ ಅನ್ನು ಟಿಸಿಎಂ, ಡಿಸಿಎಂ ಸರ್ಕಾರ ಎಂದು ಕರೆಯ ಬಹುದು. ಟಿಸಿಎಂ ಅಂದರೆ ಟೆಂಪ್ರವರಿ ಸಿಎಂ, ಡಿಸಿಎಂ ಅಂದ್ರೆ ಡೂಪ್ಲಿಕೇಟ್ ಸಿಎಂ ಎಂದು ಕಾಂಗ್ರೆಸ್ ವಿರುದ್ಧ ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.

ಅಂಗಾಂಗ ದಾನ ಮಾಡುವವರಿಗೆ ಅಂತ್ಯಕ್ರಿಯೆ ವೇಳೆ ಸರ್ಕಾರಿ ಗೌರವ

ಹೊಸ ನೀತಿ ಜಾರಿಗೆ ಸರ್ಕಾರ ಚಿಂತನೆ

ಬೆಂಗಳೂರು, ನ.4– ಪ್ರತಿಫಲಾಪೇಕ್ಷೆ ಇಲ್ಲದೆ ಅಂಗಾಂಗ ದಾನ ಮಾಡುವ ವ್ಯಕ್ತಿಗಳ ಅಂತ್ಯಕ್ರಿಯೆ ವೇಳೆ ಸರ್ಕಾರಿ ಗೌರವ ನೀಡುವ ಕುರಿತಂತೆ ನೀತಿ ರೂಪಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ. ಸಾಮಾಜಿಕ ಜಾಲತಾಣ ಎಕ್ಸ್ (ಟ್ವಿಟರ್) ಖಾತೆಯಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಮಾನವೀಯ ನೆಲೆಯಲ್ಲಿ ಅಂಗಾಂಗ ದಾನ ಮಾಡಿ ಇನ್ನೊಬ್ಬರ ಜೀವ ಉಳಿಸಲು ನೆರವಾಗುವ ವ್ಯಕ್ತಿಗಳು ಮತ್ತು ಕುಟುಂಬದವರನ್ನು ಗುರುತಿಸಿ ಗೌರವಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು ಹೇಳಿದ್ದಾರೆ.

ಅಂಗಾಂಗ ದಾನ ಮಾಡುವ ವ್ಯಕ್ತಿ ಅಥವಾ ಕುಟುಂಬಗಳಿಗೆ ಪ್ರಮಾಣಪತ್ರಗಳನ್ನು ನೀಡಿ ಗೌರವಿಸುವ ಹಾಗೂ ತಮಿಳುನಾಡು ಮಾದರಿಯಲ್ಲಿ ಅಂಗಾಂಗ ದಾನಿಗಳ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವಗಳೊಂದಿಗೆ ನಡೆಸುವ ಬಗ್ಗೆಯೂ ಸರ್ಕಾರ ಪರಿಶೀಲಿಸುತ್ತಿದೆ ಎಂದು ತಿಳಿಸಿದ್ದಾರೆ. ಈ ಮೂಲಕ ಸರ್ಕಾರ ಅಂಗಾಂಗ ದಾನದ ಮಹತ್ವವನ್ನು ಸಾರಲು ಮತ್ತು ಮತ್ತಷ್ಟು ಜನರಿಗೆ ಅಂಗಾಂಗ ದಾನ ಪ್ರಕ್ರಿಯೆಯಲ್ಲಿ ▶ 9ನೇ ಪುಟಕ್ಕೆ

ಪ್ರಧಾನಮಂತ್ರಿಗಳ ಅನ್ನ ಯೋಜನೆ ಐದು ವರ್ಷ ವಿಸ್ತರಣೆ

ರಾಯ್‌ಪುರ್ (ಛತ್ತೀಸಘಡ), ನ. 4– ಬಿಪಿಎಲ್ ಕಾರ್ಡುದಾರರಿಗೆ ಪ್ರಧಾನಮಂತ್ರಿಗಳ ಅನ್ನ ಯೋಜನೆಯಡಿ ಉಚಿತವಾಗಿ ನೀಡಲಾಗುತ್ತಿರುವ 5 ಕೆಜಿ ಅಕ್ಕಿಯನ್ನು ಮುಂದಿನ 5 ವರ್ಷಕ್ಕೆ ವಿಸ್ತರಿಸಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಛತ್ತೀಸ್‌ಘಡ ವಿಧಾನಸಭಾ ಚುನಾವಣೆ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಬಿಪಿಎಲ್ ಕುಟುಂಬದ ಸದಸ್ಯರಿಗೆ ತಲಾ 5 ಕೆಜಿ ಅಕ್ಕಿಯನ್ನು ಉಚಿತವಾಗಿ ನೀಡಲು ಆರಂಭಿಸಲಾಗಿತ್ತು. ಈ ಯೋಜನೆಯು ಇದೇ ಡಿಸೆಂಬರ್‌ಗೆ ಮುಕ್ತಾಯವಾಗಲಿರುವ ಹಿನ್ನೆಲೆಯಲ್ಲಿ ಯೋಜನೆಯನ್ನು ಮುಂದಿನ ಐದು ವರ್ಷಕ್ಕೆ ವಿಸ್ತರಿಸಲಾಗುತ್ತದೆ ಎಂದರು.



ನ.15ರಂದು ಬರ ಪರಿಸ್ಥಿತಿ ವರದಿ ಸಲ್ಲಿಕೆಗೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಬೆಂಗಳೂರು, ನ.4– ರಾಜ್ಯದ ಬರ ಪೀಡಿತ ತಾಲೂಕುಗಳು ಮತ್ತು ಜಿಲ್ಲೆಗಳಿಗೆ ಭೇಟಿ ನೀಡಿ ನವೆಂಬರ್ 15ರಂದು ವಿವರ ವಾದ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾ ಉಸ್ತುವಾರಿ ಸಚಿವರಿಗೆ ಸೂಚಿಸಿದ್ದಾರೆ. ರಾಜ್ಯದಲ್ಲಿ 236 ತಾಲೂಕುಗಳ ಪೈಕಿ 216 ತಾಲೂಕುಗಳು ಬರಪೀಡಿತ ಎಂದು ಘೋಷಿಸಲ್ಪಟ್ಟಿದ್ದು, ಭೀಕರ ಬರಗಾಲವನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ದೇಶನ ನೀಡಿದ್ದಾರೆ.



ಮುಖ್ಯಮಂತ್ರಿಗಳ ಕಚೇರಿ ಶುಕ್ರವಾರ ಸಚಿವರ ಕಾರ್ಯಕ್ರಮಗಳ ಪಟ್ಟಿ ಬಿಡುಗಡೆ ಮಾಡಿದ್ದು, ರಾಜ್ಯದಲ್ಲಿನ ಜನ, ಜಾನುವಾರು, ಕೃಷಿ ಮತ್ತು ಕೈಗಾರಿಕೆಗಳಿಗೆ ಕುಡಿಯುವ ನೀರಿನ ಅವಶ್ಯಕತೆಗಳು, ಮೇವು, ಉದ್ಯೋಗ ಸನ್ನಿವೇಶ, ಬರ ಪರಿಹಾರ ವಿತರಣೆ ಮತ್ತು ಬರ ಎದುರಿಸಲು ವಿವಿಧ ಕ್ರಮಗಳ ಕುರಿತು ಸಚಿವ ಸಂಪುಟ ಸಭೆ ಹಾಗೂ ಜಿಲ್ಲಾಧಿಕಾರಿ, ಸಿಇಒಗಳೊಂದಿಗೆ ಚರ್ಚಿಸಲಾಗಿದೆ ಎಂದು ಹೇಳಲಾಗಿದೆ. ಇನ್ನೆರಡು ವಾರಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಯ ಪ್ರತಿ ತಾಲೂಕಿಗೆ ಭೇಟಿ ನೀಡಿ, ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ಉದ್ಯೋಗ, ಬೆಳೆ ನಷ್ಟ ಮತ್ತಿತರ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಿ ಅಗತ್ಯ ಮಾಹಿತಿ ಸಂಗ್ರಹಿಸಲಿದ್ದಾರೆ ಎಂದು ಸಿಎಂ ಹೇಳಿದ್ದಾರೆ. ಸ್ಥಳೀಯ ಶಾಸಕರೊಂದಿಗೆ ಗೋಶಾಲೆಗಳು ಮತ್ತು ಮೇವು ಬ್ಯಾಂಕ್‌ಗಳ ಸ್ಥಿತಿಗತಿ ಕುರಿತು ಪರಿಶೀಲಿಸುವಂತೆಯೂ ಅವರು ಸೂಚಿಸಿದ್ದಾರೆ.

ಬರ ಪರಿಹಾರ ಕ್ರಮಗಳಲ್ಲಿ ಯಾವುದೇ ಲೋಪ ಆಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಸರ್ಕಾರ ಕೈಗೊಂಡಿರುವ ಬರ ಪರಿಸ್ಥಿತಿ ಮತ್ತು ಪರಿಹಾರ ಕ್ರಮಗಳ ವಿವರವನ್ನು ಆಯಾ ತಾಲೂಕುಗಳ ಮಾಧ್ಯಮಗಾರರಿಗೆ ವಿವರಿಸಲು ಮತ್ತು ನವೆಂಬರ್ 15ರಂದು ತಮ್ಮ ತಮ್ಮ ಜಿಲ್ಲೆಗಳಲ್ಲಿ ಬರಗಾಲದ ಬಗ್ಗೆ ವಿವರವಾದ ವರದಿಯನ್ನು ನೀಡುವಂತೆ ಸಿದ್ದರಾಮಯ್ಯ ಸಚಿವರಿಗೆ ತಿಳಿಸಿದ್ದಾರೆ.

ಭೂ ವಿವಾದದ ರಾಜೀ ವೇಳೆ ಗುಂಡಿಕ್ಕಿ ಅಣ್ಣನ ಮಗನನ್ನೇ ಕೊಂದ ರೌಡಿ ಚಿಕ್ಕಪ್ಪ

ನಾಗಮಂಗಲ, ನ.4–ಜಮೀನು ವಿಚಾರಕ್ಕೆ ದಾಯಾದಿಗಳ ನಡುವೆ ಕಲಹ ನಡೆದು, ಬಳಿಕ ರಾಜೀ ವೇಳೆ ರೌಡಿಶೀಟರ್ ತನ್ನ ಅಣ್ಣನ ಮಗನನ್ನೇ ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ನಾಗಮಂಗಲ ಹಾಗೂ ಕೆ.ಆರ್. ಪೇಟೆ ತಾಲೂಕಿನ ಗಡಿಗ್ರಾಮ ಬಿಂಡಿಗನವಿಲೆ ಹೋಬಳಿ ಹನುಮನಹಳ್ಳಿ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ. ಗ್ರಾಮದ ವಾಸು ಎಂಬುವರ ಪುತ್ರ ಜಯಪಾಲ್ (24) ಹತ್ಯೆಯಾದ ಯುವಕ. ವಾಸು ಸಹೋದರ ರೌಡಿಶೀಟರ್ ಸೀಮೆಎಣ್ಣೆ ಕುಮಾರ್ ಹತ್ಯೆಗೈದ ಆರೋಪಿ.



ವಿವರ: ಹನುಮನಹಳ್ಳಿ ಗ್ರಾಮದ ವಾಸು ಮತ್ತು ರೌಡಿ ಸೀಮೆಎಣ್ಣೆ ಕುಮಾರ್ ನಡುವೆ ಜಮೀನಿನ ವಿಚಾರವಾಗಿ ವಿವಾದ ಏರ್ಪಟ್ಟಿತ್ತು. ಇದೇ ವಿಚಾರವಾಗಿ ಆಗಾಗ್ಗೆ ಗಲಾಟೆ ಸಹ ನಡೆಯುತ್ತಿತ್ತು. ವಿವಾದ ಇತ್ಯರ್ಥಕ್ಕೆ ಶನಿವಾರ ಸಮಯವನ್ನು ಇಬ್ಬರು ನಿಗದಿ ಮಾಡಿಕೊಂಡಿದ್ದರು. ಅದರಂತೆ ಮಧ್ಯಾಹ್ನ ವಾಸು ಮತ್ತು ಆತನ ಸಹೋದರ ಸೀಮೆಎಣ್ಣೆ ಕುಮಾರ್ ಇಬ್ಬರು ಮಾತುಕತೆ ನಡೆಸುವಾಗ ಮಾತಿಗೆ ಮಾತು ಬೆಳೆದಿದೆ. ಈ ಸಂದರ್ಭ ತಂದೆ ಪರ ಮಗ ಜಯಪಾಲ್ ಮಾತನಾಡುವಾಗ ಆತನ ಚಿಕ್ಕಪ್ಪ, ರೌಡಿಶೀಟರ್ ಸೀಮೆಎಣ್ಣೆ ಕುಮಾರ್ ಅವನನ್ನು ಬೆದರಿಸುವ ಸಲುವಾಗಿ ಗನ್ ತೆಗೆದಿದ್ದಾನೆ. ಆದರೆ ಆಕಸ್ಮಿಕವಾಗಿ 3 ಸುತ್ತು ಗುಂಡು ಸಿಡಿದು ಜಯಪಾಲ್ ▶ 9ನೇ ಪುಟಕ್ಕೆ

ಭೈರವ ಖೋ-ಖೋ ಪಂದ್ಯಾವಳಿಗೆ ಚಾಲನೆ



ಮೈಸೂರು,ನ.4-ಮೈಸೂರಿನ ಭೈರವೇಶ್ವರನಗರದಲ್ಲಿರುವ ಅಣ್ಣಯ್ಯಪ್ಪ ಸ್ಮಾರಕ ವಿದ್ಯಾ ಸಂಸ್ಥೆಯ ರಜತ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಭೈರವ ಖೋ-ಖೋ ಪಂದ್ಯಾವಳಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಖೋ-ಖೋ ಪಂದ್ಯದಲ್ಲಿ ಗೆಲ್ಲಬೇಕು ಎಂದರೆ, ಒಗ್ಗಟ್ಟು ಎಂಬುದು ಬಹಳ ಮುಖ್ಯ ಆದ್ದರಿಂದ ಪ್ರತಿಯೊಂದು ತಂಡವು ಒಗ್ಗಟ್ಟಿನಿಂದ ಆಡಿ ಎಂದರಲ್ಲದೆ ಖೋ-ಖೋ ಕ್ರೀಡೆಯ ಕುರಿತಂತೆ ಕೆಲವು ಸಲಹೆಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಪಂದ್ಯಾವಳಿಯಲ್ಲಿ ಜಿಲ್ಲೆಯ ವಿವಿಧ ಶಾಲೆಗಳಿಂದ 13 ಬಾಲಕರ ಹಾಗೂ 10 ಬಾಲಕಿಯರ ತಂಡವೂ ಭಾಗವಹಿದ್ದವು. ಅಣ್ಣಯ್ಯಪ್ಪ ಸ್ಮಾರಕ ವಿದ್ಯಾ ಸಂಸ್ಥೆಯ ಬಾಲಕ ಮತ್ತು ಬಾಲಕಿಯರ ತಂಡವು ಫೈನಲ್‌ನಲ್ಲಿ ರೋಚಕ ಹಣಾಹಣಿ ನಡೆಸಿ ಕಪ್ ತಮ್ಮದಾಗಿಸಿಕೊಂಡರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಸಂಸ್ಥೆಯ ಕಾರ್ಯದರ್ಶಿ ಸುಬ್ಬೇಗೌಡ, ನಿರ್ದೇಶಕಿ ಎಸ್.ಸೌಮ್ಯ, ಆಡಳಿತಾಧಿಕಾರಿ ಬಿ.ಆರ್.ಪಂಚಾಕ್ಷರಿ, ಮುಖ್ಯೋಪಾಧ್ಯಾಯಿನಿ ಕಾಮಾಕ್ಷಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.




ಮೈಸೂರಿನ ಕನಕದಾಸನಗರದಲ್ಲಿರುವ ಸುಪ್ರೀಮ್ ಪಬ್ಲಿಕ್ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಶಾಲೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಎಲ್.ರವೀಂದ್ರಸ್ವಾಮಿ ಧ್ವಜಾರೋಹಣ ನೆರವೇರಿಸಿದರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರೌಢಶಾಲೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಾಸ್ಯನಟ ಮೈಸೂರು ಆನಂದ್ ಅವರನ್ನು ಅಭಿನಂದಿಸಲಾಯಿತು.

ನಂ.ವೆಂಕೋಬರಾವ್ ನಿಧನಕ್ಕೆ ಸಂಸದ ಶ್ರೀನಿವಾಸಪ್ರಸಾದ್ ಸಂತಾಪ



ಮೈಸೂರು, ನ.4-ಮೈಸೂರಿನ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಸಂಸ್ಥಾಪಕ ನಂ.ವೆಂಕೋಬರಾವ್ ಅವರ ನಿಧನಕ್ಕೆ ಚಾಮರಾಜನಗರ ಸಂಸದ ಶ್ರೀನಿವಾಸಪ್ರಸಾದ್ ಸಂತಾಪ ಸೂಚಿಸಿದ್ದಾರೆ.

ವೆಂಕಣ್ಣನವರು ಹಲವು ವರ್ಷ ಕಾಲ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಕ್ರಿಯಾಶೀಲರಾಗಿದ್ದರು. ಆಗಿನಿಂದಲೇ ಅವರ ಮತ್ತು ತಮ್ಮ ಸಂಬಂಧ ಗಾಢವಾಗಿ ಬೆಳೆಯಿತು ಎಂದಿರುವ ಪ್ರಸಾದ್, 1968ರಲ್ಲಿ ಕೊಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ವಿದ್ಯಾರ್ಥಿಪರಿಷತ್ ಸಮ್ಮೇಳನಕ್ಕೆ ನಮ್ಮನ್ನು ಅವರು ಕರೆದೊಯ್ದಿದ್ದರು. ಅವರ ಮುಂದಾಳತ್ವದಲ್ಲಿ ಯುವಕರಿಗಾಗಿ ಹಲವು ಕಾರ್ಯಕ್ರಮಗಳನ್ನು ಮೈಸೂರಿನಲ್ಲಿ ನಡೆಸಿದ್ದೆವು ಎಂದು ಸ್ಮರಿಸಿದ್ದಾರೆ.

'ಶ್ರೀಕಾಂತ' ಎಂಬ ಕಾವ್ಯನಾಮದಿಂದ ಅವರು ಹತ್ತಾರು ಲೇಖನಗಳು ಹಾಗೂ ಅನೇಕ ಸಣ್ಣ ಕಥೆಗಳನ್ನು ಬರೆದಿದ್ದಾರೆ. ಇತಿಹಾಸದ ಅಧ್ಯಾಪಕರಾಗಿದ್ದ ಅವರಿಗೆ ಅಪಾರ ಪಾಂಡಿತ್ಯವಿತ್ತು. ಅವರೊಬ್ಬ ಅತ್ಯುತ್ತಮ ವಾಗ್ಮಿಯಾಗಿದ್ದರು. ಲಯನ್ ಸೇವಾ ಸಂಸ್ಥೆಯಲ್ಲಿ ಕ್ರಿಯಾಶೀಲರಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಜನಪರ ಕಾಳಜಿಯಿಂದ ಅವರು ಬುದ್ಧಿಮಾಂದ್ಯ ಮಕ್ಕಳ ಪಾಲನೆ ಪೋಷಣೆಗಾಗಿ ಮೈತ್ರಿ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ. ಸದಾ ಹಸನ್ಮುಖಿಗಳಾಗಿರುತ್ತಿದ್ದ ಅವರು, ಸಮಾಜಮುಖಿಯಾಗಿ ಚಿಂತಿಸುತ್ತಿದ್ದರು. ಇಂತಹ ಅಪರೂಪದ ವ್ಯಕ್ತಿ ವೆಂಕಣ್ಣನವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸುತ್ತಿರುವುದಾಗಿ ಶ್ರೀನಿವಾಸಪ್ರಸಾದ್ ತಿಳಿಸಿದ್ದಾರೆ.

ಜಿಐ ಟ್ಯಾಗ್‌ನಲ್ಲಿ ಮೈಸೂರು ಸೇರಿ ರಾಜ್ಯದ 46 ಉತ್ಪನ್ನಗಳು

ಮೈಸೂರು ರೇಷ್ಮೆ, ಅಗರಬತ್ತಿ, ಗಂಧದ ಎಣ್ಣೆ, ಸಾಬೂನು, ಸಾಂಪ್ರದಾಯಿಕ ವರ್ಣಚಿತ್ರ, ವೀಳ್ಯದೆಲೆ, ನಂಜನಗೂಡು ರಸಬಾಳೆ, ಮೈಸೂರು ಮಲ್ಲಿಗೆ, ಗಂಜೀಫಾ ಭೌಗೋಳಿಕ ಸೂಚನಾ ಟ್ಯಾಗ್‌ನಲ್ಲಿ

ಎಸ್.ಟಿ. ರವಿಕುಮಾರ್

ಮೈಸೂರು, ನ. 4- ಸಾಂಸ್ಕೃತಿಕ ನಗರಿ ಮೈಸೂರು ಹಲವು ವಿಶೇಷತೆಗಳಿಗೆ ಖ್ಯಾತಿಯಾಗಿದ್ದು, ಕಲೆ, ಸಂಸ್ಕೃತಿ, ಸಂಗೀತ, ಪರಂಪರೆ, ಇತಿಹಾಸ, ಸಂಪ್ರದಾಯ, ಪುರಾತತ್ವದ ಜೊತೆಗೆ ಭೌಗೋಳಿಕ ಸೂಚನಾ ಟ್ಯಾಗ್ ಪಟ್ಟಿಯಲ್ಲಿದ್ದು, ಇಲ್ಲಿನ ಹೆಗ್ಗುರುತುಗಳಾಗಿ ಬಿಂಬಿತವಾಗಿವೆ.

ಆರೋಗ್ಯ, ಶಿಕ್ಷಣ, ಪ್ರವಾಸೋದ್ಯಮ, ಕೈಗಾರಿಕೆ, ಯೋಗ, ಮಾಹಿತಿ ತಂತ್ರಜ್ಞಾನಗಳಲ್ಲೂ ಹಬ್ ಎನಿಸಿರುವ ಮೈಸೂರು ವಿಶ್ವವಿಖ್ಯಾತ ದಸರಾ ಮಹೋತ್ಸವದಿಂದ ಇಲ್ಲಿನ ಕಲೆ, ಸಂಸ್ಕೃತಿ ಪ್ರಪಂಚದಾದ್ಯಂತ ಅನಾವರಣಗೊಳ್ಳುತ್ತಿದ್ದು, ಮೈಸೂರಿನಲ್ಲಿ ಉತ್ಪನ್ನವಾಗುವ ಹಲವು ಉತ್ಪನ್ನಗಳು ಜಿಯೋಗ್ರಾಫಿಕಲ್ ಇಂಡಿಕೇಷನ್ ಟ್ಯಾಗ್ ಪಟ್ಟಿಯಲ್ಲಿ ಸೇರಿರುವುದು ವಿಶೇಷವಾಗಿದೆ.







ಬೆಂಗಳೂರಿನ ಗುಲಾಬಿ ಈರುಳ್ಳಿ, ಗುಳೇದಗುಡ್ಡ ಖಣ, ಉಡುಪಿ ಸೀರೆ, ಮಲಬಾರ್ ಮೆಣಸು, ಕೊಲ್ಲಾಪುರ ಚಪ್ಪಲಿ, ಶಿರಸಿ ಸುಪಾರಿ, ಚಿಕ್ಕಮಗಳೂರಿನ ಅರೇಬಿಕಾ ಕಾಫಿ, ಬಾಬಾಬುಡನ್ ಗಿರಿಯ ಅರೇಬಿಕಾ ಕಾಫಿ, ಗುಲ್ಬರ್ಗ ತೊಗರಿ ಬೇಳೆಯೂ ಸಹ ಭೌಗೋಳಿಕ ಟ್ಯಾಗ್ ಸೂಚಿತ ಪಟ್ಟಿಯಲ್ಲಿ ಸೇರಿವೆ.

ನೋಂದಾಯಿತ ಭೌಗೋಳಿಕ ಗುರುತುಗಳು: ಕರ್ನಾಟಕದ ನೋಂದಾಯಿತ ಭೌಗೋಳಿಕ ಗುರುತುಗಳಲ್ಲಿ ಮೈಸೂರಿನ 10 ಉತ್ಪನ್ನಗಳು ಸೇರಿದಂತೆ ರಾಜ್ಯದ 46 ಉತ್ಪನ್ನಗಳ ಉಗಮ ಸ್ಥಾನವನ್ನು ಜಿಐ ಟ್ಯಾಗ್ ಸೂಚಿಸುತ್ತದೆ. ಮೈಸೂರಿನ ಕರಕುಶಲ ಉತ್ಪನ್ನಗಳಾದ ರೇಷ್ಮೆ, ರೋಸ್‌ವುಡ್, ಇನ್‌ಲೇ, ಕಸೂತಿ, ಸಾಂಪ್ರದಾಯಿಕ ವರ್ಣಚಿತ್ರ, ಗಂಜೀಫಾ ಗಾರ್ಡ್ಸ್, ಅಗರಬತ್ತಿ, ಗಂಧದ ಎಣ್ಣೆ ಗಂಧದ ಸಾಬೂನು, ಕೃಷಿ ಉತ್ಪನ್ನವಾದ ಮೈಸೂರು ವೀಳ್ಯೆದೆಲೆ, ನಂಜನಗೂಡು ರಸಬಾಳೆ, ಮೈಸೂರು ಮಲ್ಲಿಗೆ, ಕೊಡಗಿನ ಕಿತ್ತಳೆ ಭೌಗೋಳಿಕ ಗುರುತುಗಳೆಂದು ಸೂಚಿತವಾಗಿವೆ.

ಬೀದರ್‌ನ ಬಿದರಿ ಕಲೆ, ಚನ್ನಪಟ್ಟಣದ ಬೊಂಬೆ, ಉಡುಪಿ ಮಲ್ಲಿಗೆ, ಹಡಗಲಿ ಮಲ್ಲಿಗೆ, ಇಳಕಲ್ ಸೀರೆ, ನವಲಗುಂದ ಜಮಖಾನ, ಮೊಳಕಾಲ್ಮೂರು ಸೀರೆ, ಮಾನ್ಸೂನ್ ಮಲಬಾರ್ ಅರೇಬಿಕಾ ಕಾಫಿ, ರೊಬುಸ್ಟಾ ಕಾಫಿ, ಕೂರ್ಗ್‌ನ ಹಸಿರು ಏಲಕ್ಕಿ, ಧಾರವಾಡ ಪೇಡಾ, ದೇವನಹಳ್ಳಿ ಚಕೋತಾ, ಅಪ್ಪೆಮಿಡಿ ಮಾವು, ಕಮಲಾಪುರ ಕೆಂಪು ಬಾಳೆ, ಸಂಡೂರು ಲಂಬಾಣಿ ಕಸೂತಿ, ಬ್ಯಾಡಗಿ ಮೆಣಸಿನಕಾಯಿ, ಉಡುಪಿಯ ಮಟ್ಟು ಬದನೆ, ಕಿನ್ಹಾಳ ಬೊಂಬೆ, ಬೆಂಗಳೂರಿನ ನೀಲಿ ದ್ರಾಕ್ಷಿಗಳು ರಾಜ್ಯದ ಇತರ ಜಿಲ್ಲೆಗಳ ಕೃಷಿ, ಕರಕುಶಲ ಆಹಾರ ಉತ್ಪನ್ನಗಳ ವಿಭಾಗದಲ್ಲಿ ಖ್ಯಾತಿ ಪಡೆದಿವೆ.

ಜಿಯೋಗ್ರಾಫಿಕಲ್ ಸೂಚನಾ ಟ್ಯಾಗ್: ಜಿಐ ಟ್ಯಾಗ್ ಎಂದರೆ ಭೌಗೋಳಿಕ ಸೂಚನಾ ಅಂಶವಾಗಿದ್ದು, ಒಂದು ಉತ್ಪನ್ನದ ಭೌಗೋಳಿಕ ವಿಶೇಷತೆಯನ್ನು ಮಾನ್ಯ ಮಾಡಲು ಜಿಐ ಟ್ಯಾಗ್ ನೀಡಲಾಗುತ್ತದೆ. ಒಂದು ಉತ್ಪನ್ನದ ಮೂಲ ಯಾವ ಪ್ರದೇಶದ್ದು ಎಂಬುದನ್ನು ಅದು ತಿಳಿಸುತ್ತದೆ.

ಭಾರತದಲ್ಲಿ ಅಂತಹ 400ಕ್ಕೂ ಹೆಚ್ಚು ಉತ್ಪನ್ನಗಳಿಗೆ ಜಿಐ ಟ್ಯಾಗ್ ನೀಡಲಾಗಿದೆ. ಕರ್ನಾಟಕ ಸೇರಿದಂತೆ ದಕ್ಷಿಣ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳು ಅತೀ ಹೆಚ್ಚು ಜಿಐ ಟ್ಯಾಗ್ ಹೊಂದಿರುವುದು ವಿಶೇಷ. ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲ್ಯೂಟಿಓ)ಯು ಅಂತರರಾಷ್ಟ್ರೀಯ ಬೌದ್ಧಿಕ ಹಕ್ಕುಗಳನ್ನು ಕಾಪಾಡಲು ಇಂತಹದೊಂದು ವ್ಯವಸ್ಥೆಯನ್ನು ರೂಪಿಸಿದೆ.

1999ರಲ್ಲಿ ಸರಕುಗಳ ನೋಂದಣಿ ಮತ್ತು ರಕ್ಷಣೆಗೆ ಭೌಗೋಳಿಕ ಸೂಚನೆ ಕಾಯ್ದೆ (Geographical Indications of Goods-Registration and Protection Act 1999) ಯನ್ನು ರೂಪಿಸಲಾಗಿದೆ. ನಮ್ಮ ದೇಶದಲ್ಲಿ 2003ರ ಸೆಪ್ಟೆಂಬರ್ ಮಾಹೆಯಲ್ಲಿ ಈ ಕಾಯ್ದೆ ಜಾರಿಗೆ ಬಂದಿದ್ದು, ಕೃಷಿ, ಕರಕುಶಲ, ಆಹಾರ ವಸ್ತು, ಔದ್ಯಮಿಕ ಉತ್ಪನ್ನಗಳಿಗೆ ಜಿಐ ಟ್ಯಾಗ್ ನೀಡಲಾಗಿದೆ.

ಒಂದು ಉತ್ಪನ್ನದ ಹಕ್ಕು ಮತ್ತು ಪೇಟೆಂಟ್ ಅನ್ನು ರಕ್ಷಿಸಲು ಈ ಜಿಐ ಟ್ಯಾಗ್ ಸಹಾಯವಾಗುತ್ತದೆ. ಇಡೀ ವಿಶ್ವದಲ್ಲಿ ಡಾರ್ಜಿಲಿಂಗ್ ಟೀ ಭಾರತದಲ್ಲಿ ಈ ಟ್ಯಾಗ್ ಪಡೆದ ಮೊದಲ ಉತ್ಪನ್ನ ಎಂಬ ಖ್ಯಾತಿಗೆ ಪಾತ್ರವಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ



ಮೈಸೂರು,ನ.4(ಆರ್‌ಕೆ)-ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ನ.5) ಮೈಸೂರಿಗೆ ಆಗಮಿಸುವರು. ಬೆಂಗಳೂರಿಂದ ವಿಶೇಷ ವಿಮಾನದಲ್ಲಿ ಭಾನುವಾರ ಅಪರಾಹ್ನ 12 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಮುಖ್ಯಮಂತ್ರಿಗಳು, ಮಧ್ಯಾಹ್ನ 12.20 ಗಂಟೆಗೆ ಜಿಲ್ಲೆಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಮಧ್ಯಾಹ್ನದ ಭೋಜನ ಸ್ವೀಕರಿಸುವರು. ಸಂಜೆ 4.15 ಗಂಟೆಗೆ ರಸ್ತೆ ಮೂಲಕ ಕಾರಿನಲ್ಲಿ ಬೆಂಗಳೂರಿಗೆ ಸಿದ್ದರಾಮಯ್ಯ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಕೆ.ಚಿರಂಜೀವಿ ತಿಳಿಸಿದ್ದಾರೆ.

ಸಿದ್ದರಾಮಯ್ಯರು ಬದಲಾಗಿದ್ದಾರೆ!



ಬೆಂಗಳೂರು: ಮೂಲತಃ ಸಮಾಜವಾದಿ ಹಿನ್ನೆಲೆಯವರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದನಿ ಪ್ರಸ್ತುತ ಬದಲಾಗಿದೆ. ಸುತ್ತಲೂ ಇರುವವರಿಂದ ಅವರು ಪ್ರಭಾವಿತರಾಗಿರಬಹುದು ಎಂದು ಕಾಂಗ್ರೆಸ್ ನಾಯಕ ಬಿ.ಎಲ್.ಶಂಕರ್ ಹೇಳಿದರು. ಹಿಂದ್ ಮಜ್ದೂರ್ ಕಿಸಾನ್ ಪಂಚಾಯತ್ ಅಧ್ಯಕ್ಷ ಮೈಕಲ್ ಫರ್ನಾಂಡೀಸ್ ಅವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ 'ಮೈಕಲ್ -90' ಸ್ಮರಣ ಸಂಚಿಕೆ ಬಿಡುಗಡೆ ಮಾಡಿ, ಮಾತನಾಡಿದರು. ರೈತ ನಾಯಕ ಪ್ರೊ.ನಂಜುಂಡಸ್ವಾಮಿ, ಫರ್ನಾಂಡಿಸ್ ಅವರ ಗರಡಿಯಲ್ಲಿ ಬೆಳೆದ ಸಿದ್ದರಾಮಯ್ಯ, ಸಮಾಜವಾದಿ ಹಿನ್ನೆಲೆಯಲ್ಲೇ ರಾಜಕೀಯ ನೆಲೆ ಕಂಡುಕೊಂಡವರು. ಈಗ ಅವರ ಮಾತು ಮೊದಲಿನಂತಿಲ್ಲ. ರಾಜಕೀಯ ಎಲ್ಲವನ್ನೂ ಕಲಿಸಿದೆ. ಸ್ಪಂದನೆ ಇಲ್ಲದ ಸ್ಥಿತಿಗೆ ತಲುಪಿದ್ದಾರೆ ಎಂದರು.

ಮೈಸೂರಲ್ಲಿ ಸಾಧಾರಣ ಮಳೆ



ಮೈಸೂರು,ನ.4(ಎಸ್‌ಬಿಡಿ)- ಮೈಸೂರು ಹಾಗೂ ಸುತ್ತಮುತ್ತ ಶನಿವಾರ ಸಾಧಾರಣ ಮಳೆ ಸುರಿಯಿತು. ಶುಕ್ರವಾರ ತಡರಾತ್ರಿ ಕೆಲಹೊತ್ತು ಜೋರು ಮಳೆಯಾಗಿತ್ತು. ಶನಿವಾರ ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತಾದರೂ ಮಳೆಯಾಗಿರಲಿಲ್ಲ. ಆದರೆ ಸಂಜೆ 4 ಗಂಟೆ ಸಮಯದಲ್ಲಿ ಕಾರ್ಮೋಡ ಕವಿದು ಕೆಲವೆಡೆ ಜೋರು ಮಳೆಯಾದರೆ ಮತ್ತಷ್ಟು ಕಡೆ ಸಾಧಾರಣ ಮಳೆಯಾಯಿತು. ತಡರಾತ್ರಿವರೆಗೂ ಬಿಟ್ಟು ಬಿಟ್ಟು ಮಳೆ ಸುರಿದಿದ್ದರಿಂದ ವಾತಾವರಣ ಸ್ವಲ್ಪ ಮಟ್ಟಿಗೆ ತಂಪಾಯಿತು.

ಜಿಲ್ಲೆಯ ಕೆಲವೆಡೆ ಕಳೆದ ಮೂರ್ನಾಲ್ಕು ದಿನಗಳಿಂದ ಗುಡುಗು ಸಹಿತ ಮಳೆಯಾಗಿದೆ. ಹೆಚ್.ಡಿ.ಕೋಟೆ ತಾಲೂಕು ಬೆಳಗನಹಳ್ಳಿಯಲ್ಲಿ ಸಿಡಿಲು ಬಡಿದು 2 ಹಸುಗಳು ಶುಕ್ರವಾರ ರಾತ್ರಿ ಸಾವನ್ನಪ್ಪಿವೆ. ಹವಾಮಾನ ಇಲಾಖೆ ಪ್ರಕಾರ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ನ.8 ರವರೆಗೂ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ. ಭಾನುವಾರ ಮತ್ತು ಸೋಮವಾರ ಕೆಲವೆಡೆ ಜೋರು ಮಳೆಯಾಗಬಹುದು ಎನ್ನಲಾಗಿದೆ.

ಶ್ರೀ ಜಯಚಾಮರಾಜೇಂದ್ರ ಪ್ರಶಸ್ತಿ ಪ್ರದಾನ



ಮೈಸೂರು, ನ.4(ಜಿಎ)-ಮೈಸೂರು ಮಹಾರಾಜರ ಕೊಡುಗೆ ಎಲ್ಲಾ ಕಡೆಯೂ ಪಸರಿಸಿದ್ದು, ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದೇ ಮೈಸೂರು ಒಡೆಯರು ಎಂದು ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ತಿಳಿಸಿದರು.

ನಗರದ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರು ಮಹಾರಾಜರ ಸ್ಮರಣಾರ್ಥ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಶ್ರೀ ಜಯಚಾಮ ರಾಜೇಂದ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ಅವರು, ಮೈಸೂರಲ್ಲಿ ನಾವು ಜನಿಸಿರುವುದು ಹೆಮ್ಮೆಯ ವಿಚಾರ. ನಮ್ಮ ರಾಜರು ನೀಡಿರುವಷ್ಟು ಕೊಡುಗೆ ದೇಶದಲ್ಲಿಯೇ ಬೇರೆ ಯಾವ ರಾಜರೂ ನೀಡಿಲ್ಲ. ಅವರ ಕೊಡುಗೆಗಳು ಅವಿಸ್ಮರಣೀಯವಾದವು. ಇಂದು ಭಿಕ್ಷುಕರ ಪುನರ್ ವಸತಿ ಬಗ್ಗೆ ಮಾಡುತ್ತೇವೆ ಆದರೆ, ಅವರು ತಮ್ಮ ಆಡಳಿತಾವಧಿಯಲ್ಲಿಯೇ ಬೆಂಗಳೂರಿನಲ್ಲಿ ಭಿಕ್ಷುಕರ ಪುನರ್‌ವಸತಿ ಕೇಂದ್ರ ತೆರೆದು ಮಾದರಿಯಾಗಿದ್ದರು ಎಂದು ಮಹಾರಾಜರ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಿಕಾ ಛಾಯಾಗ್ರಾಹಕ ಟಿ.ಅನೂಪ್‌ರಾವ್, ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ.ರೇಖಾ ಅರುಣ್, ಚರ್ಮರೋಗ ತಜ್ಞ ಡಾ.ಸುರೇಂದ್ರನ್, ಸಾಹಿತಿ ಸೌಗಂಧಿಕ, ಶಿಕ್ಷಣಾಧಿಕಾರಿ ಶಿವಕುಮಾರ್, ಗಾಯಕ ಗುರುರಾಜ್, ಸಮಾಜ ಸೇವಕಿ ಭವಾನಿ, ವೀರಗಾಸೆ ಕಲಾವಿದ ಅಂಬಲೆ ಶಿವಣ್ಣ, ಕರ್ನಾಟಕ ರಾಜ್ಯ ಅರಸು ಸಂಘದ ಉಪಾಧ್ಯಕ್ಷ ಹೆಚ್.ಡಿ.ನಂಜರಾಜೇ ಅರಸ್ ಅವರುಗಳಿಗೆ ಶ್ರೀ ಜಯಚಾಮರಾಜೇಂದ್ರ ಪ್ರಶಸ್ತಿ ಪ್ರಧಾನ ಮಾಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕೆಎಸ್‌ಓಯು ಸಹಾಯಕ ಪ್ರಾಧ್ಯಾಪಕ ಶೈಲೇಶ್ ರಾಜೇ ಅರಸ್, ಕೆಪಿಸಿಸಿ ಕಾರ್ಯದರ್ಶಿ ಗುರುಪಾದ ಸ್ವಾಮಿ, ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಮತ್ತು ನಾಲಾಬೀದಿ ರವಿ ಸೇರಿದಂತೆ ವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜೆಡಿಎಸ್‌ನಿಂದಲೂ ಬರ ಅಧ್ಯಯನ ತಂಡ ರಚನೆ

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ಬರ ಅಧ್ಯಯನ ತಂಡ ರಚಿಸಿ ಕಾರ್ಯೋನ್ಮುಖವಾದ ಬೆನ್ನಲ್ಲೇ ಜೆಡಿಎಸ್ ಕೂಡ 31 ಜಿಲ್ಲೆಗಳಿಗೆ 24 ಮಂದಿಯ ಬರ ಅಧ್ಯಯನ ತಂಡವನ್ನು ರಚಿಸಿದೆ. ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಮಾಜಿ ಸಿಎಂ ಕುಮಾರಸ್ವಾಮಿ, ಬರ ಅಧ್ಯಯನ ತಂಡದ ಸದಸ್ಯರ ಪಟ್ಟಿ ಬಿಡುಗಡೆ ಮಾಡಿದರು. ಆದರೆ ಯಾವ ದಿನಾಂಕ ದಿಂದ ಅಧ್ಯಯನ ಆರಂಭಿಸಲಿದೆ ಎಂಬುದರ ಬಗ್ಗೆ ತಿಳಿಸಿಲ್ಲ. ಮೈಸೂರಿಗೆ ಶಾಸಕರಾದ ಜಿ.ಟಿ.ದೇವೇಗೌಡ, ಮಂಜುನಾಥ್, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಕೆ.ಮಹದೇವ್, ಅಶ್ವಿನ್‌ಕುಮಾರ್; ಮಂಡ್ಯ ಜಿಲ್ಲೆಗೆ ಮಾಜಿ ಶಾಸಕರಾದ ಡಿ.ಸಿ.ತಮ್ಮಣ್ಣ ರವೀಂದ್ರ ಶ್ರೀಕಂಠಯ್ಯ, ಸುರೇಶ್‌ಗೌಡ, ಜಿಲ್ಲಾಧ್ಯಕ್ಷ ರಮೇಶ್‌ಗೌಡ; ಹಾಸನಕ್ಕೆ ಶಾಸಕರಾದ ಎ.ಮಂಜು, ಸಿ.ಎನ್.ಬಾಲಕೃಷ್ಣ, ಸ್ವರೂಪ್; ಶಿವಮೊಗ್ಗಗೆ ಶಾರದಾ ಪಿ.ನಾಯಕ್, ಪ್ರಸನ್ನಕುಮಾರ್; ಚಿಕ್ಕಮಗಳೂರಿಗೆ ವೈಎಸ್.ವಿ.ದತ್ತ, ಭೋಜೇಗೌಡ, ಸುಧಾಕರಶೆಟ್ಟಿ; ಬೆಂಗಳೂರಿಗೆ ರಮೇಶ್ ಗೌಡ, ದಾಸರಹಳ್ಳಿ ಮಂಜುನಾಥ್, ಶರವಣ ಅವರನ್ನು ನೇಮಿಸಲಾಗಿದೆ.



ಕರ್ನಾಟಕ ಸಂಗೀತ ವಿವಿಯಿಂದ ಗೌರವ ಡಾಕ್ಟರೇಟ್ ಪಡೆದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳನ್ನು ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಅಭಿನಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30ರಿಂದ.

■ **ಹೆಚ್.ವಿ.ರಾಜೀವ್ ಸ್ನೇಹ ಬಳಗ :** ಚಿತ್ರಕಲಾ ಸ್ಪರ್ಧೆ, ಸ್ಥಳ: ಸುಮ ಸೋಪಾನ ಉದ್ಯಾನವನ, ವಿಶ್ವಮಾನವ ಜೋಡಿ ರಸ್ತೆ, ಬೆಳಗ್ಗೆ 9.30ರಿಂದ.

■ **ಕರ್ನಾಟಕ ಅಂಚೆ ಮತ್ತು ತಂತಿ ಇಲಾಖಾ ಪಿಂಚಣಿದಾರರ ಸಂಘ, ಭಾರತೀಯ ಕಾಫಿ ಮಂಡಳಿ :** ಜೀವನ ಪ್ರಮಾಣ ಪತ್ರ ದೃಢೀಕರಣ ಕಾರ್ಯಕ್ರಮ, ಸ್ಥಳ: ಸದ್ವಿದ್ಯಾ ಶೈಕ್ಷಣಿಕ ಸಂಸ್ಥೆ, ಬೆಳಗ್ಗೆ 9.30ರಿಂದ.

■ **ಹೊಂಬಾಳೆ ಗೃಹ ನಿರ್ಮಾಣ ಸಹಕಾರ ಸಂಘ :** ಉದ್ಘಾಟನಾ ಕಾರ್ಯಕ್ರಮ, ಸ್ಥಳ: ಸರಸ್ವತಿಪುರಂ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.

■ **ಸಪ್ನ ಬುಕ್ ಹೌಸ್ :** 68ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ರಿಯಾಯಿತಿ ಕನ್ನಡ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸಪ್ನ ಬುಕ್ ಹೌಸ್, ದೇವರಾಜ ಮೊಹಲ್ಲಾ, ಬೆಳಗ್ಗೆ 10 ರಿಂದ.


■ **ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ :** ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಸ್ಥಳ: ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ, ಬೆಳಗ್ಗೆ 10ಕ್ಕೆ.

■ **ಮೈ ವೇದಿಕೆ ತಂಡ :** ದಸರಾ ಹಾಗೂ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶಾಲಾ ಮಕ್ಕಳಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಮೈಸೂರು ಸ್ಪೋರ್ಟ್ಸ್ ಪೆವಿಲಿಯನ್ ಗ್ರೌಂಡ್, ಬೆಳಗ್ಗೆ 10ಕ್ಕೆ

■ **ಕೈವಾರ ಯೋಗಿ ನಾರೇಯಣ ಯತೀಂದ್ರರ ಬಲಿಜ (ಬಣಜಿಗ) ಸಂಘ :** ಸತ್ಯನಾರಾಯಣ ಪೂಜಾ ಮಹೋತ್ಸವ, ಸ್ಥಳ: ದುರ್ಗಾ ಪರಮೇಶ್ವರಿ ದೇವಸ್ಥಾನದ ಆವರಣ, ಇಟ್ಟಿಗೆಗೂಡು, ಬೆಳಗ್ಗೆ 10ಕ್ಕೆ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸೌಗಂಧಿಕಾ ಪ್ರಕಾಶನ, ನಂಜನಗೂಡು:** ಕವಯಿತ್ರಿ ಹಾಗೂ ಸಂಘಟಕಿ ಡಾ.ಸೌಗಂಧಿಕಾ ವಿ.ಜೋಯಿಸ್ ಅವರ ಸಪ್ತದಶಿ ಕೃತಿ ಲೋಕಾರ್ಪಣೆ ಹಾಗೂ ಕವಿಗೋಷ್ಠಿ, ಉದ್ಘಾಟನೆ: ಕವಿ ಸಿದ್ದಲಿಂಗಪ್ಪ ಬೀಳಗಿ, ಅಧ್ಯಕ್ಷತೆ: ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್, ಕೃತಿ ಪರಿಚಯ: ಡಾ.ಮಲ್ಲಿನಾಥ ತಳವಾರ, ಮುಖ್ಯ ಅತಿಥಿಗಳು: ಎಡಿಸಿ ಶಿವರಾಜು, ಹೇಮಗಂಗಾ ಪ್ರತಿಷ್ಠಾನ ಅಧ್ಯಕ್ಷೆ ಎ.ಹೇಮಗಂಗಾ, ಡಾ.ಸೌಗಂಧಿಕಾ ವಿ.ಜೋಯಿಸ್, ಸಿ.ವಾಣಿ ರಾಘವೇಂದ್ರ, ಬಿ.ಶೋಭಾ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಬೆಳಗ್ಗೆ 10ಕ್ಕೆ

■ **ಡಿಎನ್ಕೆ ಸ್ನೇಹ ಬಳಗ:** ಡಿ.ಎನ್.ಕೃಷ್ಣಮೂರ್ತಿ ಅವರ ಮಹಾನದಿ, ನ್ಯಾಯ ದರ್ಶನ ಮತ್ತು ಪರಿಕ್ರಮಣ ಕಾದಂಬರಿಗಳ ಬಿಡುಗಡೆ ಮತ್ತು ಡಿಎನ್ಕೆ 60ರ ಸಂಭ್ರಮ ಅಭಿನಂದನಾ ಸಮಾರಂಭ, ಉದ್ಘಾಟನೆ: ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಅಧ್ಯಕ್ಷತೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ, ಮಹಾನದಿ ಕೃತಿ ಬಿಡುಗಡೆ: ಹಿರಿಯ ಸಾಹಿತಿ ಡಾ.ಸಿಪಿಕೆ, ನ್ಯಾಯದರ್ಶನ ಕೃತಿ ಬಿಡುಗಡೆ: ಸಾಹಿತಿ ಬನ್ನೂರು ಕೆ.ರಾಜು, ಪರಿಕ್ರಮಣ ಕೃತಿ ಬಿಡುಗಡೆ: ಸಾಹಿತಿ ಎಸ್.ಶಿವರಾಜಪ್ಪ ಉಪಸ್ಥಿತರು: ಶಾಸಕ ಶ್ರೀವತ್ಸ, ಸಮಾಜ ಸೇವಕ ಎಸ್.ಆರ್.ಗೋಪಾಲರಾವ್, ಸಾಹಿತಿ ಡಿ.ಎನ್.ಕೃಷ್ಣಮೂರ್ತಿ, ಮಹಾರಾಜ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಡಾ. ಮುರಳಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ನಂ. ಶ್ರೀಕಂಠಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯ ಶಂಕರನಾರಾಯಣ, ಸ್ಥಳ: ಗೋಪಾಲಸ್ವಾಮಿ ಪಿಯು ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ



ಇಂದಿನ ಪಂಚಾಂಗ

5.11.2023 ಭಾನುವಾರ, ಮಳೆ ನಕ್ಷತ್ರ: ಸ್ವಾತಿ, 25.10.2023ರಿಂದ 06.11.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ವನಮಾಲಿ ಚಾರಿಟೆಬಲ್ ಟ್ರಸ್ಟ್:** ಶ್ರೀ ವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿ ಮತ್ತು ಪದ್ಮಶ್ರೀ ಡಾ.ಮತ್ತೂರು ಕೃಷ್ಣಮೂರ್ತಿ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಹಿರಿಯ ವಿದ್ವಾಂಸರಾದ ನಾಡೋಜ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ಶ್ರೀ ವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿ ಪುರಸ್ಕೃತರು: ಡಾ.ವಸುಂಧರಾ ಕವಲಿ ಫಿಲಿಯೋಜಾ, ಡಾ.ಪಿಯರ್ರ ಸಿಲ್ವನ್ ಫಿಲಿಯೋಜಾ, ಪದ್ಮಶ್ರೀ ಡಾ.ಮತ್ತೂರು ಕೃಷ್ಣಮೂರ್ತಿ ಸಮಾಜ ಸೇವಾ ಪ್ರಶಸ್ತಿ ಪುರಸ್ಕೃತರು: ಟಿ.ರಾಮಾಂಜನೇಯ ಮತ್ತು ಕೆ.ಪಿ.ಜಯ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ

■ **ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆ, ಜೈನ್ ಮಿಲನ್ ಚಾರಿಟೆಬಲ್ ಟ್ರಸ್ಟ್, ನಾರಾಯಣ ಸೇವಾ ಸಂಸ್ಥಾನ :** ಮಾಡ್ಯುಲರ್ ಕೃತಕ ಅಂಗಗಳು ಕೈ ಮತ್ತು ಕಾಲಿನ ಅಂಗಗಳ ಮಾಪನ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಉದ್ಘಾಟನೆ : ಲಯನ್ ಡಾ. ಎನ್. ಕೃಷ್ಣೇಗೌಡ, ಅಧ್ಯಕ್ಷತೆ : ಲಯನ್ ಹೇಮಂತ್‌ಕುಮಾರ್, ಸ್ಥಳ: ನಟರಾಜ ಕಲ್ಯಾಣ ಮಂಟಪ, ಶಂಕರ ಮಠದ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ :** ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ಮಹೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಎನ್.ಜಯರಾವ್, ಅಧ್ಯಕ್ಷತೆ: ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಲ್.ರೇವಣ್ಣಸಿದ್ದಯ್ಯ, ಮುಖ್ಯ ಅತಿಥಿಗಳು: ಜಿಲ್ಲಾ ಪೊಲೀಸ್ ಅಧೀಕ್ಷಕಿ ಉಮಾ ಪ್ರಶಾಂತ್, ನುಡಿನಮನ : ಪ್ರಾಧ್ಯಾಪಕಿ ಡಾ.ಮಹೇಶ್ವರಿ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯದ ಆವರಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಉದಯ್ ಇಟಗಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ- ಸೈಬರ್ ಮಿತ್ರ-ಸೈಬರ್ ಸುರಕ್ಷೆ: ವಾರದ ಮಾತು, ಪ್ರಸ್ತುತಿ-ಸತೀಶ್ ವಿ.ಪ್ರಾಯೋಜಕರು cybermitra.in ಮೈಸೂರು, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ-ಜಿ.ಕೆ.ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ-ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ, 10.00 ಕೇಳಿ ಗಿಳಿಗಳೇ ಕಥೇ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ, 12.30 ದೇವರನಾಮ-ಬಾಂಬೆ ಎಸ್.ಜಯಶ್ರೀ, ಮಾಧವಗುಡಿ, 12.45 ಜನಪದ ಸಂಗೀತ-ಯರಗನಹಳ್ಳಿ ಸಣ್ಣಮ್ಮ ಮತ್ತು ಸಂಗಡಿಗರು, 1.30 ಕೋಲ್ಕತ್ತಾದಲ್ಲಿ ನಡೆಯಲಿರುವ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವೆ ನಡೆಯಲಿರುವ ಏಕದಿನ ವಿಶ್ವ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್ :** ಕನ್ನಡ ಹಬ್ಬ, ಬೆಳಗ್ಗೆ 10.30 ರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ, ಬೆಳಗ್ಗೆ 10.45ಕ್ಕೆ ಚಿತ್ರಕಲಾ ಸ್ಪರ್ಧೆ, ಮಧ್ಯಾಹ್ನ 2.30ರಿಂದ ಛಟ್ ಅಂತ ಹೇಳಿ-ಅಂತಿಮ ಹಂತ, ಚಂದನ ವಾಹಿನಿಯ ಡಾ.ನಾ.ಸೋಮೇಶ್ವರ್ ನೇತೃತ್ವದಲ್ಲಿ, ಸಂಜೆ 5.30ಕ್ಕೆ ಕನ್ನಡ ಸಂವಾದ, ವಿಷಯ : ಕನ್ನಡವೆಂಬ ಭಾರತೀಯ ಭಾಷೆ, ಉಪಸ್ಥಿತರು : ಭಾಷಾ ಚಿಂತಕ ನಾರಾಯಣ ಶೇವಿರೆ, ಪ್ರಾಧ್ಯಾಪಕ ಜಿ.ಎಸ್. ದೇವರಾಜೇಗೌಡ, ರಾತ್ರಿ 7ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ : ಕಲಾಮಂದಿರ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ:** ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಲ್.ರೇವಣ್ಣಸಿದ್ದಯ್ಯ, ಸ್ಥಳ: ವಿದ್ಯಾರ್ಥಿನಿಲಯದ ಆವರಣ, ಮಧ್ಯಾಹ್ನ 3ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಹರಿದಾಸ ಜೀವನ ಚರಿತ್ರೆ ಆಧರಿಸಿ ಚಿತ್ರಿಸಿರುವ ಶ್ರೀ ಜಗನ್ನಾಥದಾಸರು, ಶ್ರೀ ಪ್ರಸನ್ನ ವೆಂಕಟ ದಾಸರು ಚಲನಚಿತ್ರ ಪ್ರದರ್ಶನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ ಮತ್ತು ಸಂಜೆ 5ಕ್ಕೆ.

■ **ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ :** ಕು. ಐನ ಸೋಮಯ್ಯ ಮೂವೇರ ಮತ್ತು ಕು. ಇಪುರು ಲಕ್ಷ್ಮೀ ಕಾರ್ತಿಕ ಅವರಿಂದ ಭರತನಾಟ್ಯ ಕಿಂಕಿಣಿ ಪೂಜಾ, ಉದ್ಘಾಟನೆ: ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಸಿಗ್ಮಾ ಆಸ್ಪತ್ರೆ ನಿರ್ದೇಶಕರಾದ ಡಾ.ರಾಜೇಶ್ವರಿ ಮಾದಪ್ಪ, ಶ್ರೀ ಉಮಾ ಮಹೇಶ್ವರ ನೃತ್ಯ ಕಲಾಕ್ಷೇತ್ರ ನಿರ್ದೇಶಕರಾದ ವಿದುಷಿ ಟಿ.ಎಸ್. ಶ್ರೀ ಲಕ್ಷ್ಮೀ ಕುಮಾರ್, ಅಧ್ಯಕ್ಷತೆ : ಕರ್ನಾಟಕ ಸಂಘ, ಮಂಡ್ಯ ಅಧ್ಯಕ್ಷ ಪ್ರೊ. ಬಿ. ಜಯಪ್ರಕಾಶ್‌ಗೌಡ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಆರ್ಟ್ ಆಫ್ ಲಿವಿಂಗ್ :** ಧ್ಯಾನದ ಪರಿಚಯ ಕಾರ್ಯಾಗಾರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಸಂಜೆ 5.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಗಾನಭಾರತೀ:** ವಿದುಷಿ ಧರಿತ್ರಿ ಆನಂದರಾವ್ ಅವರಿಂದ ಕಾವ್ಯ ವಾಚನ, ವ್ಯಾಖ್ಯಾನ: ಕಬ್ಬಿನಾಲೆ ವಸಂತ ಭಾರದ್ವಾಜ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ:** ವಸುಂಧರೋತ್ಸವ-2023, ರಾಷ್ಟ್ರ ಮಟ್ಟದ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಹಬ್ಬ, ಸಂಜೆ 6.15 ರಿಂದ ವಿದ್ವಾನ್ ಸಂದೇಶ್ ಭಾರ್ಗವ್ ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ಕು. ಡಾ.ಸಂಯುಕ್ತ ಅರಸ್ ಅವರಿಂದ ಭರತನಾಟ್ಯ, ಗೌರವ ಸಮರ್ಪಣೆ: ರಾಜವಂಶಸ್ಥರಾದ ಕುಮಾರಿ ಕಾಮಾಕ್ಷಿದೇವಿ, ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಶ್ರೀಧರರಾಜೇ ಅರಸ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ.

■ **ಜಿಪಿಐಇಆರ್ ರಂಗ ತಂಡ :** ಜಿಪಿಐಇಆರ್ ತಂಡದಿಂದ ಡಾ. ಹೆಚ್.ಎಸ್. ಶಿವಪ್ರಕಾಶ್ ರಚಿಸಿರುವ ಮಂಟೇಸ್ವಾಮಿ ಕಥಾ ಪ್ರಸಂಗ ನಾಟಕ ಪ್ರದರ್ಶನ, ನಿರ್ದೇಶನ : ಮೈಮ್ ರಮೇಶ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ.

■ **ರಂಗಾಯಣ :** ಹವ್ಯಾಸಿ ರಂಗ ತರಬೇತಿ ಕಲಾವಿದರಿಂದ ನಾಯಿಕತೆ ನಾಟಕ ಪ್ರದರ್ಶನ, ನಿರ್ದೇಶನ : ಸಂತೋಷ್ ಕುಮಾರ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ನಟನ ರಂಗ ಶಾಲೆ :** ನಟನ ರಂಗ ಶಾಲೆ ಕಲಾವಿದರಿಂದ 'ಪ್ರಾಜೆಕ್ಟ್ ಡಾರ್ಲಿಂಗ್' ನಾಟಕ ಪ್ರದರ್ಶನ, ನಿರ್ದೇಶನ : ಶರಣ್ಯ ರಾಮ್‌ಪ್ರಕಾಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ :** ವಿದ್ವಾನ್ ಬಿ.ಜಿ. ಅನಂತ ಅವರಿಂದ ವೇದ ಕುರಿತು ಪ್ರವಚನ, ಸ್ಥಳ: ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಲಕ್ಷ್ಮೀಪುರಂ, ಸಂಜೆ 7ಕ್ಕೆ.

ಬಸ್ತಿ ದೇವರಗುಡಿಯಲ್ಲಿಂದು, ಮೂಗೂರು

■ **ಮೂಗೂರು ಬಸ್ತಿ ದೇವರಗುಡಿ ದಿಗಂಬರ ಜೈನ ಸೇವಾ ಟ್ರಸ್ಟ್ :** ಭಗವಾನ್ ಶ್ರೀ ಪಾರ್ಶ್ವನಾಥಸ್ವಾಮಿ ಬಸದಿ ಗುದ್ದಲಿಪೂಜಾ ಕಾರ್ಯಕ್ರಮ, ಸಾನ್ನಿಧ್ಯ : ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಶೀಲಾ ಅನಂತರಾಜ, ಮುಖ್ಯ ಅತಿಥಿಗಳು : ಮೂಗೂರು ಗ್ರಾಪಂ ಅಧ್ಯಕ್ಷ ಶಿವಣ್ಣ, ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ನಿರ್ದೇಶಕ ಹೆಚ್.ಸಿ. ನೇಮಿರಾಜ್, ಸ್ಥಳ: ಬಸ್ತಿ ದೇವರಗುಡಿ, ಬೆಳಗ್ಗೆ 10ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 5 ಭಾನುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 199 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "(ಕೆಲವು ಔಷಧಿ ಬರೆದುಕೊಟ್ಟು) ಮುಂದಿನ ಬಾರಿ ನಿಮಗೆ ನೆಗಡಿಯಾದಾಗ ತುಸು ವಿಸ್ಕಿ ಕುಡಿಯಿರಿ

ರೋಗಿ : "ಯಾಕೆ ಡಾಕ್ಟ್ರೆ ವಿಸ್ಕಿ ಕುಡಿದರೆ ನೆಗಡಿ ವಾಸಿಯಾಗುತ್ತದೆಯೇ?

ಡಾಕ್ಟರ್ : "ಹಾಗೇನಿಲ್ಲ, ಆದರೆ ಅಮಲೇರಿದ ಮೇಲೆ ನೆಗಡಿ ವೈರಸ್‌ಗಳು ಕಡಿಮೆ ತೊಂದರೆ ಕೊಡುತ್ತವೆ ಅಷ್ಟೇ"

ಮೈಸೂರು ಮಿತ್ರ

ಭಾನುವಾರ, 5 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಪಾಪ ಕಾರ್ಯಕ್ಕೆ ಮನಸು ಕೊಡದಿರುವ
ಗುಣವೇ ದೊಡ್ಡ ತಪಸ್ಸು –ವ್ಯಾಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕನಸಿನ ಬತ್ತಕ್ಕೆ ಗೋಣಿ ಚೀಲ ತಂದ್ರಂತೆ

ನಿಮ್ಮ ಪತ್ರಗಳು

ಪ್ರಿಯಾಂಕ ಖರ್ಗೆಯವರ ಹೇಳಿಕೆಗೆ ಸಿದ್ದರಾಮಯ್ಯನವರು ಸ್ಪಷ್ಟನೆ ನೀಡಲಿ

ಮಾನ್ಯರೆ,

ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು, ಜೆಡಿಎಸ್ ಹಾಗೂ ಬಿಜೆಪಿ ಪಕ್ಷದವರು ಸರ್ಕಾರವನ್ನು ಟೀಕಿಸಬೇಕಾದರೆ ನಮ್ಮ ಸರ್ಕಾರ ನೀಡುತ್ತಿರುವ ಸವಲತ್ತುಗಳನ್ನು ಪಡೆಯಬೇಡಿ ಎಂದು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರ ಪುತ್ರ ಹಾಗೂ ಸಚಿವ ಪ್ರಿಯಾಂಕ ಖರ್ಗೆ ಮೈಸೂರಿನಲ್ಲಿ ಫರ್ಮಾನು ಹೊರಡಿಸಿದ್ದಾರೆ.

ಮಹದೇವಪ್ಪ ನಿಂಗೂ ಫ್ರೀ, ಕಾಕಾ ಪಾಟೀಲಾ ನಿಂಗೂ ಫ್ರೀ ಅಂತ ಚುನಾವಣಾ ಪೂರ್ವದಲ್ಲಿ ನಿಮ್ಮ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ಹೇಳಿದಾಗ ಈ ಕಂಡೀಷನ್ ಹಾಕಿದ್ರ. ಅವರಿಗೆ ನಿಮ್ಮ ಹೇಳಿಕೆಯಿಂದ ಮುಜುಗರ ಉಂಟು ಮಾಡುತ್ತಿರುವುದು ಸರಿಯೇ ಪ್ರಿಯಾಂಕ ಖರ್ಗೆಯವರೇ.

ಕರ್ನಾಟಕದಲ್ಲಿರುವುದು ಪ್ರಜಾಪ್ರಭುತ್ವ ಸರಕಾರವೇ ಹೊರತು ಹಿಟ್ಲರ್ ಸರ್ಕಾರವಲ್ಲ ನೆನಪಿರಲಿ. ನೀವೇ ಗೌರವ ಕೊಡುವ ಸಂವಿಧಾನಕ್ಕೆ ನಿಮ್ಮ ಹೇಳಿಕೆಯಿಂದ ಅವಮಾನ ಮಾಡಿದಂತಾಗಿದೆ.

ಸಾರ್ವಜನಿಕ ಸಮಾರಂಭದಲ್ಲಿ, ಪಕ್ಷದ ವೇದಿಕೆಯಲ್ಲಿ ಭಾಷಣ ಮಾಡುವಾಗ ಆಡುವ ಮಾತುಗಳ ಬಗ್ಗೆ ಪ್ರಜ್ಞೆ ಇರಲಿ ಮಂತ್ರಿ ಮಹೋದಯರೇ.

ಇಂತಹ ಹೇಳಿಕೆಯನ್ನು ಖಂಡಿಸಲು ವಿರೋಧ ಪಕ್ಷ ನಾಲಿಗೆ ಬಿದ್ದು ಹೋದಂತೆ ಆಡುತ್ತಿರುವುದು ಸರಿಯಲ್ಲ. ಕಾಂಗ್ರೆಸ್‌ಗೆ ಮತ ಹಾಕಿದವರಿಗೆ ಮಾತ್ರ ಸರ್ಕಾರಿ ಸವಲತ್ತುಗಳು ಹಾಗೂ ಸವಲತ್ತು ಪಡೆದವರು ಸರ್ಕಾರದ ವಿರುದ್ಧ ಮಾತನಾಡುವುದು ಅಕ್ಷಮ್ಯ ಎನ್ನುವ ನಿಮ್ಮ ಧೋರಣೆಯಲ್ಲಿ ಬದಲಾವಣೆ ಆಗದಿದ್ದರೆ ಜನರೇ ತಕ್ಕ ಪಾಠ ಕಲಿಸುತ್ತಾರೆ ಪ್ರಿಯಾಂಕ ಖರ್ಗೆಯವರೇ ಎಚ್ಚರ. ಈ ಬಗ್ಗೆ ಸಿದ್ದರಾಮಯ್ಯನವರ ಸ್ಪಷ್ಟನೆ ಏನು? ಇದು ಮತದಾರರ ಪ್ರಶ್ನೆಯಾಗಿದೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ ಮೈಸೂರು

ರಾತ್ರಿ 11.30ರ ಬೆಂಗಳೂರು–ಮೈಸೂರು ರೈಲು ಪುನರಾರಂಭಗೊಳ್ಳಲಿ

ಮಾನ್ಯರೇ



ಈ ಹಿಂದೆ ಮೈಸೂರಿನಿಂದ ಬೆಂಗಳೂರಿಗೆ ರಾತ್ರಿ 11.30ಕ್ಕೆ ಹೊರಡುತ್ತಿದ್ದ ಪ್ಯಾಸೆಂಜರ್ ರೈಲು ಪ್ರಯಾಣಿಕರಿಗೆ ಎಲ್ಲಾ ರೀತಿಯಿಂದಲೂ ತುಂಬಾ ಅನುಕೂಲಕರವಾಗಿತ್ತು. ಆದರೆ ಕೆಲವು ವರ್ಷಗಳಿಂದ ಈ ರೈಲು ಸ್ಥಗಿತಗೊಂಡಿದ್ದು, ಪ್ರಯಾಣಿಕರಿಗೆ ನುಂಗಲಾರದ ತುತ್ತಾಗಿದೆ. ಈ ರೈಲು ಯಾವಾಗಲೂ ಭರ್ತಿಯಾಗಿರುತ್ತಿತ್ತು. ಅದರಲ್ಲೂ ಸಂದರ್ಶನಕ್ಕೆ ತೆರಳುತ್ತಿದ್ದ ವಿದ್ಯಾರ್ಥಿಗಳಿಗೆ ಹಾಗೂ ವ್ಯಾಪಾರಸ್ಥರಿಗೆ ಈ ರೈಲು ಬಹಳ ಉಪಯುಕ್ತವಾಗಿತ್ತು. ಜೊತೆಗೆ ರೈಲಿನ ದರವೂ ಮಧ್ಯಮ ವರ್ಗದ ಜನರಿಗೆ ಕೈಗೆಟುಕುವಂತಿತ್ತು. ಸಮಯವೂ ಉಳಿತಾಯವಾಗಿ ರಾತ್ರಿ ಇಲ್ಲಿಂದ ಹೊರಟು ಮಾರನೇ ದಿನ ಬೆಂಗಳೂರಿನಲ್ಲಿ ಕೆಲಸ ಕಾರ್ಯಗಳನ್ನು ಮುಗಿಸಿ, ಅಲ್ಲಿಂದ ಮೈಸೂರಿಗೆ ಹೊರಟು ಬರಬಹುದಾಗಿತ್ತು. ದಯವಿಟ್ಟು ಇದಕ್ಕೆ ಸಂಬಂಧಪಟ್ಟವರು ಈ ರೈಲನ್ನು ಪುನಃ ಪುನರಾರಂಭಿಸಿ ಪ್ರಯಾಣಿಕರಿಗೆ ದೀಪಾವಳಿಯ ಉಡುಗೊರೆಯಾಗಿ ಕೊಡುತ್ತಾರೆಂದು ಆಶಿಸೋಣವೇ?

–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು.

ಭೀಕರ ಕೊಲೆ ಎಂದರೆ...?

ಮಾನ್ಯರೆ,

ವಿದೇಶಿ ವ್ಯಕ್ತಿಯೊಬ್ಬರು ನಮ್ಮೆಲ್ಲರ ನೆಚ್ಚಿನ ಸೆಲ್‌ಫೋನ್ ಬಗ್ಗೆ 2 ನಿಮಿಷದ ಆಂಗ್ಲ ಭಾಷೆಯ ವಿಡಿಯೋವೊಂದನ್ನು ಹರಿಯ ಬಿಟ್ಟಿದ್ದಾರೆ.

"ಸೆಲ್‌ಫೋನ್ ತುಂಬಾ ಪ್ರಭಾವಶಾಲಿಯಾದುದು. ಅದೆಷ್ಟು ಪ್ರಭಾವಶಾಲಿ, ಶಕ್ತಿಶಾಲಿ ಎಂದರೆ... ಸೆಲ್ ಫೋನ್ ಸ್ಥಿರ ದೂರವಾಣಿಯನ್ನು ಕೊಂದಿತು. ಟೆಲಿವಿಷನ್ ಅನ್ನು ಕೊಂದಿತು. ಕಂಪ್ಯೂಟರ್ ಅನ್ನು ಕೊಂದಿತು. ಗಡಿಯಾರವನ್ನು ಕೊಂದಿತು. ಕ್ಯಾಮೆರಾವನ್ನು ಕೊಂದಿತು. ರೇಡಿಯೋವನ್ನು ಕೊಂದಿತು. (ಟೇಪ್ ರೆಕಾರ್ಡರ್ ಸೆಲ್‌ಫೋನ್ ಬರುವ ಮೊದಲೇ ಕೊಲ್ಲಲ್ಪಟ್ಟಿತ್ತು!) ಫ್ಲಾಶ್ ಲೈಟ್ ಅನ್ನು ಕೊಂದಿತು. ಕನ್ನಡಿಯನ್ನು ಕೊಂದಿತು. ಸುದ್ದಿ ಪತ್ರಿಕೆಗಳನ್ನು ಕೊಂದಿತು, ಪುಸ್ತಕಗಳನ್ನು, ಮ್ಯಾಗ್‌ಝೀನ್‌ಗಳನ್ನು ಕೊಂದಿತು. ವಿಡಿಯೋ ಗೇಮ್‌ಗಳನ್ನು ಕೊಂದಿತು. ವ್ಯಾಲೆಟ್(ಪರ್ಸ್) ಅನ್ನು ಕೊಂದಿತು. ಡೆಸ್ಕ್ ಕ್ಯಾಮೆರಾವನ್ನು ಕೊಂದಿತು. ಕ್ರೆಡಿಟ್ ಕಾರ್ಡ್ ಅನ್ನು ಕೊಂದಿತು. ಇನ್ನೂ ಅತ್ಯಂತ ಕ್ರೂರವಾಗಿ ಹಲವು ದಾಂಪತ್ಯಗಳನ್ನು ಕೊಂದಿತು. ಮದುವೆಗಳನ್ನು ಕೊಂದಿತು. ಅನೇಕ ಕುಟುಂಬಗಳನ್ನೇ ನಿರ್ನಾಮ ಮಾಡಿತು. ಇನ್ನು ಚಿಕ್ಕ ಚಿಕ್ಕದಾಗಿ ನಮ್ಮ ಕಣ್ಣುಗಳನ್ನೇ ಕೊಲ್ಲುತ್ತಿದೆ. ನಮ್ಮ ಬೆನ್ನು ಹುರಿಯನ್ನೇ ಕೊಲ್ಲುತ್ತಿದೆ. ಸ್ವಚ್ಛತೆಯನ್ನು ಕೊಂದಿದೆ. ಹಾಗೂ ನಮ್ಮ ಮುಂದಿನ ಪೀಳಿಗೆಯನ್ನೇ ಹೊಸಕಿ ಹಾಕುತ್ತಿದೆ!ಇನ್ನು ಈ ಬಗ್ಗೆ ನಾವು ಆತ್ಮ ವಿಮರ್ಶೆ ಮಾಡಿಕೊಳ್ಳದಿದ್ದರೆ ನಮ್ಮ ಆತ್ಮವನ್ನೇ ಕೊಲ್ಲುತ್ತದೆ! ಈ ಬಗ್ಗೆ ಗಂಭೀರವಾಗಿ ಚಿಂತಿಸುವ ಅಗತ್ಯವಿದೆ ಎಂದಿದ್ದಾರೆ.

ಸೆಲ್‌ಫೋನ್ ಅದೆಷ್ಟು ಕ್ರಾಂತಿ, ಅನಾಹುತ ಮಾಡಿದೆಯಲ್ಲವೆ? ಇನ್‌ಲ್ಯಾಂಡ್ ಲೆಟರ್, ಪೋಸ್ಟ್ ಕಾರ್ಡ್ ಕೂಡ ಸಾವಿನ ಅಂಚಿನಲ್ಲಿವೆ. ಪೇಪರ್ ತೆಗೆದುಕೊಂಡು ಪೆನ್ನಿನಲ್ಲಿ ಬರೆದು, ತಪ್ಪಾದರೆ ಮತ್ತೆ ಮತ್ತೆ ಬೇರೆ ಹಾಳೆಯಲ್ಲಿ ಬರೆದು ರಾತ್ರಿಯೆಲ್ಲಾ ನಿದ್ದೆಗೆಟ್ಟು ಬರೆದು ಪೋಸ್ಟ್ ಕವರ್ ನಲ್ಲಿ ಪೋಸ್ಟ್ ಡಬ್ಬಕ್ಕೆ ಹಾಕಿ ಅಥವಾ ಪತ್ರಿಕಾ ಕಚೇರಿಗೆ ಹೋಗಿ ಪತ್ರ ತಲುಪಿಸಿ, 2–3 ದಿನ ಪತ್ರಿಕೆಯಲ್ಲಿ ಪ್ರಕಟವಾಗುವುದನ್ನು ಕಾಯುತ್ತಿದ್ದದು,..!.. ಈಗ ಸ್ಮಾರ್ಟ್‌ಫೋನ್ ಹಿಡಿದು ಜಿಮೇಲ್‌ಗೆ ಲಾಗಿನ್ ಆಗಿ ಟೈಪ್ ಮಾಡಿ, ತಪ್ಪಾದರೆ ಅಲ್ಲಿಯೇ ಸರಿಪಡಿಸಿ ಸಿದ್ಧಪಡಿಸಿ, ಪತ್ರಿಕೆಯ ಜಿಮೇಲ್ ಅಡ್ರೆಸ್‌ಗೆ ಸೆಂಡ್ ಮಾಡಿದರೆ, ಕ್ಷಣಾರ್ಧದಲ್ಲಿ ಪತ್ರಿಕೆಯ ಕಚೇರಿಯನ್ನು ತಲುಪುತ್ತದೆ. ಅಷ್ಟಾಗಿ ಯಾವುದೇ ಕಂಪ್ಯೂಟರ್ ಜ್ಞಾನವಿಲ್ಲದಿರುವ ನನ್ನ ಪತ್ನಿ ಕೂಡ, ಅಡುಗೆ ಮಾಡುವುದು, ರಂಗೋಲಿ ಬಿಡಿಸುವುದು, ಜೋತಿಷ್ಯ ನೋಡುವುದು ಮುಂತಾದ ಸುದ್ದಿಗಳ 'ಯೂ ಟ್ಯೂಬ್' ದಾಸಳಾಗಿದ್ದಾಳೆ! ಹೀಗೆ ಪ್ರತಿಯೊಬ್ಬರೂ ಮೊಬೈಲ್ ದಾಸರಾಗಿದ್ದೇವೆ. ಏನು ಮಾಯೆಯೋ ಇದನ್ನು ಕ್ರಾಂತಿ ಎನ್ನೋಣವೆ? ಭ್ರಾಂತಿ ಎನ್ನೋಣವೆ? ಅವರವರ ಇಚ್ಛೆ!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಕಾರ್ಕಳ ಆನಂದ ಭಟ್

ಮೊ : 7676554198

ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ದಿನ ನಿತ್ಯವೂ ನಾವು ಕನ್ನಡ ಭಾಷೆಯನ್ನು ನಾಶಪಡಿಸುತ್ತಿದ್ದೇವೆ...!?

"ನಮ್ಮ ಸುತ್ತಮುತ್ತಲಿರುವ ಕನ್ನಡ ಮಾಧ್ಯಮ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಗಮನಹರಿಸುವುದು, ಭಾಷಣಗಳಲ್ಲಿ, ದಿನನಿತ್ಯದ ಬದುಕಿನಲ್ಲಿ, ಮಾತುಕತೆಗಳಲ್ಲಿ ಇಂಗ್ಲಿಷ್ ಶಬ್ದ ಬಳಸದಿರುವುದಕ್ಕೆ ಗಮನಹರಿಸುವುದು, ಮನೆಗಳಲ್ಲಿಂದು ಬೆಳಗಿನ ಉಪಹಾರದ ಬದಲು ಬ್ರೇಕ್ ಫಾಸ್ಟ್, ಟಿಫಿನ್ ದೊರೆಯುತ್ತಿದೆ. ಮಧ್ಯಾಹ್ನದ ಊಟವು ಲಂಚ್ ಅಥವಾ ಮೀಲ್ ಆಗಿದೆ. ಮಾವಿನ ಹಣ್ಣುಗಳು ಮ್ಯಾಂಗೋ, ದ್ರಾಕ್ಷಿ ಹಣ್ಣುಗಳು ಗ್ರೇಪ್ಸ್ ಆಗಿವೆ. ದೇವಸ್ಥಾನಗಳು ಟೆಂಪಲ್ ಆಗಿವೆ. ಮದುವೆಗಳು ವೆಡ್ಡಿಂಗ್ ಆಗಿವೆ. ಮದುವೆ ಆಮಂತ್ರಣ ಪತ್ರಿಕೆಗಳನ್ನು ನಾವು ಇಂಗ್ಲಿಷ್ ಭಾಷೆಯಲ್ಲಿ ಮುದ್ರಿಸುತ್ತಿದ್ದೇವೆ. ಈ ರೀತಿ ದಿನನಿತ್ಯ ನಾವು ಕನ್ನಡ ಭಾಷೆಯನ್ನು ನಾಶಪಡಿಸುತ್ತಿದ್ದೇವೆ. ಆದ್ದರಿಂದ ಅನ್ಯ ಭಾಷೆಗಳ ಫಲಕಗಳಿಗೆ ಮಸಿ ಬಳಿಯಲು ಹೊರಡುವ ಮುನ್ನ ನಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿ ಯೋಚಿಸಬೇಕಾಗಿದೆ.



20ನೇ ಶತಮಾನದ ಐವತ್ತರ ದಶಕದಲ್ಲಿ ಜಗತ್ತಿನಲ್ಲಿ ಎರಡು ಪ್ರಮುಖ ಘಟನೆಗಳು ಸಂಭವಿಸಿದವು. ಒಂದನೇಯದಾಗಿ 2ನೇ ಮಹಾಯುದ್ಧದಲ್ಲಿ ಜಪಾನ್‌ನ ಎರಡು ಪ್ರಮುಖ ನಗರಗಳಾದ ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಅಮೇರಿಕ ಪ್ರಯೋಗಿಸಿದ ಅಣು ಬಾಂಬ್‌ಗಳಿಂದ ಜಪಾನ್ ಸರ್ವನಾಶವಾಯಿತು. ಇನ್ನೊಂದೆಡೆ 1947ರಲ್ಲಿ ಬ್ರಿಟಿಷರಿಂದ ಭಾರತಕ್ಕೆ ಮುಕ್ತಿ. 1947 ರಲ್ಲಿ ಸ್ವಾತಂತ್ರ್ಯ ಪಡೆದಾಗ ಭಾರತಕ್ಕೆ ಸಾಲವಿರಲಿಲ್ಲ. ಭಾರತವೇ ಕೆಲವು ದೇಶಗಳಿಗೆ ಸಾಲ ನೀಡಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಭಾರತವು ಚೀನಾ, ಕೊರಿಯಾಕ್ಕೆ ಸರಿಸಮವಿತ್ತು. ಅಮೇರಿಕದ ಡಾಲರ್‌ಗೆ ಭಾರತದ ರೂಪಾಯಿ ಮೌಲ್ಯ ಸಮನಾಗಿತ್ತು. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಹೆಚ್ಚಿನ ಅವಧಿಗೆ ಅಧಿಕಾರದಲ್ಲಿದ್ದವರು ದೇಶವನ್ನು ಲೂಟಿ ಹೊಡೆದರು. ಈ ರೀತಿ ಲೂಟಿ ಮಾಡಿದ ಸಂಪತ್ತನ್ನು ವಿದೇಶಿ ಬ್ಯಾಂಕ್‌ಗಳಲ್ಲಿ ಜಮಾ ಮಾಡಲು ಹೆಚ್ಚು ಗಮನ ನೀಡಿದರು.

ಈ ಲೂಟಿಕೋರರು ತಮ್ಮ ಭಾರತ ವಿರೋಧಿ ಮತ್ತು ರಾಷ್ಟ್ರವಾದವನ್ನು ದುರ್ಬಲಗೊಳಿಸುವ ಕಾರ್ಯಸೂಚಿಯನ್ವಯ ಮುಂದಿನ ಪೀಳಿಗೆಯನ್ನು ಪ್ರಗತಿಯತ್ತ ಕೊಂಡೊಯ್ಯುವ, ದೇಶಭಕ್ತಿಯನ್ನು ಜಾಗೃತಗೊಳಿಸುವ ಶಿಕ್ಷಣ ದೊರೆಯದಂತಹ ವ್ಯವಸ್ಥೆ ರೂಪಿಸಿದರು. ಪ್ರಧಾನಿ ನೆಹರೂರವರು ಶಿಕ್ಷಣದ ಮಹತ್ವ ಅರಿತು, ಅದಕ್ಕೆ ಒತ್ತಾಸೆ ನೀಡದ ಕಾರಣಕ್ಕೆ ಭಾರತದ ಸಮಗ್ರ ವಿಕಾಸವಾಗಲಿಲ್ಲ ಎನ್ನಬಹುದು. ಆದರೆ 1945 ರಲ್ಲಿ ಸುಟ್ಟು ಬೂದಿಯಾದ ಜಪಾನ್ ಇಂದು ಭಾರತಕ್ಕಿಂತ ಎಷ್ಟು ಪಾಲು ಮುಂದುವರಿದಿದೆ. ಇದಕ್ಕೆ ಅತ್ಯಂತ ಪ್ರಮುಖ ಕಾರಣ ಶಿಕ್ಷಣ ಕ್ಷೇತ್ರಕ್ಕೆ ಜಪಾನ್ ನೀಡಿದ ಆದ್ಯತೆ. ಮಾತೃಭಾಷೆಗೆ ನೀಡಿದ ಪ್ರಾಧಾನ್ಯತೆ. ಆದರೆ ಭಾರತವು ಬ್ರಿಟಿಷ್ ರೂಪಿತ ಶಿಕ್ಷಣ ಪದ್ಧತಿಗೆ ಪ್ರಾಮುಖ್ಯತೆ ನೀಡಿತು. ನಾವು ಭಾರತೀಯ ಭಾಷೆಗಳನ್ನು ಕಡೆಗಣಿಸಿ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ನೀಡಲು ಮಹತ್ವ ನೀಡಿದೆವು.

ಇಂಗ್ಲಿಷ್ ಭಾಷಾ ಶಿಕ್ಷಣದ ಪ್ರಮುಖ ಅಂಶವೆಂದರೆ ಭಾರತ ಮತ್ತು ಭಾರತೀಯತೆಯ ಮೇಲೆ ಶ್ರದ್ಧೆ, ಗೌರವ, ಅಭಿಮಾನ ಮೂಡುವುದಿಲ್ಲ. ಪಠ್ಯಗಳಲ್ಲಿ ವಿದೇಶಿ ವಿಷಯಗಳು ಹೆಚ್ಚಿನ ಆದ್ಯತೆ ಪಡೆಯುತ್ತವೆ. ಇಂಗ್ಲಿಷ್ ವಿಜ್ಞಾನಿಗಳು, ಸಾಹಿತಿಗಳು, ವ್ಯಕ್ತಿತ್ವಗಳಿಗೆ ಇಂತಹ ಪಠ್ಯಗಳಲ್ಲಿ ಮಹತ್ವ ನೀಡಲಾಗುತ್ತದೆ. ಭಾರತೀಯತೆಗೆ ನಾಮ ಮಾತ್ರ ಸ್ಪರ್ಶವಿರುತ್ತದೆ. ಈ ರೀತಿ ಇಂಗ್ಲಿಷ್ ಶಿಕ್ಷಣ ಪಡೆಯುವ ಕೇವಲ ಶೇ.3ರಷ್ಟು ಜನರು ತಮ್ಮನ್ನು ಬ್ರಿಟಿಷ್ ಸಂಸ್ಕೃತಿಯ ಶ್ರೇಷ್ಠ ವಾರಸುದಾರರು ಮತ್ತು ಉಳಿದ ಭಾರತೀಯರನ್ನು, ತಾವು ಆಳುವವರು ಎಂಬ ಮಾನಸಿಕತೆ ಹೊಂದಿರುತ್ತಾರೆ.

ಗಾಂಧೀಜಿಯವರು ತಮ್ಮ ಹಿಂದ್ ಸ್ವರಾಜ್‌ದಲ್ಲಿ ಬರೆದಂತೆ ವಿದೇಶಿ ಶಿಕ್ಷಣ ಪಡೆದವರು ಸಾಮೂಹಿಕ ರೂಪದಲ್ಲಿ ಪತನಗೊಂಡಿದ್ದಾರೆ. ಆದ್ದರಿಂದ ಪಾಶ್ಚಾತ್ಯ ಸಭ್ಯತೆಯನ್ನು ತಿರಸ್ಕರಿಸಿದಲ್ಲಿ ತನ್ನಿಂದ ತಾನೇ ಎಲ್ಲವೂ ಸರಿಯಾಗುವುದೆಂದು ಹೇಳಿದರು.

ಸ್ವಾತಂತ್ರ್ಯಾನಂತರ ಘಟಿತವಾದ ಎಲ್ಲ ಆಯೋಗಗಳು, ಸಮಿತಿಗಳು ನೀಡಿದ ವರದಿಗಳನ್ನು ಕಸದ ಬುಟ್ಟಿಗೆ ಎಸೆದು ಕೇವಲ ದೇಶ ಸೂರೆಗೈಯುವುದನ್ನೇ ಯೋಜಿಸಲಾಯಿತು. ಶಿಕ್ಷಣ ಕ್ಷೇತ್ರ ಪ್ರಯೋಗಗಳ ಬಲಿಪಶುವಾಯಿತು. 1948ರಲ್ಲಿ ವಿ.ವಿ. ಶಿಕ್ಷಾ ಆಯೋಗ, 1952 –53ರಲ್ಲಿ ಮಾಧ್ಯಮಿಕ ಶಿಕ್ಷಾ ಆಯೋಗ, ಆನಂತರದ ಮೊದಲಿಯಾರ್ ಆಯೋಗಗಳು ನೈತಿಕ–ಆಧ್ಯಾತ್ಮಿಕ ಮೌಲ್ಯಾಧಾರಿತ ಶಿಕ್ಷಣ ನೀಡುವಂತೆ ಆಗ್ರಹಿಸಿದವು. 1959ರಲ್ಲಿ ಶಿಕ್ಷಣ ಕೇಂದ್ರೀಯ ಸಲಹಾ ಮಂಡಳಿಯು ನೇಮಿಸಿದ ಶ್ರೀ ಪ್ರಕಾಶ ಸಮಿತಿಯು ಪ್ರಾಥಮಿಕ ಹಂತದಿಂದ ವಿ.ವಿ. ವರೆಗಿನ ಶಿಕ್ಷಣದಲ್ಲಿ ನೈತಿಕ ಶಿಕ್ಷಣ ನೀಡುವಂತೆ ಶಿಫಾರಸು ಮಾಡಿತು. 1964–66ರಲ್ಲಿ ಕೊಠಾರಿ ಆಯೋಗವು ಕೇಂದ್ರ–ರಾಜ್ಯ ಸರಕಾರಗಳು ತಮ್ಮ ಅಧೀನ ಶಿಕ್ಷಣ ಸಂಸ್ಥೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣಕ್ಕೆ ವ್ಯವಸ್ಥೆ ಮಾಡುವಂತೆ ಸಲಹೆ ನೀಡಿತು.

1979ರಲ್ಲಿ ರಾಷ್ಟ್ರೀಯ ಶಿಕ್ಷಾ ನೀತಿಯಲ್ಲಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ನೈತಿಕ ಶಿಕ್ಷಣಕ್ಕೆ ಒತ್ತು ನೀಡಬೇಕು. ಶಿಕ್ಷಣ ಭಾರತೀಯ ಸಂಸ್ಕೃತಿ ಆಧಾರಿತವಾಗಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿತು. ಆದರೆ ಸರಕಾರವು ಎಲ್ಲಾ ಸಮಿತಿಗಳ ಸಲಹೆ, ಶಿಫಾರಸುಗಳನ್ನು ನಿರ್ಲಕ್ಷಿಸಿತು. ಪರಿಣಾಮ ಸ್ವಾತಂತ್ರ್ಯ ನಂತರದ ಎಂಟನೇ ದಶಕದಲ್ಲಿಂದು ಶಿಕ್ಷಣದಲ್ಲಿ ಮೌಲ್ಯಗಳು ಕಾಣೆಯಾಗಿವೆ.

ವ್ಯಕ್ತಿಗತ ಜೀವನದ ಶ್ರೇಷ್ಠತೆ ಮತ್ತು ಸ್ಥಿರತೆಯಿಂದ ಮುಂದುವರಿದು ಸಾಮಾಜಿಕ ಮತ್ತು ರಾಷ್ಟ್ರೀಯ ಉದ್ದೇಶಕ್ಕಾಗಿ ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವ ಸಂವೇದನಾಶೀಲತೆ ಮತ್ತು ವಿವೇಕಯುತ ಜ್ಞಾನ ಪ್ರಾಪ್ತಿಯೇ ನೈತಿಕ, ಆಧ್ಯಾತ್ಮಕ ಶಿಕ್ಷಣವಾಗಿದೆ. ಮೌಲ್ಯಗಳನ್ನು ಅರಿತು ದೇಶದ ಪ್ರಜ್ಞಾವಂತ, ಶಿಕ್ಷಿತ ವ್ಯಕ್ತಿಯಾಗಲು ಮಾತೃಭಾಷೆಯಲ್ಲೇ ಶಿಕ್ಷಣವಿರಬೇಕೆಂಬುದು ತಜ್ಞರ ಅಭಿಮತವಾಗಿದೆ. ಆದರೆ ಪಾಶ್ಚಾತ್ಯ ಜೀವನ ಶೈಲಿ, ಇಂಗ್ಲಿಷ್ ಭಾಷೆಯ ಮೇಲೆ ಭಾರಿ ಆಕರ್ಷಣೆ ಹೊಂದಿದ್ದ ಪ್ರಥಮ ಪ್ರಧಾನಿ ನೆಹರೂರವರು ಡಾ.ಅಂಬೇಡ್ಕರ್‌ರವರ ಸಂಸ್ಕೃತ ರಾಷ್ಟ್ರ ಭಾಷೆಯಾಗಬೇಕೆಂಬ ಸಲಹೆಯನ್ನು ತಿರಸ್ಕರಿಸಿ ಇಂಗ್ಲಿಷ್‌ಗೆ ಪ್ರಾಧಾನ್ಯತೆ ನೀಡಿದರು. ಆ ನಂತರದ ಎಲ್ಲ ಕಾಂಗ್ರೆಸ್ ಸರ್ಕಾರಗಳು ಇಂಗ್ಲಿಷ್ ಭಾಷೆಗೆ ಮಹತ್ವ ನೀಡಿದರು. ಹಿಂದೆ ದಿ. ರಾಜೀವ್ ಗಾಂಧಿ, ಸೋನಿಯಾದ ಆತ್ಮೀಯರಾಗಿದ್ದ ರಾಷ್ಟ್ರೀಯ ಜ್ಞಾನ ಆಯೋಗದ ಅಧ್ಯಕ್ಷರಾಗಿದ್ದ ಸ್ಯಾಮ್ ಪಿತ್ರೋಡಾರವರು ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಇಂಗ್ಲಿಷ್ ಶಿಕ್ಷಣ ಅನಿವಾರ್ಯ ಎಂದಿದ್ದರು. ಜಪಾನ್, ಜರ್ಮನಿ, ರಷ್ಯಾ, ಚೀನಾ, ಇಸ್ರೇಲ್ ಮೊದಲಾದ ರಾಷ್ಟ್ರಗಳು ತಮ್ಮ ಮಾತೃಭಾಷೆಗಳನ್ನು ಬಳಸಿ ಪ್ರಗತಿ ಸಾಧಿಸಿ ಪ್ರಬಲ ರಾಷ್ಟ್ರಗಳಾಗಿವೆ. ಆದರೆ ಇಂಗ್ಲಿಷ್ ಇಲ್ಲದೆ ಪ್ರಗತಿ ಅಸಾಧ್ಯ ಎಂಬ ಭಾವನೆಗೆ ಭಾರತ ಬಲಿಯಾಗಿದೆ.

ಸ್ವಾತಂತ್ರ್ಯ ನಂತರ ಇಂಗ್ಲಿಷ್ ಭಾಷೆಗೆ ಮಹತ್ವ ನೀಡಿದ್ದರಿಂದ ನಾವು ಬಹು ಆಯಾಮಿ ಶಿಕ್ಷಣ ನೀಡುವಲ್ಲಿ ವಿಫಲರಾಗಿದ್ದೇವೆ. ಕೇವಲ ಗುಮಾಸ್ತರನ್ನು, ನಿರುದ್ಯೋಗಿಗಳನ್ನು ಸೃಷ್ಟಿಸುವ ವಿದ್ಯೆಗೆ ಗಮನ ನೀಡಿದೆವು. ಇದರ ಪರಿಣಾಮವಾಗಿ ಭಾರತದಲ್ಲಿ ಜೀವನಕ್ಕಾಗಿ ಶಿಕ್ಷಿತರಲ್ಲಿ ಕೇವಲ ಶೇ.5 ಮಂದಿ ಕೃಷಿ ಕ್ಷೇತ್ರ ಆರಿಸಿದರೆ ಕೊರಿಯಾದಲ್ಲಿ ಶೇ.95, ಜಪಾನ್‌ನಲ್ಲಿ ಶೇ.80, ಜರ್ಮನಿಯ ಶೇ.75ರಷ್ಟು ಸುಶಿಕ್ಷಿತರು ವ್ಯವಸಾಯ ಅಥವಾ ಕೃಷಿ ಕ್ಷೇತ್ರದಲ್ಲಿದ್ದಾರೆ.

ಭಾರತದಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಶೇ.7.6ರಷ್ಟು ಬಜೆಟ್‌ನಲ್ಲಿ ಖರ್ಚಾದರೆ, 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ ಶೇ.2.6ಕ್ಕೆ ಕುಸಿಯಿತು. ಸ್ವಾತಂತ್ರ್ಯ ನಂತರ ನಾವು ಶಿಕ್ಷಣ ಕ್ಷೇತ್ರವನ್ನು, ರಾಷ್ಟ್ರೀಯ ಭಾಷೆಗಳನ್ನು ಸಂಪೂರ್ಣ ಕಡೆಗಣಿಸಿದೆವು. ಇದರಿಂದ ದೇಶದಲ್ಲಿಂದು ತುಮುಲ, ತಳಮಳ, ಅನಿಶ್ಚಿತತೆ, ಇತಿಹಾಸದ ಬಗ್ಗೆ ಅಪನಂಬಿಕೆ, ಅಪಹಾಸ್ಯ, ಅವಿಶ್ವಾಸದ ವಾತಾವರಣವಿದೆ. ನಮ್ಮ ಭಾಷೆಗಳ ಬಗ್ಗೆ ನಾವು ಅಭಿಮಾನ ಶೂನ್ಯರಾಗಿದ್ದೇವೆ.

ಮನೋ ವಿಜ್ಞಾನಿಗಳ ಪ್ರಕಾರ ಮಗುವಿಗೆ ಯಾವ ಭಾಷೆಯಲ್ಲಿ ಕನಸುಗಳು ಬೀಳುತ್ತವೋ ಅದೇ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಿದಲ್ಲಿ ಆತ ಹೆಚ್ಚು ಪ್ರಬುದ್ಧತೆ ಪ್ರಗತಿಯನ್ನು ಸಾಧಿಸುತ್ತಾನೆ. ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ನನಗೆ ಮಾತೃಭಾಷೆಯಲ್ಲಿ ಶಿಕ್ಷಣ ದೊರೆತ ಕಾರಣ ನಾನು ವಿಜ್ಞಾನಿಯಾದೆ ಎಂದಿದ್ದರು. ಇದೇ ರೀತಿಯ ಅಭಿಪ್ರಾಯವನ್ನು ಪ್ರಸಿದ್ಧ ವಿಜ್ಞಾನಿ ಜಗದೀಶ್ ಚಂದ್ರ ಬೋಸ್‌ರ ತಂದೆ, ಬ್ರಿಟಿಷ್ ಆಡಳಿತದಲ್ಲಿ ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಆಗಿದ್ದ ಭಗವಾನ್ ದಾಸ್ ಬೋಸ್‌ರವರು ಇಂಗ್ಲಿಷ್ ಕಲಿಯುವ ಮೊದಲು ಮಾತೃಭಾಷೆಯಲ್ಲಿ ಪ್ರಭುತ್ವ ಹೊಂದಬೇಕು ಎಂದಿದ್ದರು. ಈ ವಿಚಾರವನ್ನು ಸಮರ್ಥಿಸುವಂತಹ ಒಂದು ಘಟನೆ 2003ರಲ್ಲಿ ನಡೆಯಿತು.

ಕರ್ನಾಟಕ ಸರಕಾರದ ಅಧಿಕಾರಿ ಕನ್ನಡ ಗಣಕ ಪರಿಷತ್ ಕಾರ್ಯದರ್ಶಿಗಳು, ವಿಜ್ಞಾನಿಯೂ ಆಗಿದ್ದ ಟಿ.ವಿ.ಎಸ್. ಶಾಸ್ತ್ರಿಯವರು ಯುಎನ್‌ಡಿಪಿಯ ಅಮೇರಿಕನ್ ಅಧಿಕಾರಿ ಜತೆ ಸಮಾಲೋಚನೆಯ ಸಂದರ್ಭದಲ್ಲಿ ಕನ್ನಡದೊಡನೆ ಇಂಗ್ಲಿಷ್ ಭಾಷೆಯನ್ನು ಬೆರೆಸುತ್ತಿರುವುದನ್ನು ಕೇಳಿದ ಅಮೆರಿಕನ್ ಅಧಿಕಾರಿಯು "why do you englishize your language I say? why do you unnecessarily mix english in your language? your langauge is so good, scientific and better than english ಎಂದು ಅಚ್ಚರಿಗೊಳಿಸಿದ್ದರು. ಇದೇ ರೀತಿ 1987ರಲ್ಲಿ ಬೆಂಗಳೂರಿನಲ್ಲಿ ನಡೆದ ಕಂಪ್ಯೂಟರ್ ಮತ್ತು ಸಂಸ್ಕೃತಿ ಎಂಬ ವಿಚಾರದಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನ ದಲ್ಲಿ Artificial Intelligence ಎಂಬ ಅಂತರರಾಷ್ಟ್ರೀಯ ವೈಜ್ಞಾನಿಕ ಪತ್ರಿಕೆಯ ಸಂಪಾದಕರಾದ ಪ್ರೊ. ರಿಕ್ ಬ್ರಿಗ್ಸ್ ಅವರು ತಮ್ಮ ಭಾಷಣದಲ್ಲಿ ಇಂಗ್ಲಿಷ್ ಭಾಷಾ ವಿದ್ಯಾರ್ಥಿಗಳ ಪೈಕಿ ಶೇ.85ರಷ್ಟು ಮಂದಿಯ ಬುದ್ಧಿಮತ್ತೆ ಭಾರತೀಯ ಮಾತೃಭಾಷೆಗಳನ್ನು ಹೊಂದಿದವರಿಗಿಂತ ಕೆಳಮಟ್ಟದಲ್ಲಿದೆ ಎಂದು ಸ್ಪಷ್ಟವಾಗಿ ಹೇಳಿದ್ದರು.

ತಜ್ಞರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಪ್ರಸ್ತುತ ಕನ್ನಡ ಭಾಷೆಯ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ನವೆಂಬರ್ ತಿಂಗಳಲ್ಲಿ ನಮ್ಮೆಲ್ಲರಿಗೆ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಜಾಗೃತಗೊಳ್ಳುತ್ತದೆ. ಸಭೆ, ಸಮಾರಂಭಗಳು ನಡೆಯುತ್ತವೆ. ಭಾಷಣಗಳು, ಚರ್ಚಾಗೋಷ್ಠಿಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಕೆಲವರು ಅನ್ಯ ಭಾಷೆಗಳ ಫಲಕಗಳಿಗೆ, ಸೂಚನಾ ಫಲಕಗಳಿಗೆ ಮಸಿ ಬಳಿಯುವಂತಹ ಕೃತ್ಯಗಳನ್ನು ನಡೆಸುತ್ತೇವೆ. ಇದರ ಬದಲಾಗಿ ನಮ್ಮ ಸುತ್ತಮುತ್ತಲಿರುವ ಕನ್ನಡ ಮಾಧ್ಯಮ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಗಮನಹರಿಸುವುದು, ಭಾಷಣಗಳಲ್ಲಿ, ದಿನನಿತ್ಯದ ಬದುಕಿನಲ್ಲಿ, ಮಾತುಕತೆಗಳಲ್ಲಿ ಇಂಗ್ಲಿಷ್ ಶಬ್ದ ಬಳಸದಿರುವುದಕ್ಕೆ ಗಮನಹರಿಸುವುದು, ಮನೆಗಳಲ್ಲಿಂದು ಬೆಳಗಿನ ಉಪಾಹಾರದ ಬದಲು ಬ್ರೇಕ್ ಫಾಸ್ಟ್, ಟಿಫಿನ್ ದೊರೆಯುತ್ತಿದೆ. ಮಧ್ಯಾಹ್ನದ ಊಟವು ಲಂಚ್ ಅಥವಾ ಮೀಲ್ ಆಗಿದೆ. ಮಾವಿನ ಹಣ್ಣುಗಳು ಮ್ಯಾಂಗೋ, ದ್ರಾಕ್ಷಿ ಹಣ್ಣುಗಳು ಗ್ರೇಪ್ಸ್ ಆಗಿವೆ. ದೇವಸ್ಥಾನಗಳು ಟೆಂಪಲ್ ಆಗಿವೆ. ಮದುವೆಗಳು ವೆಡ್ಡಿಂಗ್ ಆಗಿವೆ. ಮದುವೆ ಆಮಂತ್ರಣ ಪತ್ರಿಕೆಗಳನ್ನು ನಾವು ಇಂಗ್ಲಿಷ್ ಭಾಷೆಯಲ್ಲಿ ಮುದ್ರಿಸುತ್ತಿದ್ದೇವೆ. ಈ ರೀತಿ ದಿನನಿತ್ಯ ನಾವು ಕನ್ನಡ ಭಾಷೆಯನ್ನು ನಾಶಪಡಿಸುತ್ತಿದ್ದೇವೆ. ಆದ್ದರಿಂದ ಅನ್ಯ ಭಾಷೆಗಳ ಫಲಕಗಳಿಗೆ ಮಸಿ ಬಳಿಯಲು ಹೊರಡುವ ಮುನ್ನ ನಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿ ಯೋಚಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡದ ಕವಿ ಜಿ.ಪಿ. ರಾಜರತ್ನಂರವರು ಹೇಳಿದ ನರಕಕ್ಕೆ ಇಳ್ಸಿ ನಾಲ್ಗೆ ಸೀಳ್ಸಿ, ಬಾಯ್ ಒಲಿಸಾಕಿದ್ರೂನೆ–ಮೂಗ್ನಲ್ ಕನ್ನಡ ಪದವಾಡ್ತೀನಿ, ನನ್ ಮನಸನ್ ನೀ ಕಾಣೆ ಎಂಬ ಸಾಲುಗಳನ್ನು ನಿತ್ಯ ಸ್ಮರಿಸಬೇಕಾಗಿದೆ.

ಕನ್ನಡಾಭಿಮಾನ, ರಾಷ್ಟ್ರೀಯತೆ ಸಮನ್ವಯತೆಗೆ ರಾಷ್ಟ್ರಕವಿ ಕುವೆಂಪು ಮಾದರಿ ಸರ್ವಶ್ರೇಷ್ಠ

ಗುಲ್ಬರ್ಗಾ ಕೇಂದ್ರೀಯ ವಿವಿ ಪ್ರಾಧ್ಯಾಪಕ ಡಾ.ರೋಹಿಣಾಕ್ಷ ಶಿರ್ಲಾಲು ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ಹಮ್ಮಿಕೊಂಡಿರುವ ಕನ್ನಡ ಹಬ್ಬದಲ್ಲಿ ಶನಿವಾರ ಚಿಂತಕ ಡಾ.ರೋಹಿಣಾಕ್ಷ ಶಿರ್ಲಾಲು ಮಾತನಾಡಿದರು.

"ಇಂದು ಕುವೆಂಪು ಅವರ ಸಾಹಿತ್ಯದ ಅಪವ್ಯಾಖ್ಯಾನ ನಡೆಯುತ್ತಿದೆ. ಅವರು ಹೇಳದೇ ಇರುವ ಮಾತುಗಳನ್ನು ಹೇಳಿದ್ದಾರೆ ಎನ್ನುವ ರೀತಿಯಲ್ಲಿ ಬಿಂಬಿಸುವ ಪ್ರಯತ್ನಗಳು ನಡೆಯುತ್ತಿವೆ. ಈ ಕಾರಣಕ್ಕಾಗಿ ಕುವೆಂಪು ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಅವರ ಮೂಲ ಸಾಹಿತ್ಯ ಕೃತಿಗಳಿಗೆ ಹೋಗಬೇಕಿದೆ. ಅಲ್ಲದೆ, ಇಂದಿನ ಸಂದರ್ಭದಲ್ಲಿ ಕನ್ನಡಪರ ಅಭಿಮಾನ ವ್ಯಕ್ತವಾಗುವ ವೇದಿಕೆಗಳಲ್ಲಿ ಕೆಲವರು ಭಾರತವೆಂಬ ರಾಷ್ಟ್ರ ವ್ಯವಸ್ಥೆಗೆ ಸವಾಲಾಗುವ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. –ಡಾ.ರೋಹಿಣಾಕ್ಷ ಶಿರ್ಲಾಲು

ಮೈಸೂರು,ನ.4(ಪಿಎಂ)– ಕನ್ನಡಾಭಿಮಾನ ಮತ್ತು ಭಾರತದ ರಾಷ್ಟ್ರೀಯತೆ ಪ್ರಜ್ಞೆಯ ಸಮನ್ವಯತೆ ತತ್ವವಿರುವ ಸರ್ವ ಶ್ರೇಷ್ಠ ಹಾಗೂ ಸಾರ್ವಕಾಲಿಕ ಮಾದರಿಯನ್ನು ರಾಷ್ಟ್ರಕವಿ ಕುವೆಂಪು ನೀಡಿದ್ದು, ಇದನ್ನು ನಾವು ಅನುಸರಿಸಬೇಕಿದೆ ಎಂದು ಗುಲ್ಬರ್ಗಾ ಕೇಂದ್ರೀಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ ಆದ ಚಿಂತಕ ಡಾ.ರೋಹಿಣಾಕ್ಷ ಶಿರ್ಲಾಲು ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನ.6ರವರೆಗೆ ಹಮ್ಮಿಕೊಂಡಿರುವ 'ಕನ್ನಡ ಹಬ್ಬ–2023'ರ ಪ್ರಯುಕ್ತ ಶನಿವಾರ ಆಯೋಜಿಸಿದ್ದ ಕನ್ನಡ ಸಂವಾದದಲ್ಲಿ 'ಭಾರತ–ಕರ್ನಾಟಕ ಸಮನ್ವಯ, ಕುವೆಂಪು ಮಾದರಿ' ಕುರಿತು ಅವರು ವಿಚಾರ ಮಂಡಿಸಿದರು.

ಕನ್ನಡದ ಅಭಿಮಾನ ಎನ್ನುವುದು ರಾಷ್ಟ್ರದ ಸಮಗ್ರತೆಯ ಭಾವನೆಗೆ ಯಾವ ರೂಪದಲ್ಲೂ ಧಕ್ಕೆ ತರಬಾರದೆಂಬ ದೊಡ್ಡ ಕಾಳಜಿ ಕುವೆಂಪು ಅವರಲ್ಲಿತ್ತು. ದೇಶದ ಭಾಷೆಗಳಲ್ಲಿ ವ್ಯತ್ಯಾಸವಿದ್ದರೂ ಬೇರೆ ಬೇರೆ ರಾಜ್ಯಗಳ ಕಲಾ ಮತ್ತು ಸಾಹಿತ್ಯದ ವಸ್ತು ಹಾಗೂ ದೃಷ್ಟಿಗಳಲ್ಲಿ ಅಖಿಲ ಭಾರತೀಯತೆಯ ಏಕೈಕ ಮೂಲ ಸಂಸ್ಕೃತಿಯು ಶೇ.95ಕ್ಕಿಂತಲೂ ಹೆಚ್ಚು ಸರ್ವ ಸಾಧಾರಣವಾಗಿದೆ. ಆ ಮೂಲ ಸಂಸ್ಕೃತಿಯ ಬೆಸುಗೆ ನಮ್ಮ ದೇಶದ ಒಗ್ಗಟ್ಟನ್ನು ಎಂದಿಗೂ ಒಡೆಯುವುದಿಲ್ಲ ಎಂದು ಕುವೆಂಪು ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದು ಸ್ಮರಿಸಿದರು. ಹೀಗೆ ಪರಸ್ಪರ ಒಳಗೊಳ್ಳುವಿಕೆಯ ಮಾದರಿಯನ್ನು ಕುವೆಂಪು ಅವರ ಸಾಹಿತ್ಯದಲ್ಲಿ ಕಾಣಬಹುದು. ಹಾಗಾಗಿ ಕರ್ನಾಟಕ ಅಭಿಮಾನ ಮತ್ತು ಭಾರತೀಯ ಪ್ರಜ್ಞೆ ಎರಡೂ ಜೊತೆಗೆ ಸೇರಿಕೊಳ್ಳುತ್ತವೆ. ಐಕ್ಯತತ್ವ ಕುವೆಂಪು ಅವರ ಇಡೀ ವಿಚಾರದಲ್ಲಿದೆ. ಕೇರಳ, ಕರ್ನಾಟಕ, ಆಂಧ್ರ ಪ್ರದೇಶ ಮೊದಲಾದವೆಲ್ಲವೂ ಭಾರತೀಯತೆಯ ಅಂಗ ರೂಪಗಳು. ಭಾರತಿ ತಾಯಿ. ಇವರೆಲ್ಲಾ ಆ ತಾಯಿಯ ತನುಜಾತೆಯರು. ಕೇರಳಾಭಿಮಾನ, ಕರ್ನಾಟಕಾಭಿಮಾನ, ಆಂಧ್ರಾಭಿಮಾನ ಸೇರಿದಂತೆ ಯಾವುದೇ ಭಾಷಾಭಿಮಾನವು ದ್ವೇಷ, ಅಸಹನೆ ಬುದ್ಧಿಗೆ ಎಡೆಗೊಡದೇ ಭಾರತಾಭಿಮಾನದ ಆಶ್ರಯದಲ್ಲಿ ತಮ್ಮ ತಮ್ಮ ಏಳಿಗೆಯನ್ನು ಸಾಧಿಸಬೇಕು ಎನ್ನುವುದು ಕುವೆಂಪು ಅವರ ಶ್ರೇಷ್ಠ ಚಿಂತನೆಯಾಗಿದೆ ಎಂದು ವಿವರಿಸಿದರು. ಇಂದಿನ ಭಾಷಾಭಿಮಾನ ಚಳುವಳಿಗಳಲ್ಲಿ ಕುವೆಂಪು ಪ್ರತಿಪಾದಿಸಿದ ವಿಚಾರಧಾರೆಗಳನ್ನು ದೂರಕ್ಕೆ ಸರಿಸಿರುವುದೇ ಹೆಚ್ಚು. ಹಾಗಾಗಿ ಕನ್ನಡಭಿಮಾನ ಮತ್ತು ರಾಷ್ಟ್ರೀಯವಾದ ಎರಡಕ್ಕೂ ಕುವೆಂಪು ಒಂದು ಸಾರ್ವಕಾಲಿಕ ಮಾದರಿ. ಕುವೆಂಪು ರಚಿತ ನಮ್ಮ ನಾಡಗೀತೆಯ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಸಾಲುಗಳೇ ಭಾಷಾಭಿಮಾನ ಮತ್ತು ರಾಷ್ಟ್ರಾಭಿಮಾನದಲ್ಲಿ ಸಮನ್ವಯತೆ ಇರಬೇಕೆಂಬ ಸಂದೇಶ ತಿಳಿಸುತ್ತವೆ. ನಾಡಗೀತೆ ಒಳಗೆ ತಮ್ಮ ಸಮಗ್ರ ತಾತ್ವಿಕತೆಯನ್ನು ಕುವೆಂಪು ಕಟ್ಟಿಕೊಟ್ಟಿದ್ದಾರೆ ಎಂದರು.

ಇಂದಿನ ಸಂದರ್ಭದಲ್ಲಿ ಸಾಕಷ್ಟು ಜನ ಕುವೆಂಪು ಅವರ ಕನ್ನಡಭಿಮಾನ, ಭಾರತೀಯತೆ, ಆಧ್ಯಾತ್ಮ ಹಾಗೂ ವೈಚಾರಿಕತೆ ಚಿಂತನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಕುವೆಂಪು ಕುರಿತು ಮಾತನಾಡುತ್ತಿರುವ ಅನೇಕ ಪ್ರಸಂಗಗಳು ನಮ್ಮ ಮುಂದಿವೆ. ಈ ಹಿನ್ನೆಲೆಯಲ್ಲಿ ಕುವೆಂಪು ತಮ್ಮ ಸಾಹಿತ್ಯದಲ್ಲಿ ಭಾರತ ಮತ್ತು ಕರ್ನಾಟಕ ನಡುವೆ ಸಮನ್ವಯತೆ ಸಾಧಿಸಿದ್ದನ್ನು ನಾವು ಅರಿಯಬೇಕಿದೆ. ಅವರಲ್ಲಿ ಕನ್ನಡಾಭಿಮಾನ ಮತ್ತು ಭಾರತದ ಅಭಿಮಾನ ಏಕಕಾಲಕ್ಕೆ ಪ್ರಕಟವಾಗಿತ್ತು ಎಂದು ಹೇಳಿದರು.

ಮುಕ್ತ ವಿವಿ ಪ್ರಾಧ್ಯಾಪಕಿ ಡಾ. ಹೆಚ್.ಆರ್.ಪವಿತ್ರ ಉಪಸ್ಥಿತರಿದ್ದರು. ಇದಕ್ಕೂ ಮುನ್ನ 'ತಾಯಿ ಭಾರತಿಗೆ ಕನ್ನಡದಾರತಿ' ಶೀರ್ಷಿಕೆಯಡಿ ಕನ್ನಡಾಭಿಮಾನದ ಗೀತೆಗಳನ್ನು ಸಾದರಪಡಿಸಲಾಯಿತು. ಗಾಯಕಿಯರಾದ ಗೌರವ್ ಸುಧಾ ಮುರಳಿ, ಹರ್ಷಿತಾ ಮತ್ತು ಶಿಲ್ಪ ಸಂದೀಪ್ ಗೀತೆಗಳನ್ನು ಪ್ರಸ್ತುತಪಡಿಸಿದರೆ, ಇವರೊಂದಿಗೆ 50ಕ್ಕೂ ಹೆಚ್ಚು ಗಾಯಕಿಯರು ಧ್ವನಿಗೂಡಿಸಿದರು. ಡಾ.ಡಿ.ಎಸ್.ಕರ್ಕಿ ರಚಿತ 'ಹಚ್ಚೇವು ಕನ್ನಡದ ದೀಪ...' ಕುವೆಂಪು ರಚಿತ 'ದೀಕ್ಷೆಯ ತೊಡು ಇಂದೇ.. ಕಂಕಣ ಕಟ್ಟಿಂದೇ, ಕನ್ನಡ ನಾಡೊಂದೇ...' ಗೀತೆಗಳು ಸೇರಿದಂತೆ ಹಲವು ಕನ್ನಡಾಭಿಮಾನದ ಹಾಡುಗಳನ್ನು ಸಾದಪಡಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಔಷಧೀಯ ಸಸ್ಯಗಳು ಭಾರತೀಯ ಪರಂಪರೆ, ಸಂಸ್ಕೃತಿಯ ಜೀವಾಳ



ಮೈಸೂರು,ನ.4(ಆರ್‌ಕೆ)– ಔಷಧೀಯ ಸಸ್ಯಗಳು ಭಾರತೀಯ ಪರಂಪರೆ ಮತ್ತು ಸಂಸ್ಕೃತಿಯ ಜೀವಾಳ ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಿಂದ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶುಕ್ರವಾರ ಆಯೋಜಿಸಿದ್ದ 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಔಷಧೀಯ ಗುಣವುಳ್ಳ ಸಸ್ಯಗಳು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಪ್ರತೀಕವಾಗಿದ್ದು, ಅವುಗಳನ್ನು ರಕ್ಷಿಸಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ರಾಮಾಯಣ, ಮಹಾಭಾರತಗಳಲ್ಲೂ ಸಹ ಔಷಧಿ ಸಸ್ಯಗಳ ಮಹತ್ವದ ಬಗ್ಗೆ ಉಲ್ಲೇಖವಿದ್ದು, ಅದರ ಬಳಕೆ, ಉಪಯೋಗದ ಬಗ್ಗೆ ಜನರಿಗೆ ಅರಿವು ಮೂಡಿಸಬೇಕೆಂದು ಸಲಹೆ ನೀಡಿದರು.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣಹೆಗ್ಡೆ, ಆಯು ರ್ವೇದ ತಜ್ಞರಾದ ಡಾ.ಆಂಜನೇಯಮೂರ್ತಿ, ಡಾ.ಗುರು ಬಸವರಾಜು, ಬಾಬಾ ರಾಮ್‌ದೇವ್ ಟ್ರಸ್ಟ್‌ನ ಶಶಿಕುಮಾರ್, ಮಧುಸೂದನ್, ರಾಜೇಶ್ ಬೋರೆ ಈ ಸಂದರ್ಭ ಇದ್ದರು.

ಮೈಸೂರಲ್ಲಿ ಗ್ರೂಪ್–ಸಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಆರಂಭ

2599 ಮಂದಿ ಹಾಜರು, 3811 ಗೈರು

ಮೈಸೂರು, ನ. 4(ಆರ್‌ಕೆ)– ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್–ಸಿ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ವು ಇಂದು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳು ಯಾವುದೇ ಗೊಂದಲಗಳಿಲ್ಲದೆ ಮೈಸೂರಲ್ಲಿ ಸುಸೂತ್ರವಾಗಿ ನಡೆದವು. ಅರ್ಜಿ ಸಲ್ಲಿಸಿ ನೋಂದಣಿಯಾಗಿದ್ದ 5410 ಮಂದಿ ಅಭ್ಯರ್ಥಿಗಳ ಪೈಕಿ ಮೈಸೂರಿನ 14 ಕೇಂದ್ರಗಳಲ್ಲಿ ಇಂದು ನಡೆದ ಪರೀಕ್ಷೆಗೆ ಕೇವಲ 2,599 ಮಂದಿ ಮಾತ್ರ ಹಾಜರಾಗಿದ್ದು, 3,811 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು ಎಂದು ಪರೀಕ್ಷಾ ಸಮನ್ವಯಾಧಿಕಾರಿಯಾದ ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕ ಪಾಂಡು ತಿಳಿಸಿದ್ದಾರೆ.

ಇಂದು ಮಧ್ಯಾಹ್ನ 1.30ರಿಂದ 4.30 ಗಂಟೆವರೆಗೆ ಸಾಮಾನ್ಯಜ್ಞಾನ ವಿಷಯದಲ್ಲಿ ಪರೀಕ್ಷೆ ನಡೆದಿದ್ದು, ನಾಳೆ (ನ. 4) ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30 ಗಂಟೆವರೆಗೆ ಹಾಗೂ ಮಧ್ಯಾಹ್ನ 2.30ರಿಂದ ಸಂಜೆ 5.30 ಗಂಟೆವರೆಗೆ ಎರಡು ವಿಷಯಗಳಲ್ಲಿ ಪರೀಕ್ಷೆ ನಡೆಯಲಿದ್ದು, 11 ಕೇಂದ್ರಗಳನ್ನು ಸಿದ್ಧಪಡಿಸಲಾಗಿದೆ. ಒಟ್ಟು 5,332 ಮಂದಿ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿಯಾಗಿದ್ದಾರೆ ಎಂದು ಮಾಹಿತಿ ನೀಡಿದರು. ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ಪ್ರದೇಶದಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.



ಡೋಲ್ ವಿದ್ವಾನ್ ಎಸ್.ಪುಟ್ಟರಾಜು ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೇಯರ್ ಶಿವಕುಮಾರ್, ಮಾಜಿ ಕಾರ್ಪೋರೇಟರ್ ಶಿವಣ್ಣ, ಕಾಂಗ್ರೆಸ್ ಮುಖಂಡ ಅಕ್ಬರ್, ಕಾಂಗ್ರೆಸ್ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ಇನ್ನಿತರರು ಇದ್ದರು.



ಸಹಕಾರ ಕ್ಷೇತ್ರದಲ್ಲಿ ಮೂರು ದಶಕದ ಸೇವೆಗಾಗಿ ಡಾ.ಎಪಿಜೆ ಅಬ್ದುಲ್ ಕಲಾಂ ಪ್ರಶಸ್ತಿ ಪಡೆದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಅವರನ್ನು ಶ್ರೀ ಸಿದ್ಧಿವಿನಾಯಕ, ಸ್ನೇಹ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಉಮಾಶಂಕರ್ ಅವರ ಪತ್ನಿ ಶ್ರೀಮತಿ ಸುನೀತಾ ಉಮಾಶಂಕರ್, ಒಕ್ಕಲಿಗರ ಸಂಘದ ನಿರ್ದೇಶಕ ಜಯರಾಮ್, ಆನಂದ್, ರಾಜೇಶ್, ರಮೇಶ್, ಭೈರೇಗೌಡ, ಜೆಡಿಎಸ್ ವಾರ್ಡ್ ಅಧ್ಯಕ್ಷ ಕುಮಾರ್, ತಿಮ್ಮೇಗೌಡ, ಶ್ರೀನಿವಾಸಗೌಡ, ಮರಿಗೌಡ, ಚೈತ್ರಾಂಜಲಿ ರಮೇಶ್, ಸತ್ಯನಾರಾಯಣ, ಕೃಷ್ಣೇಗೌಡ, ಮಹೇಶ್, ಸಿ.ಡಿ.ಕುಮಾರ್, ಲೋಕೇಶ್ ಧನಂಜಯ್‌ಗೌಡ, ಬಿ.ಕೆ.ಕುಮಾರ್, ವೆಂಕಟೇಶ್, ರಂಗೇಶ್ ಇನ್ನಿತರರಿದ್ದರು.

ಬಾಲೋದ್ಯಾನ ನುಡಿಸಿರಿ



ಮೈಸೂರು, ನ. 4– ಮೈಸೂರಿನ ಜಯನಗರದಲ್ಲಿರುವ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ 'ಬಾಲೋದ್ಯಾನ ನುಡಿಸಿರಿ' ಕಾರ್ಯಕ್ರಮ ನಡೆಯಿತು.

ಶಾಲೆಯ ಆಡಳಿತ ಮಂಡಳಿ ಕಾರ್ಯದರ್ಶಿ ಎಂ.ಎಸ್.ನಾಗೇಶ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಾಜಿ ಅಧ್ಯಕ್ಷೆ, ಎಂ.ಸಿ. ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕನ್ನಡ ರಾಜ್ಯೋತ್ಸವ ಅಂಗವಾಗಿ ಏರ್ಪಡಿಸಲಾಗಿದ್ದ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಶಾಲೆ ಮುಖ್ಯ ಆಡಳಿತಾಧಿಕಾರಿ ಶ್ರೀಮತಿ ಭವಾನಿ ನಾಗೇಶ್, ಪ್ರಾಂಶುಪಾಲೆ ಶ್ರೀಮತಿ ಪ್ರತಿಭಾ ಅಶೋಕ್ ಉಪಸ್ಥಿತರಿದ್ದರು. ಕನ್ನಡ ಶಿಕ್ಷಕಿ ಶ್ರೀಮತಿ ರಮ್ಯ ಸ್ವಾಗತಿಸಿದರೆ, ಶಿಕ್ಷಕಿ ಶ್ರೀಮತಿ ಪುಷ್ಪಾ ವಂದಿಸಿದರು. ಕನ್ನಡ ಶಿಕ್ಷಕ ಎಂ.ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

ಇಂದು 'ಪ್ರಾಜೆಕ್ಟ್ ಡಾರ್ಲಿಂಗ್' ನಾಟಕ

ಮೈಸೂರು,ನ.4–ಬಹುಭಾಷಾ ಕಲಾವಿದ ಪ್ರಕಾಶ್‌ರಾಜ್ ಅವರ 'ನಿರ್ದಿಗಂತ' ರಂಗ ತಂಡದಿಂದ ಮೈಸೂರಿನ ನಟನ ರಂಗಶಾಲೆಯಲ್ಲಿ ಭಾನುವಾರ(ನ.5) ಸಂಜೆ 6.30ಕ್ಕೆ 'ಪ್ರಾಜೆಕ್ಟ್ ಡಾರ್ಲಿಂಗ್' ನಾಟಕ ಪ್ರದರ್ಶನವಿದೆ. ನೂರು ನಿಮಿಷಗಳ ಈ ಪ್ರಾಯೋಗಿಕ ನಾಟಕವನ್ನು ಶರಣ್ಯಾ ರಾಮಪ್ರಕಾಶ್ ರಚಿಸಿ, ನಿರ್ದೇಶಿಸಿದ್ದು, ಮಾತಂಗಿ ಪ್ರಸನ್ನ, ಶೋಭನಾ ಕುಮಾರಿ, ಬಿ.ವಿ.ಶೃಂಗ, ಶಶಾಂಕ ರಾಜಶೇಖರ್, ಸುರಭಿ ವಸಿಷ್ಠ, ಅಶ್ವಿನಿ ವಾರಿಯರ್ ಅಭಿನಯಿಸಲಿದ್ದಾರೆ. ಸಹಲೇಖಕಿ ಕೃತಿ ಆರ್.ಪುರಪ್ಪೇಮನೆ, ಶ್ರೀಧರ್‌ಪ್ರಸಾದ್ ರಂಗ ನಿರ್ವಹಣೆ, ಕಾಜು ಗುತ್ತು ಕಲೆ ಸಹಕಾರ ನೀಡಿದ್ದು, ಸಿದ್ಧಾರ್ಥ, ದಾದಾಪೀರ್ ಜೈಮನ್ ಬರೆದಿರುವ ಹಾಡುಗಳಿಗೆ ರೂಮಿ ಹರೀಶ್, ಪ್ರಿಯಶ್ರೀ ಮಣಿ ಸಂಗೀತ ನೀಡಿದ್ದಾರೆ.

ರಾಜ್ಯದಲ್ಲಿ ಬರ: ಅನಗತ್ಯ ವೆಚ್ಚಗಳಿಗೆ ಸರ್ಕಾರದ ಕಡಿವಾಣ

● ಗ್ಯಾರಂಟಿಗಳಿಗಷ್ಟೇ ಆದ್ಯತೆ ● ಕೇಂದ್ರದ ನೆರವು ಸಂದಾಯ





ಬೆಂಗಳೂರು, ನ.4(ಕೆಎಂಶಿ)– ರಾಜ್ಯಾದ್ಯಂತ ಬರಗಾಲ ಆವರಿಸಿರುವ ಹಿನ್ನೆಲೆಯಲ್ಲಿ ಅನಗತ್ಯ ವೆಚ್ಚಗಳಿಗೆ ಸರ್ಕಾರ ಕಡಿವಾಣ ಹಾಕಿದೆ.

ರಾಜ್ಯದ ಬಹುಭಾಗ ಮುಂಗಾರು ಹಾಗೂ ಹಿಂಗಾರು ಮಳೆ ವಿಫಲವಾಗಿದ್ದು ಬರಗಾಲ ತಾಂಡವವಾಡುತ್ತಿರುವುದರಿಂದ ಸರ್ಕಾರ ಖರ್ಚು–ವೆಚ್ಚಗಳ ವಿಚಾರದಲ್ಲಿ ಬಿಗಿ ನಿಲುವು ತೆಗೆದುಕೊಂಡಿದೆ.

ಮುಕ್ತಾಯ ಹಂತದಲ್ಲಿರುವ ಕಾಮಗಾರಿಗಳನ್ನು ಹೊರತುಪಡಿಸಿ ಹೆಚ್ಚುವರಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡದಿರುವಂತೆ ಎಲ್ಲಾ ಇಲಾಖೆಗಳಿಗೆ ಆದೇಶ ಮಾಡಲಾಗಿದೆ. ಈ ಹಿಂದಿನ ಸರ್ಕಾರ ಹೆಚ್ಚುವರಿಯಾಗಿ ಕೈಗೊಂಡ ಕಾಮಗಾರಿಗಳ ಬಾಕಿ ಬಿಲ್ಲಿನ ಪ್ರಮಾಣ ಇಪ್ಪತ್ತೇಳು ಸಾವಿರ ಕೋಟಿ ರೂಪಾಯಿಗಳನ್ನು ಮೀರಿದ್ದು, ಅದನ್ನು ಪಾವತಿಸುವುದರೊಂದಿಗೆ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವ ಅನಿವಾರ್ಯತೆ ಇರುವುದರಿಂದ ಯಾವುದೇ ಹೊಸ ಹೊರೆಗಳು ಬೇಡ ಎಂದು ಸೂಚನೆ ನೀಡಲಾಗಿದೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ನಿರ್ವಹಿಸುವ ಮಟ್ಟದಲ್ಲಿದ್ದು, ಸ್ವಲ್ಪ ಎಚ್ಚರ ತಪ್ಪಿದರೂ ಆರ್ಥಿಕ ಸಂಕಷ್ಟ ಎದುರಾಗುತ್ತದೆ. ರೈತರ ಕೈ ಪಂಪ್‌ಸೆಟ್‌ಗಳಿಗೆ ಒದಗಿಸುವ ವಿದ್ಯುತ್‌ಗೆ ಈ ವರ್ಷ 4000 ಕೋಟಿ ರೂ. ಪಾವತಿಸುವ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ತೆರಿಗೆ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಿದ್ದು ಕಳೆದ ವರ್ಷದ ಅಕ್ಟೋಬರ್ ಅಂತ್ಯಕ್ಕೆ ಹೋಲಿಸಿದರೆ, ಈ ವರ್ಷದ ಅಕ್ಟೋಬರ್ ಅಂತ್ಯದ ವೇಳೆಗೆ 10,000 ಕೋಟಿ ರೂ.ಗಳಷ್ಟು ಹೆಚ್ಚು ತೆರಿಗೆ ಸಂಗ್ರಹ ಮಾಡಲಾಗಿದೆ.

ಜಿ.ಎಸ್.ಟಿ.ಬಾಬ್ತಿನಲ್ಲಿ ಕಳೆದ ವರ್ಷದ ಅಕ್ಟೋಬರ್ ಅಂತ್ಯಕ್ಕೆ 47 ಸಾವಿರ ಕೋಟಿ ರೂಪಾಯಿ ಸಂಗ್ರಹಿಸಲಾಗಿತ್ತು. ಆದರೆ ಈ ವರ್ಷ ಅಕ್ಟೋಬರ್ ಅಂತ್ಯದ ವೇಳೆಗೆ 52760 ಕೋಟಿ ರೂಪಾಯಿಗಳಷ್ಟು ಸಂಗ್ರಹವಾಗಿದೆ. ಅಬಕಾರಿ ಬಾಬ್ತಿನಲ್ಲಿ ಕಳೆದ ವರ್ಷ ಅಕ್ಟೋಬರ್ ಅಂತ್ಯದ ವೇಳೆಗೆ 17 ಸಾವಿರ ಕೋಟಿ ರೂಪಾಯಿ ಸಂಗ್ರಹವಾಗಿದ್ದರೆ, ಈ ವರ್ಷ 19 ಸಾವಿರ ಕೋಟಿ ರೂ. ಸಂಗ್ರಹವಾಗಿದೆ.

ಗಣಿ ಬಾಬತ್ತಿನಿಂದ ಕಳೆದ ವರ್ಷ ಅಕ್ಟೋಬರ್ ಅಂತ್ಯದ ಹೊತ್ತಿಗೆ 3000 ಕೋಟಿ ರೂಪಾಯಿ ಸಂಗ್ರಹವಾಗಿದ್ದರೆ, ಈ ವರ್ಷ 3900 ಕೋಟಿ ರೂಪಾಯಿ ಸಂಗ್ರಹವಾಗಿದೆ ಎಂದು ಉನ್ನತ ಮೂಲಗಳು ವಿವರಿಸಿವೆ. ಸ್ವತ್ತುಗಳ ಮಾರ್ಗಸೂಚಿ ಮೌಲ್ಯವನ್ನು ಹೆಚ್ಚಿಸಲಾಗಿದ್ದು, ಮಾರ್ಚ್ ಅಂತ್ಯದ ವೇಳೆಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಕಳೆದ ವರ್ಷಕ್ಕಿಂತ ದುಪ್ಪಟ್ಟು ಹಣವನ್ನು ಸಂಗ್ರಹಿಸಬೇಕು ಎಂದು ಗುರಿ ನಿಗದಿ ಮಾಡಲಾಗಿದೆ.

ಈ ಮಧ್ಯೆ ಕೇಂದ್ರ ಸರ್ಕಾರದ ವತಿಯಿಂದ ರಾಜ್ಯಕ್ಕೆ ಬರಬೇಕಾದ ಬಹುತೇಕ ಹಣ ಬಂದಿದೆ. ವಿವಿಧ ಯೋಜನೆಗಳಡಿ ಕೇಂದ್ರದಿಂದ ಬರಬೇಕಾದ ಹೊಂದಾಣಿಕೆ ಹಣ ಸಕಾಲಕ್ಕೆ ಪಾವತಿಯಾಗುತ್ತಿದ್ದು ಜಿಎಸ್ಟಿ ಬಾಕಿಯಲ್ಲೂ ಬಹುತೇಕ ಹಣ ಬಂದಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ವಸುಂಧರೋತ್ಸವ-2023ಕ್ಕೆ ಚಾಲನೆ

ಭರತನಾಟ್ಯ ಭಾರತೀಯ ಪರಂಪರೆಯ ಪ್ರಾಚೀನ ಕಲೆ

ಮೈಸೂರು ರಾಜವಂಶಸ್ಥೆ ಕಾಮಾಕ್ಷಿ ದೇವಿ ಅಭಿಮತ





ಮೈಸೂರು, ನ.4(ಎಸ್‌ಪಿಎನ್)– ಭರತನಾಟ್ಯ ಬರಿ ಕಲೆಯಲ್ಲ. ಅದೊಂದು ಬ್ರಹ್ಮಾಂಡ ಸೌಂದರ್ಯವನ್ನು ವರ್ಣಿಸುವ ಕಲೆ ಎಂದು ರಾಜವಂಶಸ್ಥೆ, ಜಯಚಾಮರಾಜೇಂದ್ರ ಒಡೆಯರ್ ಅವರ ಪುತ್ರಿ ಕಾಮಾಕ್ಷಿದೇವಿ ಅಭಿಪ್ರಾಯಪಟ್ಟರು.

ಮೈಸೂರು ಝಾನ್ಸಿರಾಣಿ ಲಕ್ಷ್ಮೀಬಾಯಿ(ಜೆಎಲ್‌ಬಿ) ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಆಯೋಜಿಸಿರುವ 8ದಿನಗಳ (ನ.4ರಿಂದ ನ.11ರವರೆಗೆ) ವಸುಂಧರೋತ್ಸವ–2023ರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭರತನಾಟ್ಯ ಭಾರತೀಯ ಪರಂಪರೆಯ ಪ್ರಾಚೀನ ಕಲೆ. ಇದನ್ನು ಉಳಿಸಿ, ಬೆಳೆಸುವುದು ಯುವ ಸಮೂಹದ ಮೇಲಿದೆ. ಭರತನಾಟ್ಯಕ್ಕೆ ತನ್ನದೆ ಆದ ಇತಿಹಾಸವಿದೆ. ಇದನ್ನು ನಮ್ಮ ಹಿರಿಯರು ಅನಾದಿ ಕಾಲದಿಂದಲೂ ರಕ್ಷಿಸಿ, ಉಳಿಸಿದ್ದಾರೆ. ಅದನ್ನು ಮುಂದುವರೆಸಿಕೊಂಡು ಹೋಗುವ ಸಮಯ ಇದಾಗಿದೆ. ತಾಯಿ ಶ್ರೀ ಚಾಮುಂಡೇಶ್ವರಿ ದೇವಿ ನಿಮ್ಮೆಲ್ಲರಿಗೂ ಕೃಪೆ ತೋರಲಿ ಎಂದು ತಿಳಿಸಿದರು.

ವಿದುಷಿ ಡಾ.ವಸುಂಧರ ದೊರೆಸ್ವಾಮಿ ಅವರು ಭರತನಾಟ್ಯ ಕ್ಷೇತ್ರದಲ್ಲಿ ರಾಜ್ಯ, ದೇಶ ಹಾಗೂ ವಿದೇಶಗಳಲ್ಲೂ ಹೆಸರುವಾಸಿಯಾಗಿದ್ದಾರೆ. ಅವರ ನೇತೃತ್ವದಲ್ಲಿ ಡಾ.ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ವಿದ್ಯಾರ್ಥಿಗಳು 8 ದಿನಗಳ ಕಾಲ ವಿವಿಧ ನೃತ್ಯಾಸನಗಳನ್ನು ಪ್ರದರ್ಶಿಸಿ, ನಾಟ್ಯ ಪ್ರಿಯರ ರಂಜಿಸಲಿದ್ದಾರೆ. ಇಂತಹ ಪ್ರತಿಭೆಗಳಿಗೆ ನೃತ್ಯ ಕಲಿಸಿ, ಪ್ರದರ್ಶನಕ್ಕೆ ವೇದಿಕೆ ಕಲ್ಪಿಸುತ್ತಿರುವ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ಪದಾಧಿಕಾರಿಗಳಿಗೆ ಕೆಲಸ ಉತ್ತಮವಾಗಿದೆ ಎಂದು ತಿಳಿಸಿದರು.

ವಿವಿಧಡೆಯಿಂದ ಆಗಮಿಸುವ ಕಲಾವಿದರು ನ.5ರಂದು ವಿದುಷಿ ಸಂದೇಶ ಭಾರ್ಗವ್, ಡಾ.ಸಂಯುಕ್ತ ಕೆ.ಅರಸ್ ಭರತನಾಟ್ಯ ನಡೆಸಿಕೊಡಲಿದ್ದಾರೆ. ನ.6ರಂದು ಬೆಂಗಳೂರು ವಿದ್ವಾನ್ ಅಂಜನ ರಮೇಶ್ ಶರ್ಮಾ ಭರತನಾಟ್ಯ, ಮುಂಬೈನ ಮುಕ್ತ ಜೋಶಿ ಕಥಕ್ ಶೈಲಿ ನೃತ್ಯ ಪ್ರಸ್ತುತಪಡಿಸಲಿದ್ದಾರೆ. ನ.7ರಂದು ಕಲಾವಿದರಾದ ಮೇಘನ ರಮೇಶ್ ಶರ್ಮಾ ಮತ್ತು ಪ್ರೀತಿ ರಾಮಮೂರ್ತಿ ಭರತನಾಟ್ಯ ನಡೆಸಿಕೊಡಲಿದ್ದಾರೆ. ನ.8ರಂದು ಮುಂಬೈನ ವಿದ್ವಾನ್ ಸುಜಾತ ನಾಯರ್ ಮೋಹಿನಿ ಅಟ್ಟಂ, ಬೆಂಗಳೂರಿನ ವಿದುಷಿ ಸೌಂದರ್ಯ ಶ್ರೀವತ್ಸ ಭರತನಾಟ್ಯ ನಡೆಸಿಕೊಡಲಿದ್ದಾರೆ. ನ.9ರಂದು ವಿದುಷಿ ಅನುಶ್ರೀ ಪದ್ಮನಾಭ ಒಡಿಸ್ಸಿ ನೃತ್ಯ ನಡೆಸಿಕೊಡಲಿದ್ದಾರೆ. ವಿದ್ವಾನ್ ಕೊಲ್ಕತಾ ವಿದ್ವಾನ್ ಅತನು ದಾಸ್ ಭರತನಾಟ್ಯ ನಡೆಸಿಕೊಡಲಿದ್ದಾರೆ. ನ.10ರಂದು ತ್ರಿಶೂರ್ ಬ್ರದರ್ಸ್ ವಿದ್ವಾನ್ ಕೃಷ್ಣ ಮೋಹನ್, ವಿದ್ವಾನ್ ರಾಮ್‌ಕುಮಾರ್‌ಮೋಹನ್ ಅವರು ಕರ್ನಾಟಕ ಸಂಗೀತ ಗಾಯನ ನಡೆಸಿಕೊಡಲಿದ್ದಾರೆ. ನ.11ರಂದು ಬೆಂಗಳೂರಿನ ಶ್ರೀಮತಿ ನಂದನ್ ಪ್ರದರ್ಶಕ ಕಲೆಗಳ ಕೇಂದ್ರದ ವಿದುಷಿ ಸೀಮಾ ಜವಹರ್ ಭರತನಾಟ್ಯ ನಡೆಸಿಕೊಡಲಿದ್ದಾರೆ.

ಈ ವೇಳೆ ಯುಎಸ್‌ಎನ ಪೂರ್ಣಿಮಾದೇವಿ ಕೆ.ಅರಸ್, ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ.ಎಂ.ಕೆ.ಶ್ರೀಧರ್, ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ಅಧ್ಯಕ್ಷ ಸವಿತ ರಮೇಶ್, ಕಾರ್ಯದರ್ಶಿ ಹೆಚ್.ಡಿ.ಶೃತಿ ಸಾಗರ್ ಉಪಸ್ಥಿತರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿ ಇಲ್ಲ

ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪ ಸ್ಪಷ್ಟನೆ

- ಬಿಜೆಪಿಯಲ್ಲಿ 12 ಆಕಾಂಕ್ಷಿಗಳಿದ್ದಾರೆ
- ಕಾಂಗ್ರೆಸ್ ಹೈಕಮಾಂಡ್‌ಗೆ ತಾಕತ್ ಇದೆಯೇ...
- ದಿನಕ್ಕೊಬ್ಬ ಅಜಿತ್ ಪವಾರ್ ಹುಟ್ಟಿಕೊಳ್ಳುತ್ತಿದ್ದಾರೆ



ಮೈಸೂರು, ನ.4(ಬಿಎಲ್‌ಯು)– ಮುಂಬರುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಇರುವುದಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಟಿಕೆಟ್ ಆಕಾಂಕ್ಷಿಗಳ ಜೊತೆ ಸಭೆ ನಡೆಸಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮುಂದಿನ ಲೋಕಸಭಾ ಚುನಾವಣೆಗೆ ಮಾತ್ರ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಇರುತ್ತದೆ ಎಂದರು.

ಆದರೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್‌ಗೆ ಬೆಂಬಲ ನೀಡುವುದಿಲ್ಲ ಎಂದು ಸ್ಪಷ್ಟನೆ ನೀಡಿದ ಈಶ್ವರಪ್ಪ ಈ ಕ್ಷೇತ್ರದಲ್ಲಿ ಬಿಜೆಪಿ ಒಮ್ಮೆಯೂ ಗೆದ್ದಿಲ್ಲ. ನಮ್ಮ ಪಕ್ಷದಲ್ಲಿ 12 ಆಕಾಂಕ್ಷಿಗಳಿದ್ದಾರೆ. ಯಾರೇ ಅಭ್ಯರ್ಥಿಯಾದರೂ ಅವರ ಗೆಲುವಿಗೆ ಶ್ರಮಿಸಲು ಕರೆ ನೀಡಲಾಗಿದೆ ಎಂದು ಹೇಳಿದರು.

ತಾಕತ್ತಿದ್ದರೆ ಕ್ರಮ ಕೈಗೊಳ್ಳಲಿ: ಮುಖ್ಯಮಂತ್ರಿ ಹುದ್ದೆ ವಿಚಾರವಾಗಿ ಯಾರೂ ಬಹಿರಂಗ ಹೇಳಿಕೆ ನೀಡದಂತೆ ಹೈಕಮಾಂಡ್ ಎಚ್ಚರಿಕೆ ನೀಡಿದರೂ ಕೆಲವು ಕಾಂಗ್ರೆಸ್ ನಾಯಕರು ಬಹಿರಂಗವಾಗಿ ಮಾತನಾಡುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ತಾಕತ್ತಿದ್ದರೆ ಪಕ್ಷದ ಶಿಸ್ತು ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಿ ಎಂದು ಸವಾಲು ಹಾಕಿದರು.

ಸಿಎಂ–ಡಿಸಿಎಂ ನಡುವೆ ಸಮನ್ವಯತೆ ಇಲ್ಲ: ಜಾತಿ ಗಣತಿ ವರದಿ ಬಿಡುಗಡೆ ವಿಚಾರದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ಸಮನ್ವಯತೆ ಇಲ್ಲ. ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಇದನ್ನು ನೋಡಿದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿಲ್ಲ, ಬದಲಿಗೆ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದೆ ಎಂದು ಗೇಲಿ ಮಾಡಿದರು.

ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗಲೇ ಜಾತಿಗಣತಿ ವರದಿ ಬಿಡುಗಡೆ ಮಾಡಬಹುದಿತ್ತು. ಕುಮಾರಸ್ವಾಮಿ ಸಿಎಂ ಆಗಿದ್ದಾಗಲೂ ಬಿಡುಗಡೆ ಮಾಡಬಹುದಿತ್ತು. ಕುಮಾರಸ್ವಾಮಿ ತಡೆದಿದ್ದರೆ ಸಮ್ಮಿಶ್ರ ಸರ್ಕಾರದಿಂದ ಹೊರಗೆ ಬರಬಹುದಿತ್ತು. ಆದರೆ ಈಗ ಜಾತಿ ಗಣತಿ ವರದಿ ಬಿಡುಗಡೆ ಮಾಡಲು ಮುಂದಾಗಿದ್ದಾರೆ. ಒಕ್ಕಲಿಗ ಹಾಗೂ ವೀರಶೈವ ಮಠಾಧೀಶರ ವಿರೋಧದ ನಡುವೆ ಜಾತಿ ಗಣತಿ ಬಿಡುಗಡೆ ಮಾಡುತ್ತಿದ್ದಾರೆ ಎಂದರು.

ಅಲ್ಪ ದಿನಗಳಲ್ಲಿ ಸರ್ಕಾರ ಪತನ

ಕಾಂಗ್ರೆಸ್ ಸರ್ಕಾರದಲ್ಲಿ ದಿನಕ್ಕೊಬ್ಬ ಅಜಿತ್ ಪವಾರ್ ಹುಟ್ಟಿಕೊಳ್ಳುತ್ತಿದ್ದಾರೆ. ಸತೀಶ್ ಜಾರಕಿಹೊಳಿ, ಡಿ.ಕೆ.ಶಿವಕುಮಾರ್, ಡಾ.ಪರಮೇಶ್ವರ್, ಪ್ರಿಯಾಂಕ್ ಖರ್ಗೆ ಇವರೇ ಅಜಿತ್ ಪವಾರ್ ಆಗಿದ್ದಾರೆ. ಪ್ರಿಯಾಂಕ್ ಖರ್ಗೆ ತಮ್ಮ ತಂದೆಗೆ ಸಿಎಂ ಸ್ಥಾನ ಕೇಳಿದ್ದರೆ ಮೆಚ್ಚಿಕೊಳ್ಳುತ್ತಿದ್ದೆ. ಆದರೆ ಅವರೇ ಮುಖ್ಯಮಂತ್ರಿ ಆಗಬೇಕೆಂದಿದ್ದಾರೆ. ಇದು ನಗೆಪಾಟಲಿನ ವಿಚಾರ. ಇದನ್ನೆಲ್ಲಾ ನೋಡಿದರೆ ಕಾಂಗ್ರೆಸ್ ಸರ್ಕಾರ ಪತನವಾಗುವುದು ನಿಶ್ಚಿತ. ತಿಂಗಳು ವರ್ಷಗಳಲ್ಲಿ ಅಲ್ಲ, ಅಲ್ಪ ದಿನಗಳಲ್ಲಿ ಸರ್ಕಾರ ಬಿದ್ದು ಹೋಗುತ್ತದೆ **–ಕೆ.ಎಸ್.ಈಶ್ವರಪ್ಪ**


ವನ್ಯಜೀವಿ ಛಾಯಾಗ್ರಾಹಕ ಮಧುಸೂದನ್‌ಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿ







ಮೈಸೂರು, ನ. 4–ಪತ್ರಿಕಾ ಛಾಯಾಗ್ರಾಹಕ ಹಾಗೂ ವನ್ಯಜೀವಿ ಛಾಯಾಗ್ರಾಹಕ ಎಸ್ ಆರ್ ಮಧುಸೂದನ್ ಅವರಿಗೆ ಕರ್ನಾಟಕ ಅರಣ್ಯ ಇಲಾಖೆ ಬೆಂಗಳೂರು ವತಿಯಿಂದ ವನ್ಯಜೀವಿ ಸಪ್ತಾಹದ ಅಂಗವಾಗಿ ಆಯೋಜಿಸಲಾದ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆಯಲ್ಲಿ ಕೃಷ್ಣಮೃಗ ಜಿಗಿಯುತ್ತಿರುವ ಛಾಯಾಚಿತ್ರಕ್ಕೆ ದ್ವಿತೀಯ ಪ್ರಶಸ್ತಿ ಹಾಗೂ ನಗದು ಬಹುಮಾನ ಲಭಿಸಿದೆ. ಈ ಸ್ಪರ್ಧೆಯಲ್ಲಿ ಕರ್ನಾಟಕದ ಅಲ್ಲದೆ ವಿವಿಧ ರಾಜ್ಯಗಳಿಂದ ಸುಮಾರು 478 ಸ್ಪರ್ಧಿಗಳು ಭಾಗವಹಿಸಿದ್ದರು. 1516 ಛಾಯಾಚಿತ್ರಗಳು ಸ್ಪರ್ಧೆಯಲ್ಲಿದ್ದವು. (INW) ಇಂಡಿಯನ್ ನೇಚರ್ ವಾಚ್‌ನ ಬೆಸ್ಟ್ ಆಫ್ 21 ಸ್ಪರ್ಧೆಯಲ್ಲಿ ಕೃಷ್ಣಮೃಗ ಜಿಗಿಯುತ್ತಿರುವ ಛಾಯಾಚಿತ್ರ ಆಯ್ಕೆಯಾಗಿದೆ. ಯೂಥ್ ಫೋಟೋಗ್ರಾಫಿಕ್ ಸೊಸೈಟಿ ಬೆಂಗಳೂರು ವತಿಯಿಂದ ಆಯೋಜಿಸಲಾದ ಅಂತರರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಯಲ್ಲಿ 35 ದೇಶದ 279 ಸ್ಪರ್ಧಿಗಳು 3504 ಛಾಯಾಚಿತ್ರಗಳು 12 ಮಂದಿ ತೀರ್ಪುಗಾರರಾಗಿದ್ದರು. ಇದರಲ್ಲಿ ಮಧುಸೂದನ್ ಅವರ ಬಾರ್ನ್ ಔಲ್ (BARN OWL) ಛಾಯಾಚಿತ್ರಕ್ಕೆ ಫೆಡರೇಶನ್ ಆಫ್ ಇಂಡಿಯನ್ ಫೋಟೋಗ್ರಫಿ (FIP ribben) ರಿಬ್ಬನ್ ದೊರೆತಿದೆ.



ಕನ್ನಡ ಕಾವಲು ಪಡೆ ಅಧ್ಯಕ್ಷ ಎಂ. ಮೋಹನ್‌ಕುಮಾರ್ ಗೌಡ ಅವರನ್ನು ಹುಟ್ಟುಹಬ್ಬದ ಅಂಗವಾಗಿ ಕೆ.ಜಿ.ಕೊಪ್ಪಲಿನ ಹೊಸಬೀದಿಯ ಯಜಮಾನರು ಮತ್ತು ಯುವಕರು ಆತ್ಮೀಯವಾಗಿ ಅಭಿನಂದಿಸಿದರು. ಯಜಮಾನರಾದ ಪೈಲ್ವಾನ್ ಬಿ.ಬಸಪ್ಪ, ಈರಪ್ಪ, ನಿಂಗಪ್ಪ, ಎಲ್.ಚಂದ್ರು, ಹರ್ಷ, ಬೋರಪ್ಪ ಡಿ.ನಿಂಗಪ್ಪ, ನಾರಾಯಣಸ್ವಾಮಿ, ಜವರೇಗೌಡ, ಶೇಖರ್, ಜಿ.ಶ್ರೀನಿವಾಸ್, ಎಸ್.ಮಾದೇವ್, ಶಿವಪ್ಪ, ಶಂಕರ್, ಮಂಜುನಾಥ್, ಶಿವು ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಬಗ್ಗೆ ಮಾತನಾಡುವ ನೈತಿಕತೆ ಈಶ್ವರಪ್ಪರಿಗೆ ಇಲ್ಲ



ಮೈಸೂರು, ನ.4–ಸದಾ ಕಾಲ ಸುಳ್ಳಿನ ಮೂಲಕವೇ ರಾಜಕಾರಣ ಮಾಡುತ್ತಿರುವ ಕೆ.ಎಸ್.ಈಶ್ವರಪ್ಪ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಿಡಿಕಾರಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಜೆಪಿ ನಾಯಕರ ಗಮನ ಸೆಳೆಯುವ ಉದ್ದೇಶದಿಂದ ಸಿದ್ದರಾಮಯ್ಯ ಬಗ್ಗೆ ಈಶ್ವರಪ್ಪ ಹಗುರವಾಗಿ ಮಾತನಾಡುತ್ತಿದ್ದಾರೆ. ಈ ಹಿಂದೆ ಸಿದ್ದರಾಮಯ್ಯನವರಿಗೆ ಯಾವುದೇ ಕ್ಷೇತ್ರವಿಲ್ಲ. ಕ್ಷೇತ್ರಕ್ಕಾಗಿ ಹುಡುಕಾಡುತ್ತಿದ್ದಾರೆ ಎಂದು ಹೇಳುತ್ತಿದ್ದ ಈಶ್ವರಪ್ಪನವರಿಗೇ ಕ್ಷೇತ್ರ ಇಲ್ಲದಂತಾಗಿ ಈಗ ಕೇವಲ ಶಿವಮೊಗ್ಗ ಬಿಜೆಪಿ ವಕ್ತಾರರಾಗಿ ಉಳಿದಿದ್ದಾರೆ ಎಂದು ಲೇವಡಿ ಮಾಡಿದ್ದಾರೆ. ಪ್ರಜಾಪ್ರಭುತ್ವದ ಮೌಲ್ಯ ಹಾಗೂ ಜನರ ತೀರ್ಪಿನ ಬಗ್ಗೆ ಬದ್ಧತೆ ಇದ್ದರೆ, ಈಶ್ವರಪ್ಪನವರು ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಬಳಿಗೆ ಹೋಗಿ ವಿಧಾನಸಭೆ ಮತ್ತು ವಿಧಾನಪರಿಷತ್‌ಗೆ ವಿಪಕ್ಷ ನಾಯಕನನ್ನು ಆಯ್ಕೆ ಮಾಡಿಕೊಂಡು ಬರಲಿ. ರಾಜ್ಯದ ಬರ ಪರಿಸ್ಥಿತಿ ಬಗ್ಗೆ ಮನವರಿಕೆ ಮಾಡಿ, ನಮ್ಮ ರಾಜ್ಯಕ್ಕೆ ನ್ಯಾಯಯುತವಾಗಿ ಸಿಗಬೇಕಾದ ಹಣವನ್ನು ಬಿಡುಗಡೆ ಮಾಡಿಸಲಿ ಎಂದು ಸವಾಲೆಸೆದರು.

ಇಂದು 'ಮಂಟೇಸ್ವಾಮಿ ಕಥಾಪ್ರಸಂಗ' ನಾಟಕ

ಮೈಸೂರು: ನಗರದ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ನ.5ರಂದು ಸಂಜೆ 6.30 ಗಂಟೆಗೆ 'ಮಂಟೇಸ್ವಾಮಿ ಕಥಾಪ್ರಸಂಗ' ನಾಟಕದ ಪ್ರದರ್ಶನ ಏರ್ಪಡಿಸಲಾಗಿದೆ. ಡಾ.ಎಚ್.ಎಸ್.ಶಿವಪ್ರಕಾಶ್ ರಚನೆಯ ಈ ನಾಟಕದ ನೃತ್ಯ ಸಂಯೋಜನೆ, ವಿನ್ಯಾಸ ಹಾಗೂ ನಿರ್ದೇಶನ ಮೈಮ್ ರಮೇಶ್. ದೇವಾನಂದ್ ವರಪ್ರಸಾದ್ ಹಾಗೂ ಎಂ.ಸಿ.ಅರುಣ್ ಸಂಗೀತ ನೀಡಿದ್ದಾರೆ. ಇದನ್ನು ಮೈಮ್ ರಮೇಶ್ ಅವರ ಜಿಪಿಐಇಆರ್ ತಂಡ ಪ್ರಸ್ತುತಪಡಿಸಲಿದೆ. ಮಾಹಿತಿಗೆ ಮೊ. 95383 56252 ಸಂಪರ್ಕಿಸಿ.

ಸಿದ್ದರಾಮಯ್ಯ ಹೆಸರಿನ ನಾಮಫಲಕ ತೆರವು: ಲಿಂಗದೇವರುಕೊಪ್ಪಲಲ್ಲಿ ಪ್ರತಿಭಟನೆ



ಪ್ರತಿಭಟನೆಯಲ್ಲಿ ಲಿಂಗದೇವರಕೊಪ್ಪಲು ಹಾಗೂ ಇಲವಾಲ ಹೋಬಳಿಯ ಮುಖಂಡರು ಪಾಲ್ಗೊಂಡು, ಹೆದ್ದಾರಿ ಪ್ರಾಧಿಕಾರ ಹಾಗೂ ಪೊಲೀಸರ ಕ್ರಮ ಖಂಡಿಸಿದರು. ಪ್ರತಿಭಟನೆಯಲ್ಲಿ ನಗರಪಾಲಿಕೆ ಸದಸ್ಯ ಜೆ.ಗೋಪಿ ಮಾತನಾಡಿ, ಮೈಸೂರಿನ ರಿಂಗ್ ರಸ್ತೆಯುದ್ದಕ್ಕೂ ಹಲವರು ಇಷ್ಟ ಬಂದ ಹಾಗೆ

ಮೈಸೂರು, ನ.4(ಎಂಟಿವೈ)– ಮೈಸೂರು ತಾಲೂಕಿನ ಲಿಂಗದೇವರು ಕೊಪ್ಪಲು ವೃತ್ತದ ಬಳಿ ಗ್ರಾಮಸ್ಥರು ಅಳವಡಿಸಿದ್ದ 'ಮುಖ್ಯಮಂತ್ರಿ ಸಿದ್ದರಾಮಯ್ಯ' ಹೆಸರಿನ ನಾಮಫಲಕವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತೆರವುಗೊಳಿಸಿದ್ದರಿಂದ ಗ್ರಾಮಸ್ಥರು ದಿಢೀರ್ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಲಿಂಗದೇವರುಕೊಪ್ಪಲು ವೃತ್ತದಲ್ಲಿ ಗ್ರಾಮಸ್ಥರು 'ಮುಖ್ಯಮಂತ್ರಿ ಸಿದ್ದರಾಮಯ್ಯ' ಹೆಸರಿನ ನಾಮಫಲಕ ಅಳವಡಿಸಿ ಅಭಿಮಾನ ಪ್ರದರ್ಶಿಸಿದ್ದರು. ಆದರೆ, ಕಳೆದ ರಾತ್ರಿ ಇಲವಾಲ ಪೊಲೀಸರೊಂದಿಗೆ ಆಗಮಿಸಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ವೃತ್ತದಲ್ಲಿ ಅಳವಡಿಸಿದ್ದ ನಾಮಫಲಕವನ್ನು ತೆರವುಗೊಳಿಸಿದ್ದರು. ಇಂದು ಬೆಳಗ್ಗೆ ನಾಮಫಲಕ ಇಲ್ಲದಿರುವುದನ್ನು ಗಮನಿಸಿದ ಗ್ರಾಮಸ್ಥರು ಲಿಂಗದೇವರುಕೊಪ್ಪಲಿನ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಪೊಲೀಸರ ವಿರುದ್ಧ ಘೋಷಣೆ ಕೂಗಿ, ಅಸಮಾಧಾನ ವ್ಯಕ್ತಪಡಿಸಿದರು.

ನಾಮಫಲಕಗಳನ್ನು ಅಳವಡಿಸಿದ್ದಾರೆ. ಅವರಿಗೆ ಅಡ್ಡಿಪಡಿಸದ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಹಾಗೂ ಪೊಲೀಸರು ಈ ರಾಜ್ಯದ ಮುಖ್ಯಮಂತ್ರಿಯ ಹೆಸರಿನ ನಾಮಫಲಕವನ್ನು ತೆರವುಗೊಳಿಸಿದ್ದರ ಹಿಂದೆ ಕಾಣದ ಕೈಗಳು ಕೆಲಸ ಮಾಡುತ್ತಿವೆ. ದುರುದ್ದೇಶದಿಂದಲೇ ನಾಮಫಲಕ ತೆರವುಗೊಳಿಸಲಾಗಿದೆ. ಕೂಡಲೇ ನಾಮಫಲಕವನ್ನು ಹಿಂದಿರುಗಿಸಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಕರೀಗೌಡ ಮಾತನಾಡಿ, ಸಿದ್ದರಾಮಯ್ಯ ಹೆಸರಿನ ನಾಮಫಲಕ ಅಳವಡಿಕೆಗೆ ಯಾರ ವಿರೋಧವು ಇರಲಿಲ್ಲ. ಆದರೂ ಪೊಲೀಸರು ರಾತ್ರೋರಾತ್ರಿ ನಾಮಫಲಕ ತೆರವುಗೊಳಿಸಿರುವುದು ಖಂಡನೀಯ ಎಂದರು. ಪ್ರತಿಭಟನೆಯಲ್ಲಿ ಜಿ.ಪಂ. ಮಾಜಿ ಸದಸ್ಯ ಅರುಣ್‌ಕುಮಾರ್, ಹಳೇ ಕಾಮನಕೊಪ್ಪಲು ಕರೀಗೌಡ, ಗಾಂಧಿಕುಮಾರ, ವಕೀಲ ನಾಗೇಶ್, ಹಿನಕಲ್ ಉದಯ್, ರವಿಕುಮಾರ್, ಶಿವೇಗೌಡ, ಯೋಗೇಶ್, ಮಂಜು, ರಮೇಶ್, ಮಲ್ಲೇಶ್, ಬಸವೇಗೌಡ, ರಾಜೇಶ್ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಭಾನುವಾರ 5 ನವೆಂಬರ್ 2023

ಹಂತ ಹಂತವಾಗಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ

ಜನತಾ ದರ್ಶನದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್



ಕೆ.ಆರ್.ಪೇಟೆ, ನ.4– ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಜಿಲ್ಲಾಡಳಿತವೇ ನೇರವಾಗಿ ಜನತಾ ದರ್ಶನ ಕಾರ್ಯಕ್ರಮ ನಡೆಸುವ ಮೂಲಕ ಕಾನೂನಿನ ಪರಿಮಿತಿಯೊಳಗಿರುವ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲಿದೆ. ಉಳಿದ ಸಮಸ್ಯೆಗಳ ನಿವಾರಣೆಗೆ ಕಾಲಾವಕಾಶ ಪಡೆದು ಹಂತ ಹಂತವಾಗಿ ಎಲ್ಲಾ ಸಮಸ್ಯೆ ಬಗೆಹರಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಜನತಾ ದರ್ಶನ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ, ಜನರಿಂದ ಅರ್ಜಿ ಸ್ವೀಕಾರ ಮಾಡಿ ಅವರು ಮಾತನಾಡಿದರು.

ಜನತಾ ದರ್ಶನ ಭಾಷಣ ಮಾಡುವ ಕಾರ್ಯಕ್ರಮವಲ್ಲ. ರೈತರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಕಾರ್ಯಕ್ರಮ. ಹಾಗಾಗಿ ಇಲ್ಲಿ ಹೆಚ್ಚು ಭಾಷಣಕ್ಕೆ ಅವಕಾಶವಿಲ್ಲ. ಈಗಾಗಲೇ ನಾಗಮಂಗಲ, ಮಳವಳ್ಳಿ ಹಾಗೂ ಮದ್ದೂರಿನಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಕೆ.ಆರ್.ಪೇಟೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮವೂ ಸಂಪೂರ್ಣ ಯಶಸ್ವಿಯಾಗಬೇಕು. ಆ ನಿಟ್ಟಿನಲ್ಲಿ ರೈತರು, ಸಾರ್ವಜನಿಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಿಸಿಕೊಡಲು ಕ್ರಮ ವಹಿಸಲಾಗುವುದು. ಸಣ್ಣಪುಟ್ಟ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡುವ ಜೊತೆಗೆ ಉಳಿದ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ಬಗೆಹರಿಸಲಾಗುವುದು. ಈ ಬಗ್ಗೆ ಯಾರೂ ಅನುಮಾನ ಪಡಬೇಕಿಲ್ಲ. ಈ ಅವಕಾಶವನ್ನು ರೈತರು, ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪಟ್ಟಣದ ಹೇಮಾವತಿ ಬಡಾವಣೆ ನಿವೇಶನಗಳ ಸಮಸ್ಯೆ, ಕತ್ತರಘಟ್ಟದಲ್ಲಿ ವಿದ್ಯುತ್ ಅವಘಡದಿಂದ ಮೃತನಾದ ರೈತನಿಗೆ ಈವರೆಗೆ ಪರಿಹಾರ ನೀಡದಿರುವುದು, ನನೆಗುದಿಗೆ ಬಿದ್ದಿರುವ ಗೂಡೆಹೊಸಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿ ಪೂರ್ಣಗೊಳಿಸುವುದು, ಸರ್ಕಾರಿ ಪಾಲಿಟೆಕ್ನಿಕ್ ಹಿಂಭಾಗದ ರೈತರ ಜಮೀನುಗಳಿಗೆ ಹೋಗಲು ರಸ್ತೆ ನಿರ್ಮಿಸಿ ಕೊಡುವುದು, ಅಗ್ರಹಾರಬಾಚಹಳ್ಳಿ ಗ್ರಾಪಂ ವ್ಯಾಪ್ತಿಯ ಭೈರನಪಾಳ್ಯ ನಿವಾಸಿಗಳು 30 ವರ್ಷಗಳಿಂದ ವಾಸವಿರುವ ಮನೆಗಳಿಗೆ 94ಸಿಸಿ ಯೋಜನೆ ಅಡಿ ಹಕ್ಕುಪತ್ರ ಕೊಡಿಸುವುದು, ಅಗ್ರಹಾರಬಾಚಹಳ್ಳಿ ಸರ್ಕಾರಿ ಪ್ರೌಢಶಾಲೆ ಹಿಂಭಾಗದ ಕೀರೆಮಡಿ ಜಾಗದಲ್ಲಿ ದಲಿತರು ನಿರ್ಮಿಸಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಿ ಹಕ್ಕುಪತ್ರ ಕೊಡಿಸುವುದು, ರೈತರ ಪಹಣಿ ದೋಷ ಸರಿಪಡಿಸುವುದು, ಪೌತಿ ಖಾತೆ ಮಾಡುವುದು, ಪಟ್ಟಣದ ರಾಮಯ್ಯ ಕಾಲೋನಿ ನಿವಾಸಿಗಳ ಈದ್ಗಾ ಮೈದಾನದ ರಸ್ತೆ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವುದು ಸೇರಿದಂತೆ 300ಕ್ಕೂ ಹೆಚ್ಚು ಅರ್ಜಿಗಳನ್ನು ಜಿಲ್ಲಾಧಿಕಾರಿ ಡಾ.ಕುಮಾರ್, ಶಾಸಕ ಹೆಚ್.ಟಿ.ಮಂಜು, ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಪಾಂಡವಪುರ ಎಸಿ ನಂದೀಶ್, ತಹಸೀಲ್ದಾರ್ ನಿಸರ್ಗ ಪ್ರಿಯ, ತಾಪಂ ಇಓ ಸತೀಶ್, ತಾಪಂ ಆಡಳಿತಾಧಿಕಾರಿ ರಾಜಮೂರ್ತಿ ಸ್ವೀಕರಿಸಿ ಸಮಸ್ಯೆ ಖುದ್ದು ಆಲಿಸಿ, ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ರೂಪಿಸಲಾಯಿತು. ಉಳಿದ ಅರ್ಜಿಗಳಿಗೆ ನಿರ್ದಿಷ್ಟ ಅವಧಿಯೊಳಗೆ ಪರಿಹಾರ ದೊರಕಿಸಿ ಕೊಡುವ ಭರವಸೆ ನೀಡಲಾಯಿತು.

ಈ ವೇಳೆ ಹಿರಿಯ ರೈತ ಮುಖಂಡ ರಾಜೇಗೌಡ, ನಾಗಣ್ಣಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕರ್ನಾಟಕ ರಾಷ್ಟ್ರ ಸಮಿತಿಯ ಮುರುಗೇಶ್, ಬಿ.ವಿ.ನಾಗೇಶ್, ಗ್ರಾಪಂ ಸದಸ್ಯ ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ಸಮಾಜ ಸೇವಕ ಕಾಂತರಾಜು, ಸಮೀರ್, ಜಯಣ್ಣ, ಲಾಯರ್ ಶಂಕರೇಗೌಡ, ನಾಗೇಶ್, ಇಓ ಸತೀಶ್, ಉಪ ತಹಸೀಲ್ದಾರ್ ರವಿ, ತಾಲೂಕು ಸರ್ವೆ ಅಧಿಕಾರಿ ಸಿದ್ದಯ್ಯ, ವಲಯ ಅರಣ್ಯಾಧಿಕಾರಿ ಅನಿತಾ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್, ಆರಕ್ಷಕ ನಿರೀಕ್ಷಕಿ ಸುಮಾರಾಣಿ, ಜಗದೀಶ್, ಶಾಸಕರ ಆಪ್ತ ಸಹಾಯಕ ಪ್ರತಾಪ್ ಸೇರಿದಂತೆ ತಾಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಇದೇ ವೇಳೆ ಹಲವು ಫಲಾನುಭವಿಗಳಿಗೆ ಸರ್ಕಾರದ ವಿವಿಧ ಸೌಲಭ್ಯಗಳ ಮಂಜೂರಾತಿ ಆದೇಶ ಪತ್ರವನ್ನು ಶಾಸಕ ಹೆಚ್.ಟಿ.ಮಂಜು, ಜಿಲ್ಲಾಧಿಕಾರಿ ಡಾ.ಕುಮಾರ್ ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್ ವಿತರಿಸಿದರು.

> 6 ತಾಲೂಕು ಕಚೇರಿಯಲ್ಲಿ ನೂರಾರು ರೈತರ ಸಮಸ್ಯೆಗಳಿವೆ. ತಮ್ಮ ಸಮಸ್ಯೆಗಳ ಈಡೇರಿಕೆಗಾಗಿ ರೈತ ಬಾಂಧವರು ಕಚೇರಿಗಳಿಗೆ ಅಲೆದು ಅಲೆದು ಸುಸ್ತಾಗುತ್ತಿದ್ದಾರೆ. ಜನತಾ ದರ್ಶನ ಕಾರ್ಯಕ್ರಮ ರೈತ ಬಾಂಧವರ ಸಮಸ್ಯೆಗಳ ಇತ್ಯರ್ಥಕ್ಕೆ ಸೂಕ್ತ ವೇದಿಕೆಯಾಗಿದೆ. ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಓ ಅವರ ಸಮಕ್ಷಮದಲ್ಲಿಯೇ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯುತ್ತಿದೆ. ಜನತಾ ದರ್ಶನದಲ್ಲಿ ಭಾಗವಹಿಸಿರುವ ರೈತ ಬಾಂಧವರು ಹಾಗೂ ಸಾರ್ವಜನಿಕರು ಸಲ್ಲಿಸಿರುವ ಅರ್ಜಿಗಳಿಗೆ ಆದಷ್ಟು ಬೇಗ ಪರಿಹಾರ ದೊರಕಿಸಿಕೊಡಲಾಗುವುದು. – ಹೆಚ್.ಟಿ.ಮಂಜು, ಶಾಸಕ.

ವಿರಿಜಾ ನಾಲೆ ಬಳಿ ಮೊಸಳೆ ಪ್ರತ್ಯಕ್ಷ



ರೈತರು, ಸಾರ್ವಜನಿಕರಲ್ಲಿ ಆತಂಕ

ಶ್ರೀರಂಗಪಟ್ಟಣ, ನ.4– ತಾಲೂಕಿನ ಬೊಮ್ಮೂರು ಅಗ್ರಹಾರ ಬಳಿಯ ವಿರಿಜಾ ನಾಲೆ ಏರಿಮೇಲೆ ಮೊಸಳೆ ಪ್ರತ್ಯಕ್ಷವಾಗಿದ್ದು, ಇದರಿಂದ ರೈತರು, ಸಾರ್ವಜನಿಕರು ಆತಂಕಗೊಂಡಿದ್ದಾರೆ.

ವಿರಿಜಾ ನಾಲೆ ಸಂಪೂರ್ಣವಾಗಿ ಗಿಡಗಂಟಿಗಳಿಂದ ಆವರಿಸಿಕೊಂಡಿದ್ದು, ಶನಿವಾರ ಮಧ್ಯಾಹ್ನ ಭಾರಿ ಗಾತ್ರದ ಮೊಸಳೆ ಕಾಣಿಸಿಕೊಂಡಿದೆ. ಇದರಿಂದ ರೈತರು ಹಾಗೂ ಸಾರ್ವಜನಿಕರು ಭಯಭೀತರಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಮೊಸಳೆ ಹಿಡಿಯುವಂತೆ ಆಗ್ರಹಿಸಿದ್ದಾರೆ.

ಬೊಮ್ಮೂರು ಗ್ರಾಮದ ಬಳಿಯ ಫನ್ ಫಾರ್ಮ್ ಬಳಿಯ ವಿರಿಜಾ ನಾಲೆ ಏರಿ ಮೇಲೆ ಮೊಸಳೆ ಓಡಾಡುತ್ತಿದ್ದು, ರೈತರು ತಮ್ಮ ಜಮೀನುಗಳಿಗೆ ತೆರಳದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೇ ಈ ನಾಲೆ ಸುತ್ತಲು ಆಳೆತ್ತರದ ಗಿಡಗಂಟಿಗಳು ಬೆಳೆದಿರುವುದರಿಂದ ಮೊಸಳೆ ಅವಿತು ಕುಳಿತುಕೊಳ್ಳುವ ಸಾಧ್ಯತೆಗಳಿವೆ. ಹೀಗಾಗಿ ನಾಲೆ ಏರಿ ಸ್ವಚ್ಛಗೊಳಿಸುವ ಜೊತೆಗೆ ಮೊಸಳೆ ಸೆರೆ ಹಿಡಿಯುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಅರಿವು ಶೈಕ್ಷಣಿಕ ಯೋಜನೆ ಅಡಿ ಅರ್ಜಿ ಆಹ್ವಾನ

ಮಂಡ್ಯ, ನ.4– ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿಗೆ ಅರಿವು ಶೈಕ್ಷಣಿಕ ಯೋಜನೆ ಅಡಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು kacdc.karnataka.gov.in ಮೂಲಕ ನ.30ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ:08232–231804 ಸಂಪರ್ಕಿಸಿ.

ಗ್ರಾಪಂ ಸದಸ್ಯರಿಗೆ ಗೌರವಧನ ಬಿಡುಗಡೆಗೆ ಒತ್ತಾಯ



ಮಂಡ್ಯ, ನ.4– ಗ್ರಾಪಂಗಳು ಗ್ರಾಮೀಣ ಭಾಗದ ಸರ್ಕಾರಗಳಾಗಿದ್ದು, ರಾಜ್ಯದ ಕಟ್ಟಕಡೆ ವ್ಯಕ್ತಿಯ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಅವರ ಬೇಕು ಬೇಡಗಳನ್ನು ಈಡೇರಿಸುವ ಮಹತ್ವದ ಸಂಸ್ಥೆಗಳಾಗಿವೆ. ಗ್ರಾಪಂಗಳಿಂದ ನಡೆಯುವ ಗ್ರಾಮ ಸಭೆಗಳ ಮೂಲಕ ಪ್ರಜಾಪ್ರಭುತ್ವದ ನಿಜವಾದ ಅರ್ಥ ಸಾಕಾರವಾಗುತ್ತಿದೆ. ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರು ಈ ವ್ಯವಸ್ಥೆಯ ಪ್ರಮುಖ ಆಧಾರ ಸ್ತಂಭವಾಗಿದ್ದಾರೆ. ಆದರೆ ಇವರಿಗೆ ಸಮರ್ಪಕವಾಗಿ ವೇತನ ಬರದಿದ್ದರೆ ಸಮಸ್ಯೆಯಾಗುತ್ತದೆ. ಈ ಬಗ್ಗೆ ಸರ್ಕಾರ ತುರ್ತು ಗಮನ ಹರಿಸಬೇಕಿದೆ ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಗ್ರಾಪಂ ಸದಸ್ಯ, ಅಧ್ಯಕ್ಷ, ಉಪಾಧ್ಯಕ್ಷನಾಗುವುದನ್ನು ಒಂದು ಸೇವೆ ಎಂದು ಪರಿಗಣಿಸಿದ್ದರೂ, ಅವರ ಕನಿಷ್ಠ ಖರ್ಚು ವೆಚ್ಚಗಳಿಗೆ ಸರ್ಕಾರದಿಂದ ಗೌರವಧನ ನೀಡಲಾಗುತ್ತಿದೆ. ಸದಸ್ಯರಿಗೆ ಮಾಸಿಕ ತಲಾ 2 ಸಾವಿರ ರೂ. ಉಪಾಧ್ಯಕ್ಷರಿಗೆ ಮಾಸಿಕ ತಲಾ 3 ಸಾವಿರ ರೂ. ಹಾಗೂ ಅಧ್ಯಕ್ಷರಿಗೆ ಮಾಸಿಕ ತಲಾ 6 ಸಾವಿರ ರೂ. ಗೌರವಧನವನ್ನು ನೀಡಲಾಗುತ್ತಿದೆ ಆರ್ಥಿಕವಾಗಿ ಸುಬಲರಲ್ಲದ ಗ್ರಾಮೀಣ ಜನಪ್ರತಿನಿಧಿಗಳಿಗೆ ಈ ಮೊತ್ತವು ತುಂಬಾ ಅವಶ್ಯ ಕೂಡ ಆಗಿದೆ ಎಂದು ಹೇಳಿದ್ದಾರೆ.

ರಾಜ್ಯದ ಗ್ರಾಪಂ ಸದಸ್ಯ, ಅಧ್ಯಕ್ಷ ಉಪಾಧ್ಯಕ್ಷರ ಮಾಸಿಕ ಗೌರವಧನವನ್ನು ಕಳೆದ ಏಪ್ರಿಲ್ ತಿಂಗಳಿಂದ ಅಕ್ಟೋಬರ್ ತಿಂಗಳವರೆಗೆ ಸರ್ಕಾರ ಬಿಡುಗಡೆ ಮಾಡಿಲ್ಲ. ಇದರಿಂದ ಸದಸ್ಯರಿಗೆ ತೀವ್ರ ಸಮಸ್ಯೆಯಾಗುತ್ತಿದೆ. ಜೊತೆಗೆ ಅವರು ಆಡಳಿತ ವ್ಯವಸ್ಥೆಯಲ್ಲಿ ಆಸಕ್ತಿ ಕಳೆದುಕೊಳ್ಳುವ ಅಪಾಯವೂ ಇದೆ. ಹೀಗಾದಲ್ಲಿ ಸರ್ಕಾರದ ಮೂಲ ಆಶಯಕ್ಕೆ ಧಕ್ಕೆ ಬರುತ್ತದೆ. ಸರ್ಕಾರಿ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ. ಇವೇ ತಮ್ಮ ಜವಾಬ್ದಾರಿಗಳಿಂದ ವಿಮುಖರಾದರೆ ಅಭಿವೃದ್ಧಿ ಕಾರ್ಯಗಳು ಮತ್ತಷ್ಟು ಕುಂಠಿತಗೊಳ್ಳುವ ಅಪಾಯ ಇದೆ. ಅಲ್ಲದೇ ಗ್ರಾಪಂಗಳ ಆಡಳಿತ ನಿರ್ವಹಣೆ, ಸಾರ್ವಜನಿಕ ಕೆಲಸ ಕಾರ್ಯಗಳು ಕುಂಠಿತಗೊಂಡಿರುತ್ತವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಗ್ರಾಪಂಗಳ ಹೊಣೆಗಾರಿಕೆಯಲ್ಲಿ ಒದಗಿಸಲಾಗುವ ಮೂಲಸೌಕರ್ಯಗಳಾದ ಕುಡಿಯುವ ನೀರು, ಬೀದಿದೀಪಗಳ ನಿರ್ವಹಣೆ, ಪರಿಸರ ನೈರ್ಮಲ್ಯ ಹಾಗೂ ನರೇಗಾದಂತಹ ಜನೋಪಯೋಗಿ ಯೋಜನೆಗಳನ್ನು ಮೇಲ್ವಿಚಾರಣೆ ಮಾಡಲು, ಜನರಿಗೆ ತಲುಪಿಸುವುದು ಸೇರಿದಂತೆ ಇನ್ನಿತರ ಕಾರ್ಯ ಚಟುವಟಿಕೆಯನ್ನು ಗ್ರಾಪಂ ಜನಪ್ರತಿನಿಧಿಗಳು ಉತ್ಸಾಹದಿಂದ ಮಾಡುವಂತೆ ಮಾಡಬೇಕಿದೆ. ಅಲ್ಲದೆ, ಆರ್ಥಿಕ ಸಮಸ್ಯೆಯಿಂದ ದೂರದ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳನ್ನು ಇವರು ಖುದ್ದು ಸಂಪರ್ಕ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

ಸದ್ಯ ಜಿಲ್ಲಾ ಹಾಗೂ ತಾಪಂ ಚುನಾವಣೆಗಳು ನಡೆಯದಿರುವ ಕಾರಣ ತಾಪಂ, ಜಿಪಂಗಳಿಗೂ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರಿಲ್ಲ. ಇದರಿಂದ ಗ್ರಾಪಂ ಆಡಳಿತವೇ ಜನರಿಗೆ ಸ್ಪಂದಿಸಬೇಕಿದೆ. ರಾಜ್ಯದಲ್ಲಿ ಸದ್ಯ 6022 ಗ್ರಾಪಂಗಳಿದ್ದು, ಅಷ್ಟೇ ಸಂಖ್ಯೆಯ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ 90 ಸಾವಿರದಷ್ಟು ಸದಸ್ಯರಿದ್ದಾರೆ. ಅವರಿಗೆ ಪ್ರತಿ ತಿಂಗಳು ಗೌರವಧನ ನೀಡಲು ಅನುದಾನ ಬಿಡುಗಡೆ ಮಾಡುವಂತೆ ಈ ಪತ್ರದ ಮುಖೇನ ಗ್ರಾಪಂ ಜನಪ್ರತಿನಿಧಿಗಳ ಪರವಾಗಿ ಕೋರಿದ್ದಾರೆ.

ಪಿಡಿಓ, ವಿಎಗಳು ಕೇಂದ್ರ ಸ್ಥಾನದಲ್ಲಿ ವಾಸವಿರಬೇಕು

ಶಾಸಕ ಪಿ.ಎಂ. ನರೇಂದ್ರಸ್ವಾಮಿ ಸೂಚನೆ



ಮಳವಳ್ಳಿ, ನ.4– ಗ್ರಾಮ ಲೆಕ್ಕಿಗರು ಮತ್ತು ಪಿಡಿಓಗಳು ಬೆಂಗಳೂರು, ಮಂಡ್ಯ, ಮೈಸೂರು ಸೇರಿದಂತೆ ಬೇರೆ ಪಟ್ಟಣಗಳಲ್ಲಿ ವಾಸ ಮಾಡುವವರೇ ಹೆಚ್ಚಾಗಿರುವುದರಿಂದ ಸರಿಯಾದ ಸಮಯಕ್ಕೆ ಕಚೇರಿಗೆ ಬರುತ್ತಿಲ್ಲ. ಹೀಗಾಗಿ ಪಿಡಿಓಗಳು, ಗ್ರಾಮ ಲೆಕ್ಕಿಗರು ಇನ್ನು ಮುಂದೆ ಕಡ್ಡಾಯವಾಗಿ ಅವರ ವ್ಯಾಪ್ತಿಯಲ್ಲೇ ವಾಸವಿರಬೇಕು ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶನಿವಾರ ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮ ಲೆಕ್ಕಿಗರು ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕಡ್ಡಾಯವಾಗಿ ಅವರ ಕಾರ್ಯ ವ್ಯಾಪ್ತಿಯಲ್ಲೇ ವಾಸವಿರಬೇಕು. ಈ ಬಗ್ಗೆ ತಹಸೀಲ್ದಾರ್ ಮತ್ತು ತಾಪಂ ಇಓ ಕ್ರಮ ಕೈಗೊಳ್ಳಬೇಕೆಂದು ಹೇಳಿದರು.

ಅಧಿಕಾರಿಗಳು ಇಲಾಖಾವಾರು ಅಭಿವೃದ್ಧಿಗೆ ಬೇಕಾಗಿರುವ ಕ್ರಿಯಾ ಯೋಜನೆ ಸಿದ್ಧಪಡಿಸಿ ವರದಿ ನೀಡಿದರೇ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಲಾಗುವುದು. 15ನೇ ಹಣಕಾಸು ಯೋಜನೆಯಡಿ ಪಟ್ಟಣದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಮುಗಿಸುವಂತೆ ಸೂಚನೆ ನೀಡಿದರು.

ತಾಲೂಕು ಆಸ್ಪತ್ರೆ ಒಳಗೆ ಕೆಲವರು ಅಕ್ರಮ ಪ್ರವೇಶ ಮಾಡಿ ತೊಂದರೆ ಕೊಡಲು ಮುಂದಾಗುತ್ತಿದ್ದಾರೆ. ಪಟ್ಟಣದಲ್ಲಿ ಉದ್ದೇಶಪೂರ್ವಕವಾಗಿ ಕೆಲವೊಂದು ಘಟನೆಗಳನ್ನು ಸೃಷ್ಟಿಸಿ ಸಾರ್ವಜನಿಕರಿಗೆ ತಪ್ಪು ಸಂದೇಶ ಕೊಡಲು ಹೊರಟಿದ್ದಾರೆ. ಪೊಲೀಸ್ ಇಲಾಖೆ ಮಫ್ತಿಯಲ್ಲಿ ಇಂತಹ ಕೃತ್ಯ ತಡೆಯಬೇಕು. ನನ್ನ ಅಧಿಕಾರವಧಿಯಲ್ಲಿ ಶೋಷಣೆಗೆ ಅವಕಾಶ ಕೊಡುವುದಿಲ್ಲ ರೌಡಿಸಂ, ಗಾಂಜಾ ಮಾರಾಟ ಸೇರಿದಂತೆ ಇತರೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದರು.

ತಾಲೂಕಿನ ಹಲವೆಡೆ ಹಾಗೂ ಪಟ್ಟಣದಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿ ಮಕ್ಕಳು ಸೇರಿದಂತೆ ಸಾರ್ವಜನಿಕರನ್ನು ಕಚ್ಚಿದ್ದು, ರೇಬೀಸ್ ರೋಗ ಹರಡುವ ಭೀತಿ ಇರುವುದರಿಂದ ನಾಯಿಗಳ ಹಾವಳಿಗೆ ಕಡಿವಾಣ ಹಾಕಬೇಕೆಂದು ಪುರಸಭೆ, ತಾಪಂ ಇಓ ಹಾಗೂ ಪಶು ವೈದ್ಯಾಧಿಕಾರಿಗಳಿಗೆ ತಿಳಿಸಿದರು.

ಹಲಗೂರು ಸಮೀಪದ ಹಗದೂರು ರಸ್ತೆ ಮತ್ತು ಸೇತುವೆ ನಿರ್ಮಾಣಕ್ಕೆ ಕ್ರಮ ವಹಿಸಬೇಕು. ಮಾದಹಳ್ಳಿ ರಸ್ತೆ ಕಾಮಗಾರಿ ತ್ವರಿತಗತಿಯಲ್ಲಿ ಮುಗಿಸಬೇಕು. ಹಿಟ್ಟನಹಳ್ಳಿ ಕೊಪ್ಪಲು ರಸ್ತೆ ಕಾಮಗಾರಿ ಆರಂಭಿಸಿ, ದಂಡಿನ ಮಾರಮ್ಮ ದೇವಸ್ಥಾನದಿಂದ ಹಾಗೂ ಪಟ್ಟಣದಿಂದ ತಮ್ಮಡಹಳ್ಳಿಗೆ ಸಂಪರ್ಕದ ರಸ್ತೆ ಮತ್ತು ಮತ್ತಿತಾಳೇಶ್ವರ ದೇವಸ್ಥಾನದ ರಸ್ತೆ ಕಾಮಗಾರಿಗೆ ಕ್ರಿಯಾ ಯೋಜನೆ ರೂಪಿಸಬೇಕು. ಗುತ್ತಿಗೆದಾರರು ಕಪ್ಪುಪಟ್ಟಿ ಸೇರುವ ಭಯದಿಂದ ಕುಡಿಯುವ ನೀರಿನ ಯೋಜನೆಯನ್ನು ಇನ್ನೂ ಒಂದೂವರೆ ತಿಂಗಳಲ್ಲಿ ಸರಿ ಮಾಡುತ್ತೇನೆಂದು ಒಳಚರಂಡಿ ಮತ್ತು ನಗರ ನೀರು ಸರಬರಾಜು ಇಲಾಖೆ ಅಧಿಕಾರಿಗಳ ಬಳಿ ಬಂದಿದ್ದಾರೆ. ಪಟ್ಟಣದ 71 ಕೋಟಿ ರೂ. ವೆಚ್ಚದ ಕುಡಿಯುವ ನೀರಿನ ಯೋಜನೆ ಕಾಮಗಾರಿಯಲ್ಲಿನ ಅವ್ಯವಸ್ಥೆ ಸರಿ ಮಾಡುವವರೆಗೂ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ತಾಲೂಕು ಮಟ್ಟದ ಅಧಿಕಾರಿಗಳು ಇಲಾಖೆ ಶಾಸಕರಿಗೆ ಮಾಹಿತಿ ನೀಡಿದರು. ಗೈರು ಹಾಜರಾದ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ಇಓ ಮಮತಾಗೆ ಶಾಸಕರು ಸೂಚಿಸಿದರು. ಇದೇ ವೇಳೆ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಶಾಸಕರು ಪರಿಹಾರದ ಚೆಕ್‌ಗಳನ್ನು ವಿತರಿಸಿದರು. ಸಭೆಯಲ್ಲಿ ತಹಸೀಲ್ದಾರ್ ಕೆ.ಎನ್.ಲೋಕೇಶ್ ಇದ್ದರು.

ಕೃಷಿ ಭೂಮಿ ವಶಪಡಿಸಿಕೊಳ್ಳಲು ಕೆಐಎಡಿಬಿ ಯತ್ನ

• ಸಿಎಂ ಪುತ್ರನಿಗೆ ರೈತರ ದೂರು • ಗೃಹಲಕ್ಷ್ಮಿ ಯೋಜನೆಯ 2, 3ನೇ ಕಂತುಹಣ ಬಂದಿಲ್ಲ • ರಾತ್ರಿ ಬದಲು ಹಗಲಿನಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡಿ



ನಂಜನಗೂಡು, ನ.4– ಹದಿನಾರು ಗ್ರಾ.ಪಂ. ವ್ಯಾಪ್ತಿ ಪ್ರದೇಶದ ರೈತರ ಕೃಷಿ ಭೂಮಿಯನ್ನು ಕೆಐಎಡಿಬಿಯವರು ನೋಟಿಸ್ ನೀಡಿ ವಶಪಡಿಸಿಕೊಳ್ಳಲು ಮುಂದಾಗಿದ್ದಾರೆ, ಫಲವತ್ತಾದ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಕೆಐಎಡಿಬಿ ಕ್ರಮವನ್ನು ರದ್ದುಪಡಿಸಿ, ಕೃಷಿ ಭೂಮಿಯನ್ನು ಬಿಡಿಸಿಕೊಡಿ ಎಂದು ರೈತರು ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಅವರಿಗೆ ಮನವಿ ಮಾಡಿದ್ದಾರೆ.

ತಾಲೂಕಿನ ಹದಿನಾರು ಗ್ರಾಪಂ. ಆವರಣದಲ್ಲಿ ಶುಕ್ರವಾರ ನಡೆದ ಜನ ಸಂಪರ್ಕ ಸಭೆಯಲ್ಲಿ ರೈತರು ಈ ಮನವಿ ಮಾಡಿದರು.

ನಮ್ಮ ಕೃಷಿ ಪಂಪ್‌ಸೆಟ್‌ಗಳಿಗೆ ರಾತ್ರಿ ವೇಳೆಯಲ್ಲಿ ವಿದ್ಯುತ್ ಕೊಡುತ್ತಿರುವುದರಿಂದ ರೈತರು ಕಾಡು ಪ್ರಾಣಿಗಳ ಭಯದಿಂದ ಜಮೀನು ಗಳಿಗೆ ತೆರಳಲು ಭಯಪಡುವಂತಾಗಿದೆ. ಆದ್ದರಿಂದ ರಾತ್ರಿಗೆ ಬದಲು ಹಗಲು ವೇಳೆ ವಿದ್ಯುತ್ ನೀಡಬೇಕು, ಸರ್ಕಾರ ಜಾರಿಗೆ ತಂದಿರುವ ಗೃಹಲಕ್ಷ್ಮಿ ಯೋಜನೆಯ ಹಣ ತಲುಪುತ್ತಿಲ್ಲ, ಮೊದಲನೇ ಕಂತು ಮಾತ್ರ ಬಂದಿದೆ, ಎರಡು ಹಾಗೂ ಮೂರನೇ ಕಂತಿನ ಹಣ ಬಂದಿಲ್ಲ, ಜೊತೆಗೆ ಅನ್ನಭಾಗ್ಯದ ಹಣವು ಸಹ ನಮ್ಮ ಖಾತೆಗೆ ಬಂದಿಲ್ಲ ಎಂದು ಮಹಿಳೆಯರು ಮನವಿ ಮಾಡಿದರು.

ಮನವಿ ಆಲಿಸಿ ಪ್ರತಿಕ್ರಿಯೆ ನೀಡಿದ ಯತೀಂದ್ರ, ಗೃಹಲಕ್ಷ್ಮಿ ಯೋಜನೆಯಲ್ಲಿ ಸಣ್ಣ–ಪುಟ್ಟ ದೋಷಗಳು ಕಂಡುಬಂದಿವೆ, ಸರಿಪಡಿಸಿ ಎಲ್ಲರಿಗೂ ಯೋಜನೆಯ ಲಾಭ ದೊರಕುವಂತೆ ಮಾಡಲಾಗುವುದು. ಫಲವತ್ತಾದ ಕೃಷಿ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ನಿಗಮದಿಂದ ಕೈ ಬಿಡಿಸಿ, ಕೃಷಿಯನ್ನು ಅವಲಂಬಿಸಿರುವ ರೈತರಿಗೆ ತೊಂದರೆ ಕೊಡದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಗುರುಪಾದಸ್ವಾಮಿ, ಮುಖಂಡರಾದ ಎಸ್.ಸಿ ಬಸವರಾಜು, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಗುರುಮಲ್ಲಪ್ಪ, ಅಭಿ, ನಂಜಪ್ಪ, ಗ್ರಾಪಂ ಅಧ್ಯಕ್ಷೆ ಸಣತಾಯಮ್ಮ, ಉಪಾಧ್ಯಕ್ಷ ಗೋವಿಂದ ಶೆಟ್ಟಿ ಉಪಸ್ಥಿತರಿದ್ದರು.

ನ.7ಕ್ಕೆ ಪೌರಕಾರ್ಮಿಕರ ದಿನಾಚರಣೆ

ಮಡಿಕೇರಿ ನ.4– ನಗರಸಭೆ ವತಿ ಯಿಂದ ಪೌರಕಾರ್ಮಿಕರ ದಿನಾಚರಣೆಯು ನ.7 ರಂದು ಬೆಳಗ್ಗೆ 11 ಗಂಟೆಗೆ ನಗರಸಭೆಯ ಕಾವೇರಿ ಕಲಾಕ್ಷೇತ್ರದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರಾದ ವಿಜಯ್ ಅವರು ತಿಳಿಸಿದ್ದಾರೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.



ಪಂದ್ಯಕ್ಕೆ ಮಳೆ ಅಡ್ಡಿ: ಡಿಎಲ್ ನಿಯಮದಡಿ ಪಾಕ್‌ಗೆ ಜಯ



ಬೆಂಗಳೂರು, ನ.4– ಐಸಿಸಿ ವಿಶ್ವಕಪ್‌ನಿಂದ ಬಹುತೇಕ ಹೊರಬಿದ್ದಿದ್ದ ಪಾಕಿಸ್ತಾನ ನ್ಯೂಜಿಲೆಂಡ್ ವಿರುದ್ಧ ಡಕ್‌ವರ್ತ್ ಲೂಯಿಸ್ ನಿಯಮದನ್ವಯ 21 ರನ್ ಗೆಲುವು ದಾಖಲಿಸಿದೆ. ಆ ಮೂಲಕ ಸೆಮಿಫೈನಲ್ ಆಸೆ ಜೀವಂತವಾಗಿರಿಸಿದೆ. ಇತ್ತ ನ್ಯೂಜಿಲೆಂಡ್ ಸೋಲಿನಿಂದ ಸೌತ್ ಆಫ್ರಿಕಾದ ಸೆಮಿಫೈನಲ್ ಸ್ಥಾನ ಖಚಿತಗೊಂಡಿದೆ.

ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ 35ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 401 ರನ್ ಪೇರಿಸಿತ್ತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡಿವೋನ್ ಕಾನ್ವೆ 35 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಬಳಿಕ 2ನೇ ವಿಕೆಟ್‌ಗೆ ಜೊತೆಯಾದ ರಚಿನ್ ರವೀಂದ್ರ ಹಾಗೂ ಕೇನ್ ವಿಲಿಯಮ್ಸನ್ 180 ರನ್‌ಗಳ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಅಡಿಪಾಯ ಹಾಕಿದರು. ಬಿರುಸಿನ ಬ್ಯಾಟಿಂಗ್ ಮಾಡಿದ ಕೇನ್ ವಿಲಿಯಮ್ಸನ್ 79 ಎಸೆತಗಳಲ್ಲಿ 10 ಬೌಂಡರಿ, 2 ಸಿಕ್ಸರ್ ಒಳಗೊಂಡ 95 ರನ್‌ಗೆ ಔಟಾಗುವ ಮೂಲಕ 5 ರನ್‌ನಿಂದ ಶತಕದಿಂದ ವಂಚಿತರಾದರು. ಮತ್ತೊಂದೆಡೆ ಅಬ್ಬರಿಸಿದ ರಚಿನ್ ರವೀಂದ್ರ ಟೂರ್ನಿಯಲ್ಲಿ 3ನೇ ಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ 94 ಎಸೆತಗಳಲ್ಲಿ 15 ಬೌಂಡರಿ, 1 ಸಿಕ್ಸರ್ ಒಳಗೊಂಡ 108 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಬಂದ ಡೇರಿಲ್ ಮಿಚೆಲ್ 29, ಮಾರ್ಕ್ ಚಾಪ್ಮನ್ 39, ಗ್ಲೇನ್ ಫಿಲಿಪ್ಸ್ 41, ಮಿಚೆಲ್ ಸ್ಯಾಂಟ್ನರ್ 26 ರನ್ ಗಳಿಸಿದರು. ಪಾಕ್ ಪರ ಮೊಹಮ್ಮದ್ ವಸೀಮ್ 3, ಹಸನ್ ಅಲಿ, ಇಫ್ತಿಕಾರ್ ಅಹ್ಮದ್ ಹಾಗೂ ಹ್ಯಾರಿಸ್ ರೌಫ್ ತಲಾ ಒಂದೊಂದು ವಿಕೆಟ್ ಪಡೆದರು.

ನ್ಯೂಜಿಲೆಂಡ್ ನೀಡಿದ 402 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ ಆರಂಭದಲ್ಲೇ ಆಘಾತ ಎದುರಿಸಿತು. ಅಬ್ದುಲ್ಲಾ ಶಫೀಕ್ ಕೇವಲ 4 ರನ್‌ಗಳಿಗೆ ಔಟಾದರು. ನಂತರ ಬಂದ ಫಖರ್ ಜಮಾನ್ ಹಾಗೂ ನಾಯಕ ಬಾಬರ್ ಆಜಾಮ್ 194 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಗೆಲುವಿನ ಆಸೆ ಮೂಡಿಸಿದರು. ಪಂದ್ಯದಲ್ಲಿ ಅಬ್ಬರಿಸಿದ ಫಖರ್ ಜಮಾನ್ 81 ಎಸೆತಗಳಲ್ಲಿ 11 ಸಿಕ್ಸರ್, 8 ಬೌಂಡರಿ ಒಳಗೊಂಡ 126 ರನ್ ಗಳಿಸಿದರೇ, ಬಾಬರ್ ಆಜಾಮ್ 63 ಎಸೆತಗಳಲ್ಲಿ 2 ಸಿಕ್ಸರ್, 6 ಬೌಂಡರಿ ಒಳಗೊಂಡ 66 ರನ್ ಗಳಿಸಿ ಅಜೇಯರಾಗುಳಿದರು. ಪಾಕಿಸ್ತಾನ ಬ್ಯಾಟಿಂಗ್ ವೇಳೆ ಮಳೆ 2 ಬಾರಿ ಅಡ್ಡಿಪಡಿಸಿತು. ಮೊದಲ ಬಾರಿಗೆ ಮಳೆ ಬಂದಾಗ, ಡಿಎಲ್‌ಎಸ್ ನಿಯಮದ ಪ್ರಕಾರ ಪಾಕ್‌ಗೆ 41 ಓವರ್‌ಗಳಿಗೆ 342 ರನ್ ಗುರಿ ನೀಡಲಾಯಿತು. ಎರಡನೇ ಸಲ ಮಳೆ ಬಂದು ಪಂದ್ಯ ನಿಂತ ವೇಳೆ ಪಾಕಿಸ್ತಾನ 25.3 ಓವರ್‌ಗಳಿಗೆ 1 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿತು. ಪಾಕ್ ಗೆಲ್ಲಲು ಇನ್ನೂ 93 ಎಸೆತಗಳಲ್ಲಿ 143 ರನ್ ಗಳಿಸಬೇಕಾಗಿತ್ತು. ಮಳೆ ನಿಲ್ಲದ ಕಾರಣ, ಪಾಕಿಸ್ತಾನ ತಂಡ ಡಿಎಲ್‌ಎಸ್ ನಿಯಮದ ಪ್ರಕಾರ ನ್ಯೂಜಿಲೆಂಡ್ ತಂಡಕ್ಕಿಂತ 21 ರನ್‌ಗಳ ಮುಂದಿತ್ತು. ಹೀಗಾಗಿ 21 ರನ್‌ಗಳ ಜಯ ಸಾಧಿಸಿತು. ನ್ಯೂಜಿಲೆಂಡ್ ಪರ ಟೀಂ ಸೌಥಿ ಒಂದು ವಿಕೆಟ್ ಪಡೆದರು. ಫಖರ್ ಜಮಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಎಲ್ಲರೂ ಕಾಯಕ ಯೋಗಿಗಳಾಗಿ, ಭಗವಂತನಿಗೆ ಹತ್ತಿರವಾಗಿ



ಹೆಚ್.ಡಿ.ಕೋಟೆ, ನ.4– ಬಸವಣ್ಣನವರು ನುಡಿದಂತೆ ಕಾಯಕವೇ ಕೈಲಾಸ ಎಂಬ ರೀತಿ, ಪ್ರತಿಯೊಬ್ಬರೂ ಕಾಯಕಯೋಗಿಗಳಾಗಬೇಕು. ಆಗ ಮಾತ್ರ ಭಗವಂತನಿಗೆ ಹತ್ತಿರವಾಗಲು ಸಾಧ್ಯ ಎಂದು ಪಡವಲು ವಿರಕ್ತ ಮಠದ ಶ್ರೀ ಮಹಾದೇವ ಸ್ವಾಮೀಜಿ ಹೇಳಿದರು.

ಪಟ್ಟಣದ ಶಾಂತಿಪುರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಹೆಚ್.ಡಿ.ಕೋಟೆ ಎರಡನೆಯ ವಲಯದಿಂದ ಏರ್ಪಡಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ತಾಲೂಕಿಗೆ ಯೋಜನೆ ಬಂದು ಹನ್ನೊಂದು ವರ್ಷಗಳಿಂದ ಕುಟುಂಬಗಳು ಹಲವಾರು ಸೌಲಭ್ಯಗಳನ್ನು ಪಡೆದುಕೊಂಡು ಉತ್ತಮ ಜೀವನ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗಿದೆ. ಸ್ವಾವಲಂಬಿ ಬದುಕನ್ನು ಮಾಡಲು ಯೋಜನೆ ಸಹಕಾರಿ ಆಗಿದೆ. ಎಲ್ಲರೂ ಸ್ಮರಿಸುವ ಕೆಲಸವನ್ನು ವೀರೇಂದ್ರ ಹೆಗ್ಗಡೆಯವರು ಮಾಡಿ ತೋರಿಸಿದ್ದಾರೆ. ರಾಜ್ಯ ಅಲ್ಲದೆ ಹೊರ ರಾಜ್ಯದಲ್ಲಿಯೂ ಕೂಡ ಜನರಿಗೆ ಸಹಕಾರ ಮಾಡಿಕೊಂಡು ಬಂದಿದ್ದಾರೆ ಎಂದು ತಿಳಿಸಿದರು.

ದುಡಿಮೆ ಇಲ್ಲದೆ ಯಾರೂ ಕೂತು ತಿನ್ನಬಾರದು. ಯಾವುದೇ ವೃತ್ತಿಯನ್ನು ಕೀಳು ಎಂದು ತಿಳಿಯದೆ ಎಲ್ಲರೂ ಕಾಯಕಯೋಗಿ ಆಗಬೇಕು. ಆಗ ಮಾತ್ರ ಭಗವಂತನಿಗೆ ಹತ್ತಿರ ಆಗಲು ಸಾಧ್ಯ ಎಂದು ತಿಳಿಸಿದರು.

ತಾಲೂಕು ಯೋಜನಾ ಅಧಿಕಾರಿ ಭಾಸ್ಕರ್ ಮಾತನಾಡಿ, ತಾಲೂಕಿನಲ್ಲಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು 17 ಕೋಟಿ ರೂ. ಉಳಿತಾಯ ಮಾಡಲಾಗಿದೆ, ಸಂಘದ ಸದಸ್ಯರಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಹಭಾಗಿತ್ವದಲ್ಲಿ ಕೃಷಿ, ನೀರಾವರಿ ಸೇರಿದಂತೆ ಒಂದು ವರ್ಷದಲ್ಲಿ 100 ಕೋಟಿ ರೂ ಸಾಲ ನೀಡಿ ಅನುಕೂಲ ಕಲ್ಪಿಸಲಾಗಿದೆ.

ಯೋಜನೆಯ ಮೈಸೂರು ಪ್ರಾದೇಶಿಕ ವಿಭಾಗ ನಿರ್ದೇಶಕ ಜಯರಾಮ ನೆಲ್ಲಿತಾಯಿ, ಶಾಂತಿಪುರ ಗ್ರಾಮದ ಕೋಡಿಗೌಡ, ಪುರಸಭಾ ಸದಸ್ಯರಾದ ಲೋಕೇಶ್, ಮಿಲ್ ನಾಗರಾಜು, ನಾಗರಾಜು, ನಂಜುಂಡಸ್ವಾಮಿ, ಸಿದ್ದಶೆಟ್ಟಿ, ರಾಜಗೋಪಾಲ್, ಲಕ್ಷ್ಮಣ್, ಕೃಷ್ಣನಾಯಕ, ಸಾಗರ್, ಮಹಾದೇವ ನಾಯಕ್, ಗುರುಮೂರ್ತಿ, ಮೇಲ್ವಿಚಾರಕಿ ಭಾರತಿ, ಸೇವಾ ಪ್ರತಿನಿಧಿ ಮಂಜುಳಾ, ಭಾನುಮತಿ, ಜಯಲಕ್ಷ್ಮಿ, ವಿನೂತ ಕುಮಾರಿ, ಯೋಗವತಿ, ಬಿಂಧು, ಷಾಂಭವಿ, ಚಿಕ್ಕಮ್ಮ, ನಾಗೇಶ್, ಸುದೀಪ್, ಸೋಮೇಶ್ ಇದ್ದರು.

ಗುರುಗೌತಮ್ ಹಳೇಪುರಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ



ನಂಜನಗೂಡು, ನ.4– ಕರ್ನಾಟಕ ರಾಜ್ಯ ಶಿಕ್ಷಕರ ಸಾಹಿತ್ಯ ಪರಿಷತ್ತು ಹಾಗೂ ಸ್ವರ್ಣಭೂಮಿ ಫೌಂಡೇಷನ್ ವತಿಯಿಂದ ನುಡಿ ಸಂಭ್ರಮ 2023 ಅಂಗವಾಗಿ ಕೊಡ ಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಸಾಂಸ್ಕೃತಿಕ ನಗರ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹಳೇಪುರ ಗ್ರಾಮದ ಯುವ ಕವಿ ಕನ್ನಡ ಪರ ಚಿಂತಕ ಗುರುಗೌತಮ್ ಅವರು ಭಾಜನರಾಗಿದ್ದಾರೆ . ಯುವಕವಿ ಗುರುಗೌತಮ್ ಅವರು ಹಲವಾರು ಕಿರು ಲೇಖನ, ಹನಿಗವನಗಳನ್ನು ಬರೆದಿದ್ದಾರೆ ಹಾಗೂ ಕವನ ಸಂಕಲನವನ್ನು ಹೊರ ತಂದಿದ್ದಾರೆ, ಭಾನುವಾರ(ನ.5)ದಾವಣಗೆರೆಯಲ್ಲಿ ನಡೆಯುವ ನುಡಿ ಸಂಭ್ರಮ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕನಾಟಕ ರಾಜ್ಯ ಶಿಕ್ಷಕರ ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷರಾದ ಬಿ.ಶಿವುಕುಮಾರ್ ಅವರು ತಿಳಿಸಿದ್ದಾರೆ.

ಇಂಗ್ಲೆಂಡ್ ವಿರುದ್ಧ ಆಸೀಸ್‌ಗೆ 33 ರನ್ ಜಯ



ಅಹಮದಾಬಾದ್, ನ.4– ಮಾರ್ನಸ್ ಲ್ಯಾಬುಸ್ಚಾಗ್ನೆ ಅವರ ಅರ್ಧಶತಕ ಹಾಗೂ ಆಡಂ ಜಂಪಾ ಅವರ ಆಲ್‌ರೌಂಡ್ ಆಟದ ನೆರವಿನಿಂದ ಆಸ್ಟ್ರೇಲಿಯಾ ಹಾಲಿ ಚಾಂಪಿಯನ್ ಇಂಗ್ಲೆಂಡ್ ವಿರುದ್ಧ 33 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡದ ಮೊತ್ತ 38 ರನ್ ಆಗುವಷ್ಟರಲ್ಲಿ ಟ್ರಾವಿಸ್ ಹೆಡ್, ಡೇವಿಡ್ ವಾರ್ನರ್ ವಿಕೆಟ್ ಕಳೆದುಕೊಂಡಿತು. ಈ ವೇಳೆ ಜೊತೆಯಾದ ಸ್ಟೀವನ್ ಸ್ಮಿತ್ ಹಾಗೂ ಮಾರ್ನಸ್ ಲ್ಯಾಬುಸ್ಚಾಗ್ನೆ 3ನೇ ವಿಕೆಟ್‌ಗೆ 75 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 44 ರನ್ ಗಳಿಸಿದ್ದ ಸ್ಮಿತ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಜೋಶ್ ಇಂಗ್ಲಿಸ್ 3ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಮಾರ್ನಸ್ ಲ್ಯಾಬುಸ್ಚಾಗ್ನೆ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 71 ರನ್ ಗಳಿಸಿದ್ದ ವೇಳೆ ಔಟಾದರು. ನಂತರ ಬಂದ ಕ್ಯಾಮರೂನ್ ಗ್ರೀನ್ 47, ಮಾರ್ಕಸ್ ಸ್ಟೋಯಿನಿಸ್ 35, ಜಂಪಾ 29ರನ್ ಗಳಿಸಿದರು. ಅಂತಿಮವಾಗಿ ಆಸ್ಟ್ರೇಲಿಯಾ 49.3 ಓವರ್‌ಗಳಲ್ಲಿ 286 ರನ್‌ಗಳಿಗೆ ಆಲೌಟ್ ಆಯಿತು. ಆಂಗ್ಲರ ಪರ ಕ್ರಿಸ್ ವೋಕ್ಸ್ 4, ಮಾರ್ಕ್ ವುಡ್, ಆದೀಲ್ ರಶೀದ್ ತಲಾ 2, ಡೇವಿ ವಿಲ್ಲಿ, ಲಿವಿಂಗ್ ಸ್ಟೋನ್ ತಲಾ ಒಂದೊಂದು ವಿಕೆಟ್ ಪಡೆದರು.

287 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ 48.1 ಓವರ್‌ಗಳಲ್ಲಿ 253 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಡೇವಿಡ್ ಮಲನ್ 50, ಬೆನ್ ಸ್ಟೋಕ್ಸ್ 64, ಮೊಯಿನ್ ಅಲಿ 42, ಕ್ರಿಸ್ ವೋಕ್ಸ್ 32, ಆದೀಲ್ ರಶೀದ್ 20, ಡೇವಿಡ್ ವಿಲ್ಲಿ 15 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ. ಆಸೀಸ್ ಪರ ಆಡಂ ಜಂಪಾ 3, ಮಿಚೆಲ್ ಸ್ಟಾರ್ಕ್, ಜೋಶ್ ಹ್ಯಾಜಲ್ವುಡ್, ಪ್ಯಾಟ್ ಕಮ್ಮಿನ್ಸ್ ತಲಾ 2, ಮಾರ್ಕಸ್ ಸ್ಟೋಯಿನಿಸ್ ಒಂದು ವಿಕೆಟ್ ಒಪ್ಪಿಸಿದರು. ಆಡಂ ಜಂಪಾ ಪಂದ್ಯಪುರುಷ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯ: ಭಾರತ /ದಕ್ಷಿಣ ಆಫ್ರಿಕಾ
ದಿನಾಂಕ: ನ.5, ಸಮಯ: ಮಧ್ಯಾಹ್ನ 2 ಗಂಟೆಗೆ
ಸ್ಥಳ: ಈಡನ್ ಗಾರ್ಡನ್ಸ್, ಕೋಲ್ಕತ್ತಾ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಡಿಸ್ನಿ ಹಾಟ್‌ಸ್ಟಾರ್

ಅಧಿಕಾರಿಗಳ ಕಣ್ಣಾಮುಚ್ಚಾಲೆ ಆಟ; ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್‌ನದ್ದೇ ಅಟ್ಟಹಾಸ!



- ನಾಮಾಕಾವಸ್ತೆ ಪ್ಲಾಸ್ಟಿಕ್ ತಪಾಸಣೆಗೆ ಕೇರ್ ಮಾಡದ ವ್ಯಾಪಾರಿಗಳು, ಸಾರ್ವಜನಿಕರು
- ಹಸಿರು ನ್ಯಾಯಾಧೀಕರಣ, ಅರಣ್ಯ ಸಚಿವರ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ
- ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ಹಳ್ಳ ಹಿಡಿಯುತ್ತಿರುವ ಮಹತ್ವದ ಘೋಷಣೆ







ಚಾಮುಲಿಂಗರಾಜ್ ಅರಸ್

ಮೈಸೂರು,ನ.4–ತಿರುಪತಿ ಮಾದರಿಯಲ್ಲಿ ಮೈಸೂರಿನ ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ಮಾಡುವ ಹಸಿರು ನ್ಯಾಯಾಧೀಕರಣದ ರಾಜ್ಯ ಸಮಿತಿ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ ಹಾಗೂ ಅರಣ್ಯ ಸಚಿವ ಈಶ್ವರ್ ಖಂಡ್ರೆ ಆದೇಶಕ್ಕೆ ಅಧಿಕಾರಿಗಳ ಮುಂದೆ ಕಿಮ್ಮತ್ತಿಲ್ಲ! ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಮಾರಾಟ, ಸಂಗ್ರಹ, ಬಳಕೆಗೆ ದಂಡಾಸ್ತ್ರ ಪ್ರಯೋಗ ಮಾಡಲಾಗುವುದು ಎಂಬ ಎಚ್ಚರಿಕೆಗೂ ವ್ಯಾಪಾರಸ್ಥರು ಡೋಂಟ್ ಕೇರ್ ಎಂದಿದ್ದಾರೆ. ಪ್ಲಾಸ್ಟಿಕ್ ಮುಕ್ತ ವಲಯ ಎಂದು ಅಧಿಕಾರಿಗಳು ಬೊಗಳೆ ಬಿಡುತ್ತಿದ್ದು ಚಾಮುಂಡಿಬೆಟ್ಟದಲ್ಲಿ ಈಗ ಪ್ಲಾಸ್ಟಿಕ್ ರಾರಾಜಿಸುತ್ತಿದೆ.

ಚಾಮುಂಡಿಬೆಟ್ಟ ಪ್ರಸಿದ್ಧ ಯಾತ್ರಾ ಸ್ಥಳ. ಈ ಹಿನ್ನೆಲೆಯಲ್ಲಿ ತಿರುಪತಿ ಮಾದರಿಯಲ್ಲಿ ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯವೆಂದು ಸೆ.1ರಂದು ಘೋಷಿಸಲಾಯಿತು. ಪ್ರಾಯಶಃ ಇಡೀ ಕರ್ನಾಟಕದಲ್ಲಿ ಪ್ಲಾಸ್ಟಿಕ್ ಮುಕ್ತ ವಲಯ ಎಂದು ಘೋಷಿಸಲ್ಪಟ್ಟ ಮೊದಲ ಸ್ಥಳವೆಂದರೆ ಅದು ಚಾಮುಂಡಿಬೆಟ್ಟ.

ಇದಕ್ಕೂ ಮೊದಲು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದ ಸುಭಾಷ್ ಬಿ. ಅಡಿ ಅವರು ಪ್ಲಾಸ್ಟಿಕ್ ನಿಷೇಧಕ್ಕೆ ಏನೆಲ್ಲಾ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದ್ದರು. ಯಾವುದೇ ಕಾರಣಕ್ಕೂ ಏಕ ಬಳಕೆ ಪ್ಲಾಸ್ಟಿಕ್ ಚಾಮುಂಡಿಬೆಟ್ಟದಲ್ಲಿ ಸುಳಿಯದಂತೆ ನಿಗಾವಹಿಸಬೇಕು. ಒಂದು ವೇಳೆ ಪ್ಲಾಸ್ಟಿಕ್ ಬಳಕೆ ಮಾಡಿದರೆ, ಪ್ರಕರಣ ದಾಖಲಿಸಿ ದಂಡ ವಿಧಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದರು.

ಆರಂಭ ಶೂರತ್ವ ಎಂಬಂತೆ ಅಧಿಕಾರಿಗಳು ಕಾರ್ಯಾಚರಣೆ ಕೈಗೊಂಡರು. ಅಂಗಡಿಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಇರಬಾರದೆಂದು ಸೂಚನೆ ನೀಡಿದರು. ಅಂದು ನಾಪತ್ತೆಯಾದ ಅಧಿಕಾರಿಗಳು ಈ ತನಕ ಇತ್ತ ತಿರುಗಿಯೂ ನೋಡಿಲ್ಲ. ಪ್ಲಾಸ್ಟಿಕ್ ಬಳಕೆ ತಡೆಯುವ ನಿಟ್ಟಿನಲ್ಲಿ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ವ್ಯಾಪಕ ರೀತಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ಅಂಗಡಿ ಮಾಲೀಕರಿಗೆ ದಂಡ ವಿಧಿಸುವುದಿರಲಿ, ಹೇಳುವವರು–ಕೇಳುವವರೇ ಇಲ್ಲ.

ಇದರಿಂದ ಪ್ಲಾಸ್ಟಿಕ್ ಮುಕ್ತ ವಲಯ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ರಾರಾಜಿಸುತ್ತಿದೆ. ಹೂವು, ಹಣ್ಣು, ತೆಂಗಿನ ಕಾಯಿ, ಗಂಧದಕಡ್ಡಿ ಸೇರಿದಂತೆ ಪೂಜಾ ಸಾಮಗ್ರಿಗಳನ್ನು ಕೊಂಡೊಯ್ಯಲು ಗ್ರಾಹಕರಿಗೆ ಪ್ಲಾಸ್ಟಿಕ್ ಕವರ್‌ಗಳನ್ನು ಬಳಸಲಾಗುತ್ತಿದೆ. ದೇವರಿಗೆ ನೀಡುವ ಸೀರೆಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟು ರಾಜಾರೋಷವಾಗಿ ಮಾರಾಟ ಮಾಡುತ್ತಿದ್ದಾರೆ. ಪ್ಲಾಸ್ಟಿಕ್ ಬಳಕೆ ಮಾಡುವ ಅಂಗಡಿ ಮಾಲೀಕರಿಗೆ ಅಧಿಕಾರಿಗಳ ಬಗ್ಗೆ ಭಯವೇ ಇಲ್ಲ. ಇನ್ನು ನಿಯಮಗಳ ಪಾಲಿಸುತ್ತಾರೆಯೇ?

ನಾನು ಮುಂದಿನ ಬಾರಿ ಮೈಸೂರಿಗೆ ಬರುವುದರೊಳಗೆ ಚಾಮುಂಡಿಬೆಟ್ಟ ಪ್ಲಾಸ್ಟಿಕ್ ಮುಕ್ತವಾಗಿರಬೇಕು ಎಂದು ಸುಭಾಷ್ ಬಿ.ಅಡಿ ಸೂಚನೆ ನೀಡಿದ್ದರು. ಆದರೆ ನ್ಯಾಯಾಧೀಶರೊಬ್ಬರ ಮಾತಿಗೂ ಅಧಿಕಾರಿಗಳು ಮನ್ನಣೆ ನೀಡಲ್ಲ ಎಂದರೆ ಇನ್ನು ಸಿಎಂ, ಸಚಿವರು, ಶಾಸಕರ ಮಾತು ಕೇಳುತ್ತಾರೆಯೇ ಎಂದು ಭಕ್ತರು ಗೇಲಿ ಮಾಡುತ್ತಿದ್ದಾರೆ.


ಪ್ಲಾಸ್ಟಿಕ್ ಬೀಸಾಡಿದರೆ 500 ರೂಪಾಯಿ ದಂಡ ವಿಧಿಸಲಾಗುವುದು. ಮೊದಲ ಬಾರಿಗೆ ಪ್ಲಾಸ್ಟಿಕ್ ಮಾರಾಟ ಮಾಡಿದರೆ 2,500 ರೂಪಾಯಿ, ಎರಡನೆ ಬಾರಿ 5000 ಹಾಗೂ ಮೂರನೇ ಬಾರಿ 10 ಸಾವಿರ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಲಾಗಿತ್ತು.

ಪ್ರಾಯಶಃ ಹೀಗೆ ದಂಡಾಸ್ತ್ರ ಪ್ರಯೋಗ ಮಾಡಿದ್ದರೆ ಅಂಗಡಿ ಮಾಲೀಕರು ಪ್ಲಾಸ್ಟಿಕ್ ಬಳಕೆ ಮಾಡುತ್ತಿರಲಿಲ್ಲವೇನೋ. ಆದರೆ ಅರಣ್ಯ ಇಲಾಖೆಯೂ ಸೇರಿದಂತೆ ಇತರ ಅಧಿಕಾರಿಗಳ ಬೇಜವಬ್ದಾರಿಯಿಂದ ಈಗ ಚಾಮುಂಡಿಬೆಟ್ಟದಲ್ಲಿ ಎಲ್ಲೆಲ್ಲೂ ಪ್ಲಾಸ್ಟಿಕ್ ರಾರಾಜಿಸುತ್ತಿದೆ.

ಚಾಮುಂಡಿಬೆಟ್ಟದ ರಸ್ತೆಯುದ್ದಕ್ಕೂ ಪ್ಲಾಸ್ಟಿಕ್ ಬಿಸಾಡಲಾಗಿದೆ. ಕಸದ ರಾಶಿಯಲ್ಲೂ ಬರೀ ಪ್ಲಾಸ್ಟಿಕ್ ತುಂಬಿರುತ್ತದೆ. ಹೀಗಾದರೆ ಚಾಮುಂಡಿಬೆಟ್ಟ ಅದ್ಹೇಗೆ ಪ್ಲಾಸ್ಟಿಕ್ ಮುಕ್ತ ವಲಯವಾಗುತ್ತದೆ ಎಂದು ಭಕ್ತರು ಪ್ರಶ್ನಿಸುತ್ತಾರೆ.

ಮೈಸೂರು, ಬೀದರ್ ಸೇರಿದಂತೆ ಕರ್ನಾಟಕದ 5 ನಗರಗಳನ್ನು ಪ್ಲಾಸ್ಟಿಕ್ ಮುಕ್ತ ವಲಯವಾಗಿ ಮಾಡಲು ಸರ್ಕಾರ ತೀರ್ಮಾನಿಸಿದೆ. ಈ ಸಂಬಂಧ ಶೀಘ್ರದಲ್ಲೇ ಆದೇಶ ಹೊರಡಿಸಲಾಗುವುದು ಎಂದು ಈಶ್ವರ ಖಂಡ್ರೆ ಇತ್ತೀಚೆಗೆ ತಿಳಿಸಿದ್ದರು. ಆದರೆ ಪವಿತ್ರ ಧಾರ್ಮಿಕ ಸ್ಥಳ ಚಾಮುಂಡಿಬೆಟ್ಟವನ್ನೇ ಪ್ಲಾಸ್ಟಿಕ್ ಮುಕ್ತ ಮಾಡಲು ಸಾಧ್ಯವಾಗದ ಸರ್ಕಾರಕ್ಕೆ ಇನ್ನು ಐದು ನಗರಗಳಲ್ಲಿ ಅದ್ಹೇಗೆ ಪ್ಲಾಸ್ಟಿಕ್ ಮುಕ್ತ ಮಾಡುತ್ತದೆ ಎಂಬ ಪ್ರಶ್ನೆ ಕೂಡ ಉದ್ಭವಿಸಿದೆ. ಸರ್ಕಾರ ರೂಪಿಸುವ ಕಾನೂನನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಿ, ಜಾರಿಗೊಳಿಸಬೇಕು. ಆದರೆ ಅವರೇ ನಿರ್ಲಕ್ಷ್ಯ ವಹಿಸಿದರೆ ಇನ್ನು ಜನ ಪಾಲಿಸುತ್ತಾರೆಯೇ?

ಮೈಸೂರಲ್ಲಿ ಸಭೆ ನಡೆಸಿ ಕ್ರಮ ಕೈಗೊಳ್ಳುತ್ತೇನೆ



ಪ್ಲಾಸ್ಟಿಕ್ ಮುಕ್ತ ವಲಯವೆಂದು ಘೋಷಣೆ ಮಾಡಿರುವ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ಬಗ್ಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಚಾಮುಂಡಿಬೆಟ್ಟದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಬಳಕೆ ಮಾಡಬಾರದೆಂದು ಅರಣ್ಯ ಇಲಾಖೆ ಹಾಗೂ ಜಿಲ್ಲಾಡಳಿತಕ್ಕೆ ಆದೇಶ ನೀಡಲಾಗಿತ್ತು. ಆದರೂ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ಬಗ್ಗೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ಲಾಸ್ಟಿಕ್ ಬಹಳ ಅಪಾಯಕಾರಿ ವಸ್ತುವಾಗಿದೆ. ಪ್ಲಾಸ್ಟಿಕ್ ತ್ಯಾಜ್ಯ ಮಣ್ಣಿನಲ್ಲಿ, ನೀರಿನಲ್ಲಿ ಕರಗುವುದಿಲ್ಲ. ಪ್ಲಾಸ್ಟಿಕ್ ಅನ್ನು ಸುಟ್ಟು ಹಾಕಿದರೆ ವಾಯು ಮಾಲಿನ್ಯವಾಗುತ್ತದೆ. ಪ್ಲಾಸ್ಟಿಕ್ ಮರು ಬಳಕೆ ಕೂಡ ಆಗುತ್ತಿಲ್ಲ. ಹೀಗಿರುವಾಗ ಎಲ್ಲೆಂದರೆ ಅಲ್ಲಿ ಬೀಸಾಡುವ ಪ್ಲಾಸ್ಟಿಕ್ ತಿಂದರೆ ಪ್ರಾಣಿಗಳು ಸಾವನ್ನಪ್ಪುತ್ತವೆ ಎಂದರು.

ಈ ಹಿನ್ನೆಲೆ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಆಗದಂತೆ ಎಚ್ಚರ ವಹಿಸಿ, ಪರಿಣಾಮಕಾರಿ ಜಾಗೃತಿ ಮೂಡಿಸುವಂತೆ ಹೇಳಿದ್ದೇನೆ. ಆದರೂ ಪ್ಲಾಸ್ಟಿಕ್ ಬಳಕೆ ಆಗುತ್ತಿರುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ತಿಳಿಸಿದರು. ಮುಂದಿನ ವಾರ ಮೈಸೂರಿಗೆ ಬರುತ್ತಿದ್ದೇನೆ. ಅಂದು ಈ ವಿಚಾರದ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತೇನೆ ಎಂದು ಈಶ್ವರ ಖಂಡ್ರೆ ಹೇಳಿದರು.

ಮೈಸೂರು ನಗರದಲ್ಲಿ ಮರಗಳ ಹನನಕ್ಕೆ ಮುಕ್ತಾವಕಾಶ!

ಮೈಸೂರು ನಗರದಲ್ಲಿ ನಿರಂತರವಾಗಿ ಮರಗಳ ಹನನ ನಡೆಯುತ್ತಿದೆ. ರಸ್ತೆ ಬದಿಯ ಮರಗಳು ಮನೆಗೆ ಬೆಳಕಿಗೆ ಅಡ್ಡಿ ಆಗುತ್ತಿವೆ ಎಂತಲೋ, ವಾಣಿಜ್ಯ ವ್ಯವಹಾರಕ್ಕೆ ತಡೆ ಆಗಿವೆ ಎಂತಲೋ ಇಲ್ಲ ಮನೆ ವಾಸ್ತುವಿಗೆ ಸರಿ ಇಲ್ಲ ಎಂದೋ ರಾತ್ರೋ ರಾತ್ರಿ ಇಲ್ಲವೇ ಹಾಡಹಗಲೇ ಮರಗಳ ತುಂಡರಿಸಲಾಗುತ್ತಿದೆ. ಇತ್ತೀಚೆಗೆ ಗೋಕುಲಂ 9ನೇ ಕ್ರಾಸ್‌ನಲ್ಲಿ ಸ್ವಚ್ಛಂದವಾಗಿ ಸಮೃದ್ಧವಾಗಿ ಬೆಳೆದು ನೂರಾರು ಜನರಿಗೆ ಆಶ್ರಯ ನೀಡಿದ್ದ ಮೂರು ಭಾರೀ ಹೊಂಗೆ ಮರಗಳ ಕಡಿದುರುಳಿಸಿರುವ ಸುತ್ತಮುತ್ತಲ ಜನರಾಗಲೀ, ಅರಣ್ಯ ಇಲಾಖೆ, ಪೊಲೀಸರಾಗಲೀ ಕೇಳಲಿಲ್ಲ. ನಗರವನ್ನು ಒಂದು ಸುತ್ತು ಹಾಕಿದರೆ ರಸ್ತೆ ಬದಿಯ ಮರಗಳ ಮೇಲೆ ಎಂತಹ ಘೋರ ದೌರ್ಜನ್ಯ ನಡೆಸಲಾಗಿದೆ. ಅವುಗಳು ಮತ್ತೆ ಚಿಗುರದಂತೆ ಪದೇ ಪದೇ ಕಡಿದು ಮೋಂಡಾಗಿಸಿರುವುದು ಪರಿಸರ ಪ್ರೇಮಿಗಳ ಕಣ್ಣಲ್ಲಿ ನೀರು ಬರಿಸುತ್ತದೆ. ದುರದೃಷ್ಟವಶದಿಂದ ಅರಣ್ಯ ಇಲಾಖೆ ಇರುವುದು ಬೆಳೆದಿರುವ ಕಾಡನ್ನು ರಕ್ಷಣೆ ಮಾಡುವುದಕ್ಕಷ್ಟೇ ಎಂಬಂತಾಗಿದೆ. ಇನ್ನು ಸಸಿಗಳನ್ನು ಬೆಳೆಸುವ ಮಹತ್ವಾಕಾಂಕ್ಷೆ ನೆಪದಲ್ಲಿ ವಿದ್ಯುತ್ ತಂತಿ ಹಾದು ಹೋಗಿರುವೆಡೆಯೇ ಅವುಗಳನ್ನು ನೆಟ್ಟು, ಅವು ಸ್ವಲ್ಪ ಬೆಳೆದ ಕೂಡಲೇ ನೆಪ್ಪೊಡ್ಡಿ ಕತ್ತರಿಸಿ ನಾಶಪಡಿಸುವ ಪರಿ ಮುಂದುವರೆದಿದೆ. ಈ ಸಂಗತಿ ಅರಣ್ಯ ಅಧಿಕಾರಿಗಳು, ಪರಿಸರ ಪ್ರೇಮಿಗಳ ಗಮನಕ್ಕೆ ಬಾರದೇ ಇರುವುದು ದುರದೃಷ್ಟಕರ ಸಂಗತಿ.

ದಸರಾ ವಸ್ತುಪ್ರದರ್ಶನದಲ್ಲಿ ಮತ್ತೊಂದು ಆಕರ್ಷಣೆ!

ಸೈಕಲ್ ಪ್ಯೂರ್ ಅಗರಬತ್ತಿಯ ಚಾಮುಂಡೇಶ್ವರಿ, ಶ್ರೀ ದತ್ತಾತ್ರೇಯ 'ಪ್ರತಿಕೃತಿ'





ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಸೈಕಲ್ ಪ್ಯೂರ್ ಅಗರ್‌ಬತ್ತಿ ಪ್ಯಾಕ್‌ಗಳಿಂದ ನಿರ್ಮಿಸಿರುವ ಕಲಾಕೃತಿಗಳನ್ನು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್‌ಗೌಡ ಹಾಗೂ ಸೈಕಲ್ ಪ್ಯೂರ್ ಅಗರ್‌ಬತ್ತಿ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಬೃಹತ್ ಅಗರ್‌ಬತ್ತಿ ಹೊತ್ತಿಸುವ ಮೂಲಕ ಅನಾವರಣಗೊಳಿಸಿದರು.

ಮೈಸೂರು,ನ.4(ಎಸ್‌ಬಿಡಿ)– ದಸರಾ ವಸ್ತು ಪ್ರದರ್ಶನದಲ್ಲಿ ಪ್ರತಿಷ್ಠಿತ ಸ್ವದೇಶಿ ಬ್ರ್ಯಾಂಡ್ ಸೈಕಲ್ ಪ್ಯೂರ್ ಅಗರ್‌ಬತ್ತಿ ಪ್ಯಾಕ್‌ಗಳನ್ನು ಬಳಸಿಕೊಂಡು ರೂಪಿಸಲಾಗಿರುವ ತಾಯಿ ಚಾಮುಂಡೇಶ್ವರಿ ಹಾಗೂ ಮರಿಯಾನೆ 'ಶ್ರೀ ದತ್ತಾತ್ರೇಯ' ಪ್ರತಿಕೃತಿಗಳು ಆಕರ್ಷಣೀಯವಾಗಿವೆ.

ವಿವಿಧ 75 ಸುಗಂಧಭರಿತ 5 ಸಾವಿರಕ್ಕೂ ಹೆಚ್ಚು ಸೈಕಲ್ ಪ್ಯೂರ್ ಅಗರ್‌ಬತ್ತಿ ಪ್ಯಾಕ್‌ಗಳನ್ನು ಬಳಸಿಕೊಂಡು ಮೂವರು ಪ್ರಮುಖ ಕಲಾವಿದರ ಮಾರ್ಗದರ್ಶನದಲ್ಲಿ 11 ನುರಿತ ಕಲಾವಿದರು ನಿರಂತರ 30 ದಿನಗಳ ಕಾಲ ಪರಿಶ್ರಮಿಸಿ, ಈ ಪ್ರತಿಕೃತಿಗಳನ್ನು ನಿರ್ಮಿಸಿದ್ದಾರೆ. ರಾಕ್ಷಸನ ಸಂಹಾರ ಮಾಡಿದ ತಾಯಿ ಚಾಮುಂಡೇಶ್ವರಿಗೆ ಶ್ರೀ ದತ್ತಾತ್ರೇಯ ಹಾರ ಸಮರ್ಪಿಸಲು ಮುಂದಾಗಿರುವಂತೆ ಪ್ರತಿಕೃತಿಗಳನ್ನು ರೂಪಿಸಿರುವುದು ಕಣ್ಮನ ಸೆಳೆಯುತ್ತದೆ. ದಸರಾ ವಸ್ತು ಪ್ರದರ್ಶನದಲ್ಲಿ ರೂಪಿತವಾಗಿರುವ ಈ ದೈವಿಕ ಸ್ಥಳ, ಎಲ್ಲರ ನೆಚ್ಚಿನ ಸೆಲ್ಫೀ ಪಾಯಿಂಟ್ ಕೂಡ ಆಗಿರುವುದು ವಿಶೇಷ. ಬೃಹತ್ ಸೈಕಲ್ ಅಗರ್‌ಬತ್ತಿಯ ಪರಿಮಳದ ನಡುವೆ ತಾಯಿ ಚಾಮುಂಡೇಶ್ವರಿ ದೇವಿಗೆ ನಮಿಸುವುದರ ಜೊತೆಗೆ ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸುತ್ತಿದ್ದಾರೆ.

ಕಳೆದ ವರ್ಷ ದಸರಾ ಸಂದರ್ಭದಲ್ಲಿ ಅರಮನೆ ಆವರಣದಲ್ಲೇ ಲಕ್ಷ್ಮೀ ಆನೆ ಜನ್ಮ ನೀಡಿದ ಗಂಡುಮರಿಗೆ 'ಶ್ರೀ ದತ್ತಾತ್ರೇಯ' ಎಂದು ನಾಮಕರಣ ಮಾಡಲಾಯಿತು. ಆ ನಿಮಿತ್ತ ಸೈಕಲ್ ಪ್ಯೂರ್ ಅಗರ್‌ಬತ್ತಿ ಪ್ಯಾಕ್‌ಗಳಲ್ಲಿ ದತ್ತಾತ್ರೇಯನ ಪ್ರತಿಕೃತಿ ರೂಪಿಸಲಾಗಿತ್ತು. ಸದ್ಯ ದತ್ತಾತ್ರೇಯ ಒಂದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಈ ಬಾರಿ ಆತನೊಂದಿಗೆ ಮಹಿಷಾಸುರ ಮರ್ದಿನಿ ಶ್ರೀ ಚಾಮುಂಡೇಶ್ವರಿ ಪ್ರತಿಕೃತಿಯನ್ನೂ ರೂಪಿಸಲಾಗಿದೆ. ಈ ಬಾರಿ ಪ್ಲಾಟಿನಂ ಪ್ರಾಯೋಜಕತ್ವದ ಮೂಲಕ ನಾಡಹಬ್ಬ ದಸರಾ ಯಶಸ್ವಿಗೆ ಕೈಜೋಡಿಸಿದ ಎನ್.ಆರ್. ಗ್ರೂಪ್ಸ್, ದಸರಾ ವಸ್ತು ಪ್ರದರ್ಶನದಲ್ಲೂ ಈ ರೀತಿಯಲ್ಲಿ ನಾಡದೇವಿಗೆ ನಮನ ಸಲ್ಲಿಸಿದೆ.

ಸೈಕಲ್ ಪ್ಯೂರ್ ಅಗರ್‌ಬತ್ತಿಯು ವಿವಿಧ 75 ಸುಗಂಧಗಳು ಹಾಗೂ ಅತ್ಯಾಕರ್ಷಕ ಪ್ಯಾಕ್‌ಗಳ ಸಂಯೋಜನೆಯಲ್ಲಿ ಭವ್ಯವಾಗಿ ನಿರ್ಮಿಸಲಾಗಿರುವ ಈ ಪ್ರತಿಕೃತಿಗಳನ್ನು ಇತ್ತೀಚೆಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಗೌಡ ಹಾಗೂ ಸೈಕಲ್ ಪ್ಯೂರ್ ಅಗರ್‌ಬತ್ತಿ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಸಾರ್ವಜನಿಕರ ವೀಕ್ಷಣೆಗೆ ಅನಾವರಣಗೊಳಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಅರ್ಜುನ್ ರಂಗ, ಮೈಸೂರು ದಸರಾ ವೈಭವದಲ್ಲಿ ಭಾಗಿಯಾಗುವ ಸುದೈವ ನಮ್ಮ ಸಂಸ್ಥೆಗೆ ದಕ್ಕಿದೆ. ತಾಯಿ ಚಾಮುಂಡೇಶ್ವರಿ ನೆಲೆವೀಡಲ್ಲಿ ಆರಂಭವಾದ ಸೈಕಲ್ ಪ್ಯೂರ್ ಅಗರ್‌ಬತ್ತಿ 75 ವರ್ಷದಿಂದ ಜನಮನದಲ್ಲಿ ಹಾಸುಹೊಕ್ಕಾಗಿದೆ. ಸೈಕಲ್ ಬ್ರ್ಯಾಂಡ್‌ಗೆ ಜಾಗತಿಕ ಮನ್ನಣೆ ದೊರೆತಿದೆ. ಭಕ್ತಿ ಮತ್ತು ಆಧ್ಯಾತ್ಮಿಕತೆಗೆ ಜೊತೆಯಾಗಿದೆ. ಈ ಸುಸಂದರ್ಭದಲ್ಲಿ 75 ಸುಗಂಧಗಳ ಐದು ಸಾವಿರ ಸೈಕಲ್ ಪ್ಯೂರ್ ಅಗರ್‌ಬತ್ತಿ ಪ್ಯಾಕ್‌ಗಳನ್ನು ಬಳಸಿ, ಚಾಮುಂಡೇಶ್ವರಿ ಹಾಗೂ ಶ್ರೀ ದತ್ತಾತ್ರೇಯ ಕಲಾ ಕೃತಿಗಳನ್ನು ರಚಿಸಲಾಗಿದೆ. ಈ ಮೂಲಕ ನಾಡದೇವಿಗೆ ನಮನ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೊಚ್ಚಿಯಲ್ಲಿ ನೌಕಾಪಡೆ ಹೆಲಿಕಾಪ್ಟರ್ ಪತನ, ಸಿಬ್ಬಂದಿ ಸಾವು



ಕೊಚ್ಚಿ,ನ.4–ಭಾರತೀಯ ನೌಕಾಪಡೆಯ ಚೇತಕ್ ಹೆಲಿಕಾಪ್ಟರ್ ಪತನವಾಗಿದ್ದು ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಕೊಚ್ಚಿಯಲ್ಲಿರುವ ಭಾರತೀಯ ನೌಕಾಪಡೆಯ ಪ್ರಧಾನ ಕಛೇರಿಯಾದ ಐಎನ್‌ಎಸ್ ಗರುಡಾದ ರನ್‌ವೇಯಲ್ಲಿ ವಾಡಿಕೆಯ ತರಬೇತಿಯ ಸಮಯದಲ್ಲಿ ಹೆಲಿಕಾಪ್ಟರ್ ಅಪಘಾತಕ್ಕೀಡಾಯಿತು. ಅಪಘಾತದಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದು ತರಬೇತಿ ವಿಮಾನ: ಹೆಲಿಕಾಪ್ಟರ್‌ನಲ್ಲಿ ಅಧಿಕಾರಿ ಸೇರಿದಂತೆ ಇಬ್ಬರು ಇದ್ದರು ಎಂದು ಹೇಳಲಾಗಿದೆ. ಮಧ್ಯಾಹ್ನ 2.30ರ ಸುಮಾರಿಗೆ ಅಪಘಾತ ಸಂಭವಿಸಿದೆ. ತರಬೇತಿ ಅವಧಿಯಲ್ಲಿ ಹೆಲಿಕಾಪ್ಟರ್ ಟೇಕ್ ಆಫ್ ಆಗಿತ್ತು. ಈ ವೇಳೆ ಹೆಲಿಕಾಪ್ಟರ್ ಅಪಘಾತಕ್ಕೀಡಾಯಿತು. ಹೆಲಿಕಾಪ್ಟರ್‌ನ ಪೈಲಟ್ ಗಾಯ ಗೊಂಡಿರುವುದು ಬೆಳಕಿಗೆ ಬಂದಿದೆ. ಆದರೆ ಅವರ ಪಕ್ಕದಲ್ಲಿ ಕುಳಿತಿದ್ದ ಅಧಿಕಾರಿ ಸಾವನ್ನಪ್ಪಿದ್ದಾರೆ. ಮಾಹಿತಿ ಪಡೆದ ಕೇರಳ ಪೊಲೀಸರು ಮತ್ತು ಸೇನಾ ಏಜೆನ್ಸಿಗಳು ತನಿಖೆ ಆರಂಭಿಸಿವೆ. ಇದರೊಂದಿಗೆ ರಕ್ಷಣಾ ಕಾರ್ಯಾಚರಣೆಯೂ ನಡೆಯುತ್ತಿದೆ.



ಮೈಸೂರಿನ ಬಿಇಎಂಎಲ್ ನಗರ ಶ್ರೀರಾಂಪುರ 2ನೇ ಹಂತ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಇದೇ ವೇಳೆ ಹಿರಿಯ ರಂಗಭೂಮಿ ಕಲಾವಿದರಾದ ಬಿ.ಎಂ.ಮಹದೇವಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಸಂಘದ ಅಧ್ಯಕ್ಷ ಎಸ್.ದೇವರಾಜ್, ಮಾಜಿ ಅಧ್ಯಕ್ಷ ಬಸವರಾಜ್, ನಿವಾಸಿಗಳು ಉಪಸ್ಥಿತರಿದ್ದರು.

ನೇಪಾಳದಲ್ಲಿ ಪ್ರಬಲ ಭೂಕಂಪ: ಸಾವಿನ ಸಂಖ್ಯೆ 128ಕ್ಕೆ ಏರಿಕೆ



ಕಠ್ಮಂಡು: ಪ್ರಬಲ ಭೂಕಂಪಕ್ಕೆ ನೇಪಾಳ ರಾಷ್ಟ್ರ ನಲುಗಿ ಹೋಗಿದ್ದು, ಭೂಕಂಪದ ಪರಿಣಾಮ 128 ಮಂದಿ ಸಾವನ್ನಪ್ಪಿದ್ದಾರೆ. ಅಲ್ಲದೆ, ನೂರಾರು ಮಂದಿ ಸಾವನ್ನಪ್ಪಿ, ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ ಎಂದು ತಿಳಿದುಬಂದಿದೆ.

ಹಿಮಚ್ಛಾದಿತ ಪ್ರದೇಶವಾಗಿರುವ ನೇಪಾಳದ ಪಶ್ಚಿಮ ಗಡಿ ಭಾಗದಲ್ಲಿ ನೆಲಮಟ್ಟದಿಂದ ಭೂಮಿಯ ಒಳಗೆ ಸುಮಾರು 18 ಕಿ.ಮೀ. ದೂರದಲ್ಲಿ ಕಂಪನ ಕೇಂದ್ರ ಸ್ಥಾನವಿತ್ತು. ರಿಕ್ಟರ್ ಮಾಪಕದಲ್ಲಿ 6.4 ತೀವ್ರತೆಯನ್ನು ಈ ಕಂಪನಗಳು ಹೊಂದಿದ್ದವು ಎಂದು ಅಮೆರಿಕದ ಜಿಯೋಲಜಿಕಲ್ ಸರ್ವೆ ಇಲಾಖೆ ತಿಳಿಸಿದೆ.

ಈ ನಡುವೆ ಕಂಪನದ ಕೇಂದ್ರ ಸ್ಥಾನದಿಂದ ಅಂದಾಜು 500 ಕಿ.ಮೀ. ದೂರವಿರುವ, ಭಾರತದ ರಾಜಧಾನಿ ದೆಹಲಿಯಲ್ಲೂ ಕಂಪನದ ಅನುಭವಗಳಾಗಿವೆ. ಆದರೆ, ಯಾವುದೇ ಕಟ್ಟಡ ಹಾನಿ ಅಥವಾ ಸಾವು ನೋವು ಸಂಭವಿಸಿಲ್ಲ. ದೆಹಲಿ–ರಾಷ್ಟ್ರ ರಾಜಧಾನಿ ಪ್ರಾಂತ್ಯ (ದೆಹಲಿ–ಎನ್‌ಸಿಆರ್) ಹಾಗೂ ನೊಯ್ಡಾ ಮುಂತಾದ ಕಡೆಗಳಲ್ಲಿ ಕಂಪನದ ಅನುಭವ ಉಂಟಾಗಿದೆ ಎಂದು ತಿಳಿದುಬಂದಿದೆ. ಶುಕ್ರವಾರ ರಾತ್ರಿ 11:47 ಕ್ಕೆ ಜಜರ್ಕೋಟ್‌ನ ರಾಮಿದಂಡಾದಲ್ಲಿ ಸಂಭವಿಸಿದ ಭೂಕಂಪದಿಂದ ಉಂಟಾದ ಸಾವು–ನೋವಿನ ಬಗ್ಗೆ ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ ಸಂತಾಪ ವ್ಯಕ್ತಪಡಿಸಿದ್ದಾರೆ. ತಕ್ಷಣದ ರಕ್ಷಣೆ ಮತ್ತು ಪರಿಹಾರಕ್ಕಾಗಿ ಎಲ್ಲಾ 3 ಭದ್ರತಾ ಏಜೆನ್ಸಿಗಳನ್ನು ನಿಯೋಜಿಸಲಾಗಿದೆ ಎಂದು ನೇಪಾಳ ಪಿಎಂಓ ಟ್ವೀಟ್ ಮಾಡಿದೆ. ನೇಪಾಳದಲ್ಲಿ ಭೂಕಂಪದಿಂದಾಗಿ ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು ಎಂದು ಹೇಳಲಾಗುತ್ತಿದೆ.

ನೇಪಾಳದಲ್ಲಿ ಒಂದು ತಿಂಗಳ ಅವಧಿಯಲ್ಲಿ ಮೂರನೇ ಬಾರಿಗೆ ಪ್ರಬಲ ಭೂಕಂಪ ಸಂಭವಿಸಿದೆ. ದೆಹಲಿಯ ಪಕ್ಕದಲ್ಲಿರುವ ನೋಯ್ಡಾ ಮತ್ತು ಗ್ರೇಟರ್ ನೋಯ್ಡಾದ ಕೆಲವು ಭಾಗಗಳಲ್ಲಿಯೂ ಭೂಕಂಪನದ ಅನುಭವವಾಗಿದ್ದು, ಬಹುಮಹಡಿ ಕಟ್ಟಡಗಳಲ್ಲಿ ವಾಸಿಸುವ ಅನೇಕ ಜನರು ಹೊರಬಂದಿದ್ದಾರೆ.

ಉತ್ತರ ಪ್ರದೇಶದ ಲಕ್ನೋ, ಬಸ್ತಿ, ಬಾರಾಬಂಕಿ, ಫಿರೋಜಾಬಾದ್, ಅಮೇಥಿ, ಗೊಂಡಾ, ಪ್ರತಾಪಗಢ, ಭದೋಹಿ, ಬಹ್ರೈಚ್, ಗೋರಖ್‌ಪುರ ಮತ್ತು ಡಿಯೋರಿಯಾ ಜಿಲ್ಲೆಗಳಲ್ಲಿ ಭೂಕಂಪನದ ಅನುಭವವಾಗಿದೆ. ಜೊತೆಗೆ ಬಿಹಾರದ ಕತಿಹಾರ್, ಮೋತಿಹಾರಿ ಮತ್ತು ಪಾಟ್ನಾದಲ್ಲೂ ಭೂಮಿ ನಡುಗಿದ ಅನುಭವವಾಗಿದೆ.

ಆನೆ ದಂತ ಮಾರಾಟ ಯತ್ನ: ಕೊಡಗಿನ ಮೂವರು ಸೇರಿ 6 ಮಂದಿ ಬಂಧನ

1.5 ಕೋಟಿ ರೂ. ಮೌಲ್ಯದ ದಂತ ವಶ, ಗೋಣಿಕೊಪ್ಪಲಿನಲ್ಲಿ ಶೋಧ ಕಾರ್ಯಾಚರಣೆ



ಆರೋಪಿಗಳಿಂದ ವಶಪಡಿಸಿಕೊಳ್ಳಲಾದ ಆನೆ ದಂತ.

ಸಿದ್ದಾಪುರ, ನ.4– ಕೇರಳದಲ್ಲಿ ಆನೆ ದಂತ ಮಾರಾಟಕ್ಕೆ ಯತ್ನಿಸುತ್ತಿದ್ದ ಕೊಡಗು ಜಿಲ್ಲೆಯ ಮೂವರು ಸೇರಿದಂತೆ ಒಟ್ಟು 6 ಮಂದಿಯನ್ನು ಕೇರಳ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 5.5 ಕೆಜಿ ತೂಕದ 1.5 ಕೋಟಿ ರೂ. ಬೆಲೆಬಾಳುವ 1 ಆನೆ ದಂತವನ್ನು ವಶಕ್ಕೆ ಪಡೆಯಲಾಗಿದೆ.

ಕೇರಳದ ಮಾನಂದವಾಡಿಯ ಲಾಡ್ಜ್ ಒಂದರಲ್ಲಿ ಆನೆ ದಂತ ಮಾರಾಟಕ್ಕೆ ಯತ್ನಿಸುತ್ತಿರುವ ಬಗ್ಗೆ ಮಾನಂದವಾಡಿ ಅರಣ್ಯ ಇಲಾಖೆ ಗುಪ್ತಚರ ವಿಭಾಗ ಮತ್ತು ಅಲ್ಲಿನ ಪೊಲೀಸರಿಗೆ ಮಾಹಿತಿ ಲಭಿಸಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಗುಪ್ತಚರ ವಿಭಾಗ ಮತ್ತು ಪೊಲೀಸ್ ಫ್ಲೈಯಿಂಗ್ ಸ್ಕ್ವಾಡ್ ತಂಡಗಳ ಜಂಟಿ ಕಾರ್ಯಾಚರಣೆ ನಡೆಸಿ ಗೋಣಿಕೊಪ್ಪಲು ನಿವಾಸಿ ರಾಜು(52), ಪೊನ್ನಂಪೇಟೆಯ ಪಿಲಿಪ್ ಮ್ಯಾಥ್ಯು(68), ಶೆಟ್ಟಿಗೇರಿಯ ಗೇಪ್(60), ವಯನಾಡಿನ ವಕೇರಿಯ ಸುಧೀಶ್(36), ಜಸ್ಟಿನ್ ಜೋಸೆಫ್(24) ಮತ್ತು ಯೆಲ್ದೋ(30) ಎಂಬ ಆರೋಪಿಗಳನ್ನು ಆನೆ ದಂತ ಸಹಿತ ಬಂಧಿಸಿದ್ದಾರೆ. ಆರೋಪಿಗಳು ರಾಜ್ಯದಿಂದ ದಂತ ತೆಗೆದುಕೊಂಡು ಹೋಗಿ ಕೇರಳದಲ್ಲಿ ಮಾರಾಟಕ್ಕೆ ಯತ್ನಿಸುತ್ತಿದ್ದರು ಎಂಬ ಆರೋಪವಿದೆ. ಬಂಧಿತ ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಿರುವ ಕೇರಳ ಪೊಲೀಸರು, ಸರ್ಚ್ ವಾರೆಂಟ್ ಪಡೆದುಕೊಂಡು ಗೋಣಿಕೊಪ್ಪಲು ಪಟ್ಟಣದಲ್ಲಿಯೂ ಶೋಧ ಕಾರ್ಯ ನಡೆಸಿದ್ದಾರೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಕೆಲವು ಶಂಕಿತ ವ್ಯಕ್ತಿಗಳ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿರುವುದಾಗಿ ವಿಶ್ವಸನೀಯ ಮೂಲಗಳು ಮಾಹಿತಿ ನೀಡಿವೆ.

ಕೊಡಗಿನ ಅಧಿಕಾರಿಗಳಿಂದ ಶೋಧ: ಮಡಿಕೇರಿ ಫಾರೆಸ್ಟ್ ಸ್ಕ್ವಾಡ್‌ನ ಎಸಿಎಫ್ ಶ್ರೀನಿವಾಸ್ ನಾಯಕ್ ನೇತೃತ್ವದಲ್ಲಿ ಆರ್ ಎಫ್‌ಓಗಳಾದ ಶಮಾ, ಚಂದು, ವಿಕ್ರಂ, ನಾಗಮಣಿ ಮತ್ತು ಅರಣ್ಯ ಇಲಾಖೆ ಸಿಬ್ಬಂದಿಗಳು ಗೋಣಿಕೊಪ್ಪ ಮತ್ತು ಪೊನ್ನಂಪೇಟೆಯ ವಿವಿಧ ಕಡೆಗಳಲ್ಲಿ ಶೋಧ ಕಾರ್ಯ ನಡೆಸಿದ್ದಾರೆ ಬಂಧಿತ ಆರೋಪಿಗಳಿಗೆ ಸಂಬಂಧಿಸಿದ ಆಸ್ತಿಗಳ ಮೇಲೂ ದಾಳಿ ನಡೆಸಿ, ವನ್ಯಜೀವಿಗಳಿಗೆ ಸಂಬಂಧಿಸಿದ ವಸ್ತುಗಳ ಸಂಗ್ರಹದ ಬಗ್ಗೆ ಶೋಧ ನಡೆಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಆರೋಪಿಗಳ ಹೆಸರು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ತನಿಖೆಯನ್ನು ಚುರುಕುಗೊಳಿಸಲಾಗಿದೆ ಎಂದು ತಿಳಿದು ಬಂದಿದೆ.

ಕನ್ನಡ ಉಳಿದರೆ, ಕರ್ನಾಟಕ ಉಳಿದಂತೆ

ಕನ್ನಡ ರಾಜ್ಯೋತ್ಸವದ ಸಮಾರೋಪದಲ್ಲಿ ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ಅಭಿಪ್ರಾಯ



ವಿರಾಜಪೇಟೆ, ನ.4– ಕನ್ನಡ ಭಾಷೆಯ ಏಳಿಗೆಗಾಗಿ ರಾಜ್ಯ ಸರಕಾರ ನಿರಂತರವಾಗಿ ಕೆಲಸ ಮಾಡುತ್ತಿದ್ದು ಕನ್ನಡ ಭಾಷೆಯ ರಕ್ಷಣೆಯಾದರೆ ಮಾತ್ರ ಕರ್ನಾಟಕ ರಾಜ್ಯ ಉಳಿಸಲು ಸಾಧ್ಯವಾಗುತ್ತದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ತಿಳಿಸಿದ್ದಾರೆ.

ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿರಾಜಪೇಟೆ ಕರ್ನಾಟಕ ಸಂಘದ ವತಿಯಿಂದ ಸ್ಥಳಿಯ ಪುರಭವನದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಸ್ಪರ್ಧಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಕನ್ನಡ ಭಾಷೆ ಬೆಳವಣಿಗೆಯಲ್ಲಿ ಕೊಡಗಿನ ಸಾಹಿತಿಗಳ ಮಹತ್ವದ ಕೊಡುಗೆ ಇದ್ದು, ಸಾಹಿತ್ಯ ಸಂಸ್ಕೃತಿ ಭಾಷೆಯಲ್ಲಿ ಕನ್ನಡಕ್ಕೆ ಅದ್ಯತೆ ನೀಡಿದ್ದಾರೆ ಎಂದರು.

ವಿಜಯನಗರ ರಾಜರ ಕಾಲದಿಂದಲೂ ಕನ್ನಡ ಭಾಷೆಯ ಸಂಸ್ಕೃತಿ ವಿಜೃಂಭಿಸುತ್ತ ಬಂದಿದೆ ಇಂದಿನ ಯುವ ಜನಾಂಗ ಮುಂದಿನ ಪೀಳಿಗೆಗೆ ಕನ್ನಡವನ್ನು ಉಳಿಸಿ ಬೆಳೆಸಬೇಕೆಂದು ಕರೆ ನೀಡಿದ ಶಾಸಕ ಪೊನ್ನಣ್ಣ ಅವರು ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಕನ್ನಡಕ್ಕೆ ಹೆಚ್ಚು ಆಧ್ಯತೆ ನೀಡುತ್ತಿದ್ದಾರೆ. ಇದಕ್ಕೆ ಈ ಬಾರಿಯ ಕನ್ನಡ ರಾಜ್ಯೋತ್ಸವ ಆಚರಣೆಯೇ ಸಾಕ್ಷಿಯಾಗಿದೆ. ಈ ಹಿಂದೆಯು ಒಂದರಿಂದ ಹತ್ತನೆ ತರಗತಿಯವರಗೆ ಕನ್ನಡ ಕಡ್ಡಾಯ ಮಾಡಿತ್ತು. ಈಗ ಕನ್ನಡ ಕಲಿಕೆಗೆ ಸರಕಾರ ಹೆಚ್ಚು ಒತ್ತು ನೀಡಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಕರ್ನಾಟಕ ರಾಜ್ಯ ಗಿಡ, ಮರಗಳು, ನದಿಗಳು, ಬೆಟ್ಟ ಗುಡ್ಡಗಳ ಸಾಲು, ಉತ್ತಮ ಪರಿಸರ ಸಂಪತ್ತಿನ ಸಂಮೃದ್ಧಿಯ ಶ್ರೀಮಂತ ರಾಜ್ಯವಾಗಿದೆ. ಕನ್ನಡ ನಾಡಿನಲ್ಲಿ ಅಂದಿನಿಂದ ಇಂದಿನವರೆಗೆ ಸಾಹಿತಿಗಳು ಮತ್ತು ಕನ್ನಡ ಅಭಿಮಾನಿಗಳು ಕನ್ನಡದ ಉಳಿವಿಗಾಗಿ ಸಾಕಷ್ಟು ಹೋರಾಟ ನಡೆಸಿದ್ದಾರೆ ಎಂದರು.

ಮಾಜಿ ಅಂತರಾಷ್ಟ್ರಿಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿದ ಮಾದಂಡ ತಿಮ್ಮಯ್ಯ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕರ್ನಾಟಕ ಸಂಘದ ಅಧ್ಯಕ್ಷ ಮಾಳೇಟಿರ ಬೆಲ್ಲುಪೋಪಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಕನ್ನಡ ನಾಡು ನುಡಿ ಉಳಿವಿಗಾಗಿ ಇನ್ನು ಹೆಚ್ಚು ಕನ್ನಡಪರ ಕಾರ್ಯಕ್ರಮಗಳನ್ನು ಸಂಘದ ವತಿಯಿಂದ ಹಮ್ಮಿಕೊಳ್ಳುವುದಾಗಿ ಹೇಳಿದರು.

ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಬಳಿಕ ತಾಲೂಕಿನ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ವಿವಿಧ ಸ್ಪರ್ಧಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಸುರೇಶ್ ನಾಣಯ್ಯ ಸ್ವಾಗತಿಸಿದರು, ಆಶಾ ಸುಬ್ಬಯ್ಯ ನಿರೂಪಿಸಿದರೆ, ಗಿರೀಶ್ ಪೂಣಚ್ಚ ವಂದಿಸಿದರು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಜಿಂಕೆ ಬೇಟೆಯಾಡಿ ಮಾಂಸ ಸಾಗಿಸುತ್ತಿದ್ದ ಇಬ್ಬರ ಸೆರೆ

ಬಂಧಿತರಿಂದ ಬಂದೂಕು, 2 ಜಿಂಕೆ ತಲೆ, ಮಾಂಸ, ಕತ್ತಿ, ಕಾರು ವಶ



ಮಡಿಕೇರಿ,ನ.4– ಜಿಂಕೆಗಳನ್ನು ಬೇಟೆಯಾಡಿ ಮಾಂಸವನ್ನು ಸಾಗಿಸುತ್ತಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ವಿರಾಜಪೇಟೆ ಪೊಲೀಸ್ ಅರಣ್ಯ ಸಂಚಾರಿ ದಳ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿದೆ.

ಬೇಟೋಳಿ ಗ್ರಾಮದ ನಿವಾಸಿ ವಿರಾಜಪೇಟೆಯ ಬೇಕರಿ ಮಾಲೀಕ ಎಂ.ಎಂ.ಅಜೀಜ್(45), ನೆಹರುನಗರ ನಿವಾಸಿ ಆಟೋ ಚಾಲಕ ಹುಸೈನ್ ಸಿ.ಎ. ಅಲಿಯಾಸ್ ಜಂಶೀರ್(32) ಬಂಧಿತ ಆರೋಪಿಗಳಾಗಿದ್ದಾರೆ. ಆರೋಪಿಗಳಿಂದ ಎರಡು ಜಿಂಕೆ ತಲೆ, 44 ಕೆಜಿ ಮಾಂಸ, 1 ಬಂದೂಕು, ಮಾಂಸ ಸಾಗಾಟಕ್ಕೆ ಬಳಸಿದ 1 ಕಾರನ್ನು ವಶಕ್ಕೆ ಪಡೆಯಲಾಗಿದೆ.

ಪ್ರಕರಣ ಹಿನ್ನೆಲೆ: ನ.3ರಂದು ವಿರಾಜಪೇಟೆ ಪೆರುಂಬಾಡಿ ಕಡೆಯಿಂದ ಬಿಟ್ಟಂಗಾಲ ಕಡೆಗೆ ಇನೋವಾ ಕಾರಿನಲ್ಲಿ ವನ್ಯಜೀವಿ ಮಾಂಸ ಸಾಗಿಸುತ್ತಿರುವ ಕುರಿತು ಪೊಲೀಸ್ ಅರಣ್ಯ ಸಂಚಾರಿ ದಳದ ಉಪ ನಿರೀಕ್ಷಕ ಎಂ.ಸಿ.ಮುತ್ತಣ್ಣ ಅವರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ಹೆಗ್ಗಳ ಬಳಿ ಕಾರು ತಡೆದು ಪರಿಶೀಲಿಸಿದ ಸಂದರ್ಭ ಎರಡು ಜಿಂಕೆಯ ಒಟ್ಟು 44 ಕೆಜಿ ಮಾಂಸ, ಪ್ಲಾಸ್ಟಿಕ್ ಚೀಲದಲ್ಲಿ ಇದ್ದ 2 ಜಿಂಕೆಯ ತಲೆಗಳು, 1 ಒಂಟಿ ನಳಿಕೆ ಕೋವಿ, 2 ಕತ್ತಿ, 3 ಚೂರಿಗಳು ಪತ್ತೆಯಾಗಿದ್ದು, ಆರೋಪಿಗಳನ್ನು ಸ್ಥಳದಲ್ಲೇ ಬಂಧಿಸಿದ್ದಾರೆ. ಮಾಂಸ ಸಾಗಾಟಕ್ಕೆ ಬಳಸಿದ್ದ ಇನೋವಾ ಕಾರ (ಕೆಎ–02 ಎಂಎ.7011) ನ್ನು ವಶಕ್ಕೆ ಪಡೆಯಲಾಗಿದೆ.

ಚಾಮಿಯಾಲ ಮೈತಾಡಿಯ ಅಜೀಜ್(ಅಜ್ಜು), ಬೇಟೋಳಿ ಗುಂಡಿಗೆರೆಯ ಅಶ್ರಫ್, ಅಲಿಯಾಸ್ ಅಚ್ಚು, ಬೇಟೋಳಿ ಗುಂಡಿಗೆರೆಯ ಶಿಯಾಬ್ ಎಂಬ ಆರೋಪಿಗಳು ಕೂಡ ಈ ಕೃತ್ಯದಲ್ಲಿ ಭಾಗಿಗಳಾಗಿದ್ದು, ಈ ಮೂರು ಮಂದಿ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಎಲ್ಲಾ ಆರೋಪಿಗಳ ವಿರುದ್ಧ ವನ್ಯಜೀವಿ ತಿದ್ದುಪಡಿ ಕಾಯ್ದೆ 2023ರ 1, 3, 25 ಹಾಗೂ ಭಾರತೀಯ ಶಸ್ತ್ರಾಸ್ತ್ರ ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮಕೈಗೊಳ್ಳಲಾಗಿದೆ. ಆರೋಪಿಗಳು ಮಾಕುಟ್ಟ ರಕ್ಷಿತ ಅರಣ್ಯದಲ್ಲಿ ಜಿಂಕೆಗಳನ್ನು ಬೇಟೆಯಾಡಿರಬಹುದು ಎಂದು ಶಂಕಿಸಲಾಗಿದೆ.

ಶ್ರೀಮಂಗಲ ಗ್ರಾಮದಲ್ಲಿ ವಿದ್ಯುತ್ ಉಪ ಕೇಂದ್ರ ಉದ್ಘಾಟನೆ

ಮಡಿಕೇರಿ, ನ.4– ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಶುಕ್ರವಾರ ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂನ ಶ್ರೀಮಂಗಲ ಗ್ರಾಮದಲ್ಲಿ, 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ಉದ್ಘಾಟಿಸಿದರು. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್. ಪೊನ್ನಣ್ಣ, ಸಂಸದರಾದ ಪ್ರತಾಪ್ ಸಿಂಹ ಇತರರು ಇದ್ದರು.

ನಾಳೆ ಕೊಡಗಲ್ಲಿ ಅಕ್ಷರ ದಾಸೋಹ ಬಿಸಿಯೂಟ ಸ್ಥಗಿತ

ವಿರಾಜಪೇಟೆ: ಕೊಡಗಿನ ಅಕ್ಷರ ದಾಸೋಹ ನೌಕರರು ಬಿಸಿಯೂಟ ಸ್ಥಗಿತಗೊಳಿಸಿ ನ.6 ರಂದು ಬೆಂಗಳೂರಿನಲ್ಲಿ ನಡೆಯುವ ಅನಿರ್ಧಿಷ್ಟಾವಧಿ ಮುಷ್ಕರದಲ್ಲಿ ಭಾಗವಹಿಸುವುದಾಗಿ ನೌಕರರ ಸಂಘದ ಪದಾಧಿಕಾರಿಗಳು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಅವರ ಕಚೇರಿಯಲ್ಲಿ ಮನವಿ ಸಲ್ಲಿಸಿ ತಿಳಿಸಿದರು.

ಜಿಲ್ಲಾ ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷೆ ಕೆ.ಎ.ಪ್ರಮೀಳ ಮಾತನಾಡಿ ಬಿಸಿಯೂಟ ನೌಕರರನ್ನು 60 ವರ್ಷ ತುಂಬಿದವರನ್ನು ಕೆಲಸದಿಂದ ತೆಗೆದಿದ್ದು, ಅವರಿಗೆ 1 ಲಕ್ಷ ರೂ. ಹಾಗೂ ನಿವೃತ್ತಿ ಯಾದವರಿಗೂ 1 ಲಕ್ಷ ರೂ. ನೀಡಬೇಕು ಎಂದರು.

ಸರಕಾರದ ಸೌಲಭ್ಯಗಳು ದೊರಕಬೇಕು. ಈಗ ಕಳೆದ 3 ತಿಂಗಳಿನಿಂದ ಸಂಭಾವನೆ ಬಂದಿಲ್ಲ. ಬಿಸಿಯೂಟ ನೌಕರರೆಲ್ಲರೂ ಬಡ ಕುಟುಂಬದವರಾಗಿರುವುದರಿಂದ ಅಕ್ಷರ ದಾಸೋಹ ಯೋಜನೆಯನ್ನು ಸಂಪೂರ್ಣವಾಗಿ ಶಿಕ್ಷಣ ಇಲಾಖೆಯಡಿ ಸರಕಾರ ನಡೆಸುವಂತೆ ಹಾಗೂ ಬಜೆಟ್‌ನಲ್ಲಿ ನೌಕರರಿಗೆ ಹೆಚ್ಚಳ ಮಾಡಿರುವ ಸಾವಿರ ರೂ. ವೇತನವನ್ನು 2023 ಜನವರಿ ತಿಂಗಳಿಂದ ಅನ್ವಯಿಸಿ ಜಾರಿ ಮಾಡು ವಂತಾಗಬೇಕು. ಯೋಜನೆಯನ್ನು ಖಾಯಂ ಮಾಡುವ ತನಕ ಕಾರ್ಮಿಕರೆಂದು ಗುರುತಿಸಿ. ನೌಕರರಿಗೆ ಶಾಲಾ ಸಿಬ್ಬಂದಿಗಳೆಂದು ನೇಮಿಸುವ ಮೂಲಕ ನೇಮಕಾತಿ ಆದೇಶ ನೀಡಬೇಕೆಂದು ಮನವಿಯಲ್ಲಿ ಆಗ್ರಹಿಸಿದ್ದಾರೆ.


ಮನವಿ ಸ್ವಿಕರಿಸಿದ ಶಾಸಕ ಪೊನ್ನಣ್ಣ ಅವರು ಮಾತನಾಡಿ, ಈ ವಿಚಾರ ಹಾಗೂ ನಿಮ್ಮ ಬೇಡಿಕೆಯ ಬಗ್ಗೆ ಮುಖ್ಯ ಮಂತ್ರಿಗಳು ಹಾಗೂ ಸಂಬಂಧಪಟ್ಟ ಸಚಿವರೊಂದಿಗೆ ಮಾತನಾಡಿ ಬಗೆಹರಿಸುವ ಪ್ರಯತ್ನ ನಡೆಸುವುದಾಗಿ ತಿಳಿಸಿದರು.

ಕೂಡಿಗೆಯಲ್ಲಿ ಗಾಳಿ ಮಳೆಗೆ ಕೊಟ್ಟಿಗೆ ಕುಸಿದು ಹಸು ಸಾವು



ಕುಶಾಲನಗರ, ನ.4– ಕಳೆದ ರಾತ್ರಿ ಸುರಿದ ಭಾರಿ ಗಾಳಿ ಮಳೆಗೆ ಮಲ್ಲೇನಹಳ್ಳಿ ಗ್ರಾಮದ ಕೃಷ್ಣೇಗೌಡ ಎಂಬುವವರಿಗೆ ಸೇರಿದ ದನದ ಕೊಟ್ಟಿಗೆ ಗೋಡೆ ಕುಸಿದು ಬಿದ್ದ ಪರಿಣಾಮ ಕೊಟ್ಟಿಗೆಯಲ್ಲಿದ್ದ ಹಸುವೊಂದು ಸಾವನ್ನಪ್ಪಿದ ಘಟನೆ ನಡೆದಿದೆ. ಕೂಡಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸುರಿದ ಮಳೆಯಿಂದಾಗಿ ಈ ಅನಾಹುತ ಸಂಭವಿಸಿದ್ದು,ರೈತ ಕೃಷ್ಣೇಗೌಡ ಅವರಿಗೆ ಅಪಾರ ನಷ್ಟ ಉಂಟಾಗಿದೆ.ಸ್ಥಳಕ್ಕೆ ಗ್ರಾಮ ಪಂಚಾಯಿತಿ ಸದಸ್ಯ ಅರುಣ್ ರಾವ್, ಕಂದಾಯ ಇಲಾಖೆಯ ಪರಿವೀಕ್ಷಕ ಸಂತೋಷ್,ಲೆಕ್ಕಾಧಿಕಾರಿ ಗುರುದರ್ಶನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲೂಕು ಎಸ್ಸಿ,ಎಸ್ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಚನ್ನಯ್ಯ, ಕಾರ್ಯದರ್ಶಿಯಾಗಿ ನಲ್ಲೂರು ಮಹದೇವಸ್ವಾಮಿ ಅವಿರೋಧ ಆಯ್ಕೆ



ಚಾಮರಾಜನಗರ, ನ.4– ಚಾಮರಾಜನಗರ ತಾಲೂಕು ಎಸ್ಸಿ, ಎಸ್ಟಿ ಗುತ್ತಿಗೆದಾರರ ಸಂಘದ ನೂತನ ಅಧ್ಯಕ್ಷರಾಗಿ ಕರಿನಂಜನಪುರ ಚನ್ನಯ್ಯ ಹಾಗೂ ಕಾರ್ಯದರ್ಶಿಯಾಗಿ ನಲ್ಲೂರು ಮಹದೇವಸ್ವಾಮಿ ಇಂದು ಅವಿರೋಧವಾಗಿ ಆಯ್ಕೆಯಾದರು.

ನಗರದ ಸಂಘದ ಕಚೇರಿಯಲ್ಲಿ ಜಿಲ್ಲಾ ಎಸ್ಸಿ,ಎಸ್ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಎಂ.ಎಸ್.ಮಾದಯ್ಯ ಹಾಗೂ ತಾಲೂಕು ಸಂಘದ ಅಧ್ಯಕ್ಷ ಗೌರವಾಧ್ಯಕ್ಷರಾದ ಹರದನಹಳ್ಳಿ ಬಂಗಾರು ಅವರ ನೇತೃತ್ವದಲ್ಲಿ ನಡೆದ ಸಂಘದ ವಾರ್ಷಿಕ ಸಭೆ ಹಾಗೂ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಸಂಘದ ಅಧ್ಯಕ್ಷರಾಗಿ ಕರಿನಂಜನಪುರ ಚನ್ನಯ್ಯ, ಉಪಾಧ್ಯಕ್ಷರಾಗಿ ಗೂಳಿಪುರ ದೊರೆಸ್ವಾಮಿ, ಕಾರ್ಯದರ್ಶಿಯಾಗಿ ನಲ್ಲೂರು ಮಹದೇವಸ್ವಾಮಿ, ಖಜಾಂಚಿಯಾಗಿ ಕೋಡಿಉಗನೆ ಪುರುಷೋತ್ತಮ್, ನಿರ್ದೇಶಕರಾದ ಸಿ.ಕೆ. ರವಿಕುಮಾರ್, ಸಿದ್ದಯ್ಯನಪುರ ಗೋವಿಂದರಾಜು, ಎಚ್.ಎಚ್. ನಾಗರಾಜು, ರಾಮಸಮುದ್ರದ ಎಂ. ನಾಗಬಸವಣ್ಣ, ಸಿದ್ದಯ್ಯನಪುರ ಹನುಮಂತು, ವೆಂಕಟೇಶ್, ಕೆಂಪನಪುರ ಮಣಿಕಂಠ ನಾಯಕ, ಕೆರಹಳ್ಳಿ ಸುಕುಮಾರ್, ನಲ್ಲೂರು ಡಿ.ನಾರಾಯಣಸ್ವಾಮಿ, ಗೂಳಿಪುರ ನಂಜುಂಡಸ್ವಾಮಿ ಅವರು ನೇಮಕ ಮಾಡಲಾಯಿತು.

ಎಸ್ಸಿ,ಎಸ್ಟಿ ಗುತ್ತಿಗೆದಾರರ ಹಿತ ಕಾಯಲು ಬದ್ಧ : ಸರ್ಕಾರ ಯೋಜನೆಗಳನ್ನು ಎಸ್ಸಿ, ಎಸ್ಟಿ ಸಮುದಾಯದ ಗುತ್ತಿಗೆದಾರರಿಗೆ ಕಲ್ಪಿಸುವ ಜೊತೆಗೆ ತಾಲೂಕಿನನಲ್ಲಿ ಸಂಘಟನಾತ್ಮಕವಾಗಿ ಸಂಘವನ್ನು ಮುನ್ನಡೆಸೋಣ. ಸಂಘದ ಎಲ್ಲಾ ಸದಸ್ಯರು ಹಾಗೂ ಪದಾಧಿಕಾರಿಗಳ ವಿಶ್ವಾಸದೊಂದಿಗೆ ಗುತ್ತಿಗೆ ಕಾಮಗಾರಿಗಳು ಎಲ್ಲಾ ಅರ್ಹ ಗುತ್ತಿಗೆದಾರರಿಗೆ ದೊರೆಯುವಂತೆ ಮಾಡುವುದು ಹಾಗೂ ಸಂಘದ ಅಭಿವೃದ್ಧಿ ಜೊತೆಗೆ ಸಮುದಾಯವನ್ನು ಮುನ್ನಡೆಸುವ ಮೂಲಕ ಮಾದರಿ ಸಂಘವನ್ನಾಗಿ ಮಾಡಲು ಎಲ್ಲರು ಸಹಕಾರ ನೀಡಬೇಕು. ಎಸ್ಸಿ, ಎಸ್ಟಿ ತಾಲೂಕು ಸಂಘದ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲ ಪದಾಧಿಕಾರಿಗಳು ಹಾಗು ಸದಸ್ಯರಿಗೆ ನನ್ನ ಅಭಾರಿಯಾಗಿದ್ದೇನೆ ಎಂದು ಚನ್ನಯ್ಯ ತಿಳಿಸಿದರು.

ಸಭೆಯಲ್ಲಿ ಸಂಘ ಸದಸ್ಯರು ಹಾಗೂ ಪದಾಧಿಕಾರಿಗಳು ಇದ್ದರು.

ಮುಖ್ಯ ಪ್ರವರ್ತಕರಾಗಿ ಕೆ.ಎಸ್.ನಾಗರಾಜು ನೇಮಕ

ಯಳಂದೂರು, ಅ.4– ತಾಲೂಕಿನ ಕೆಸ್ತೂರು ಗ್ರಾಮದ ಮಾರಮ್ಮನ ದೇವಾಲಯದ ಮುಂಭಾಗ ನೂತನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲು ಪೂರ್ವಭಾವಿ ಗ್ರಾಮಸಭೆಯನ್ನು ಶುಕ್ರವಾರ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಗ್ರಾಮಪಂಚಾಯತಿ ಅಧ್ಯಕ್ಷೆ ಕೋಮಲ ಅವರು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸಹಕಾರ ಸಂಘದ ನಿಯಮದಂತೆ ಪೂರ್ವಭಾವಿ ಗ್ರಾಮ ಸಭೆಯಲ್ಲಿ ಸಾರ್ವಜನಿಕರು ಸರ್ವಾನುಮತದಿಂದ ಮುಖ್ಯ ಪ್ರವರ್ತಕರನ್ನಾಗಿ ಕೆ.ಎಸ್.ನಾಗರಾಜು ಅವರನ್ನು ಆಯ್ಕೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿ ಲಲಿತಾ, ನೇಗಿಲ ಯೋಗಿ ಆತ್ಮ ಸಹಕಾರ ಸಂಘದ ಪದಾಧಿಕಾರಿಗಳಾದ ಬಸವರಾಜು, ಸಿದ್ದರಾಜು, ಬಿ ನಾಗರಾಜು, ಆರ್. ನಾಗರಾಜು, ನಟರಾಜು, ಶಾಂತಮೂರ್ತಿ, ಎಂ. ನಾಗರಾಜು, ಮಹೇಶ್, ರಾಜು, ವಿಶ್ವಕುಮಾರ್, ನಾರಾಯಣಸ್ವಾಮಿ, ಲಿಂಗರಾಜು, ಶ್ರೀಕಂಠ ಹಾಗೂ ಇತರರು ಹಾಜರಿದ್ದರು.

ನ.7ರಂದು ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕ ಹಣ ಎಣಿಕೆ



ಚಾಮರಾಜನಗರ, ನ.4– ಮಲೆ ಮಹದೇಶ್ವರಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯವನ್ನು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ನ.7ರಂದು ಬೆಳಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ನಡೆಸಲಾಗುವುದು ಎಂದು ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾ.ನಗರ ಲೋಕಸಭಾ ಚುನಾವಣೆ ಟಿಕೆಟ್‌ಗಾಗಿ ಕಸರತ್ತು

ಕಾಂಗ್ರೆಸ್, ಬಿಜೆಪಿಯಲ್ಲಿ ಆಕಾಂಕ್ಷಿಗಳ ದಂಡು, ಯಾರಿಗೆ ಒಲಿಯುವುದು ಅದೃಷ್ಟ



ಸಿದ್ದಲಿಂಗಸ್ವಾಮಿ

ಚಾಮರಾಜನಗರ, ನ.4– ಲೋಕಸಭಾ ಚುನಾವಣೆಗೆ ಇನ್ನು ಕೆಲವೇ ತಿಂಗಳು ಬಾಕಿ ಇರುವಾಗಲೇ ಜಿಲ್ಲೆಯಲ್ಲಿ ಚುನಾವಣಾ ಕಾವು ಸದ್ದಿಲ್ಲದೇ ಶುರುವಾಗಿದ್ದು, ವಿವಿಧ ಪಕ್ಷಗಳ ಆಕಾಂಕ್ಷಿಗಳು ಟಿಕೇಟ್‌ಗಾಗಿ ಲಾಬಿ ಶುರು ಮಾಡಿದ್ದಾರೆ.

ಮೀಸಲು ವಿಧಾನಸಭಾ ಕ್ಷೇತ್ರವಾದ ಚಾಮರಾಜನಗರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ತಿ.ನರಸೀಪುರ, ನಂಜನಗೂಡು, ಎಚ್.ಡಿ.ಕೋಟೆ ಹಾಗೂ ವರುಣ ಕ್ಷೇತ್ರಗಳು ಸೇರಿ ಒಟ್ಟು 8 ಕ್ಷೇತ್ರಗಳು ಒಳಪಟ್ಟಿದ್ದು, ಕ್ಷೇತ್ರದಲ್ಲಿ ಚುನಾವಣಾ ಪೂರ್ವ ಚರ್ಚೆಗಳು ನಡೆಯುತ್ತಿದೆ. ಆಕಾಂಕ್ಷಿಗಳು ವಿವಿಧ ರೀತಿಯಲ್ಲಿ ತಮ್ಮ ಬಯಕೆಯನ್ನು ವರಿಷ್ಠರಿಗೆ ತಿಳಿಸಲು ಕಸರತ್ತು ನಡೆಸುತ್ತಿದ್ದಾರೆ.

ಪಕ್ಷಗಳ ಮುಖಂಡರನ್ನು ಭೇಟಿ ಮಾಡುವುದು, ತಮ್ಮ ಅಭಿಮಾನಿಗಳ ಮೂಲಕ ಹೇಳಿಸುವುದು, ಸಂಸ್ಥೆಗಳ ಮೂಲಕ ಸೇವಾ ಕಾರ್ಯ ಹಮ್ಮಿಕೊಳ್ಳುವುದು, ಮಾಧ್ಯಮಗಳ ಮುಂದೆ ಬಹಿರಂಗವಾಗಿ ಆಕಾಂಕ್ಷಿಗಳು ಎಂದು ಹೇಳಿಕೊಳ್ಳುವುದನ್ನು ಶುರು ಮಾಡಿಕೊಂಡಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಈಗಾಗಲೇ ಬಿಜೆಪಿ–ಜೆಡಿಎಸ್ ಮೈತ್ರಿಯಾಗಿರುವುದರಿಂದ ಜೆಡಿಎಸ್‌ನಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆ ಕಡಿಮೆ ಇದೆ. ಹೀಗಾಗಿ ಬಿಜೆಪಿ ಹಾಗೂ ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳ ದಂಡೇ ನಿರ್ಮಾಣವಾಗಿದೆ. ಈಗಾಗಲೇ ಬಿಜೆಪಿಯಲ್ಲಿ ಕೆಲವರು ಮಾಧ್ಯಮಗಳ ಮೂಲಕ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಬಹಿರಂಗವಾಗಿ ಯಾರೂ ಹೇಳಿಕೆ ನೀಡಿಲ್ಲ. ಆದರೆ, ಪಕ್ಷದಲ್ಲಿ ಆಂತರಿಕವಾಗಿ ಹಲವರ ಹೆಸರುಗಳು ಕೇಳಿ ಬರುತ್ತಿದೆ.

ಕಾಂಗ್ರೆಸ್‌ನಲ್ಲಿ ದೊಡ್ಡ ಪಟ್ಟಿ: ವಿಧಾನಸಭಾ ಚುನಾವಣೆಯಲ್ಲಿ ಗೆದ್ದ ನಂತರ ಕಾಂಗ್ರೆಸ್ ಪಕ್ಷದಲ್ಲಿ ಆಕಾಂಕ್ಷಿಗಳ ಪಟ್ಟಿ ದೊಡ್ಡದಾಗಿದೆ. ಆಕಾಂಕ್ಷಿಗಳಲ್ಲದೆ ಪಕ್ಷದ ಒಳಗಡೆ ಇತರೆ ಕೆಲವು ಮುಖಂಡರ ಹೆಸರೂ ಕೇಳಿಬರುತ್ತಿದೆ.

ಚುನಾವಣೆ ಸಂದರ್ಭದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಬಂದಿದ್ದ ಕೊಳ್ಳೇಗಾಲದ ಜಿ.ಎನ್. ನಂಜುಂಡಸ್ವಾಮಿ, ಈ ಹಿಂದೆ ಸಂಸದರಾಗಿದ್ದ ಕಾಗಲವಾಡಿ ಶಿವಣ್ಣ, ಸಿದ್ದರಾಜು, ಸಚಿವ ಎಚ್.ಸಿ. ಮಹದೇವಪ್ಪ ಅವರ ಮಗ ಸುನಿಲ್‌ಬೋಸ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾದ ಪುಷ್ಪ ಅಮರನಾಥ್, ಮೈಸೂರಿನ ಉದ್ಯಮಿ ಪ್ರಮೋದ್, ಚಾಮರಾಜನಗರದ ಮುಖಂಡ ಎಸ್. ನಂಜುಂಡಸ್ವಾಮಿ ಮಕ್ಕಳಾದ ಡಾ.ರೇಣುಕಾದೇವಿ ಹಾಗೂ ಮಹೇಶ್ ಕುದರ್ ಹಾಗೂ ಡಿ.ಎನ್. ನಟರಾಜು ಅವರು ಆಕಾಂಕ್ಷಿಗಳಾಗಿದ್ದಾರೆ.

ಇವರಲ್ಲದೆ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹಾಗೂ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ ಅವರ ಹೆಸರೂ ಕೇಳಿ ಬರುತ್ತಿದೆ.

ಬಿಜೆಪಿಯಲ್ಲಿಯೂ ಆಕಾಂಕ್ಷಿಗಳ ದಂಡು: ಹಾಲಿ ಸಂಸದರಾದ ಬಿಜೆಪಿಯ ಶ್ರೀನಿವಾಸ ಪ್ರಸಾದ್ ಅವರು ಮುಂದಿನ ಚುನಾವಣೆಯಲ್ಲಿ ತಾವು ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿರುವುದರಿಂದ ಕಮಲ ಪಾಳಯದಲ್ಲಿಯೂ ಆಕಾಂಕ್ಷಿಗಳ ಸಂಖ್ಯೆ ಹೆಚ್ಚುತ್ತಿದೆ.

ನಿವೃತ್ತ ಐಎಎಸ್ ಅಧಿಕಾರಿ ಕೆ. ಶಿವರಾಂ, ಹಿರಿಯ ನಾಯಕ ಕೋಟೆ ಎಂ. ಶಿವಣ್ಣ, ಕೊಳ್ಳೇಗಾಲದ ಮಾಜಿ ಶಾಸಕ ಎನ್. ಮಹೇಶ್, ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದಿದ್ದ ಎಸ್. ಬಾಲರಾಜ್, ತಿ.ನರಸೀಪುರದ ಪುರಸಭಾ ಸದಸ್ಯ ಅರ್ಜುನ್ ರಮೇಶ್, ಸಂಸದ ಶ್ರೀನಿವಾಸ ಪ್ರಸಾದ್ ಅಳಿಯ, ವೃತ್ತಿಯಲ್ಲಿ ವೈದ್ಯರಾಗಿರುವ ಎನ್.ಎಸ್. ಮೋಹನ್, ಜಿಪಂ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ನಿವೃತ್ತ ಅಧಿಕಾರಿ ರಾಜು ಹಾಗೂ ದಲಿತ ಮುಖಂಡ ವೆಂಕಟರಮಣಸ್ವಾಮಿ ಪಾಪು ಅವರ ಹೆಸರುಗಳು ಪ್ರಮುಖವಾಗಿ ಕೇಳಿ ಬರುತ್ತಿವೆ.

ಕೆ. ಶಿವರಾಂ ಅವರು ಈ ಹಿಂದಿನ ಚುನಾವಣೆಗಳಲ್ಲೂ ಟಿಕೆಟ್ ಆಕಾಂಕ್ಷಿಯಾಗಿದ್ದರು. ಈಗ ಮತ್ತೆ ಜಿಲ್ಲೆಯಲ್ಲಿ ಬಿಜೆಪಿ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕೊಳ್ಳೇಗಾಲದ ಮಾಜಿ ಶಾಸಕ ಎನ್. ಮಹೇಶ್ ಚುನಾವಣೆ ಸ್ಪರ್ಧಿಸುವ ಬಗ್ಗೆ ಬಹಿರಂಗವಾಗಿ ಆಸಕ್ತಿ ತೋರಿಸಿಲ್ಲ. ಆದರೆ, ಅವರ ಹೆಸರುಗಳು ಸೇರಿದಂತೆ ಬಿಜೆಪಿಯಲ್ಲಿ ಪ್ರಮುಖ ಮುಖಂಡರ ಹೆಸರುಗಳು ಪಕ್ಷದಲ್ಲಿ ಚರ್ಚೆಯಾಗುತ್ತಿದೆ.

ಮಲೆ ಮಹದೇಶ್ವರಬೆಟ್ಟ ಪಾದಯಾತ್ರೆಗೆ ಚಾಲನೆ



ಹನೂರು, ನ.4– ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಹಮ್ಮಿಕೊಂಡಿರುವ ಪಾದಯಾತ್ರೆ ಯಶಸ್ವಿಯಾಗಲಿ ಎಂದು ಸದ್ಭಾವ ಸೇವಾ ಸಮಿತಿಯ ಅಧ್ಯಕ್ಷ ಗಂಗಾಧರ್ ತಿಳಿಸಿದರು.

ಪಟ್ಟಣದಲ್ಲಿ ಸದ್ಭಾವ ಸೇವಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 19ನೇ ವರ್ಷದ ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮೊದಲನೇ ಬಾರಿಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡ ಸಂದರ್ಭದಲ್ಲಿ ಕೇವಲ ಬೆರಳಕೆಯಷ್ಟು ಭಕ್ತರು ಮಾತ್ರ ಮಲೆ ಮಾದೇಶ್ವರ ಬೆಟ್ಟಕ್ಕೆ ಆಗಮಿಸಿದ್ದರು. ತದನಂತರ ಪ್ರತಿ ವರ್ಷ ಭಕ್ತಾದಿಗಳು ಹೆಚ್ಚಾಗಿ ಇಂದು 3000ಕ್ಕೂ ಹೆಚ್ಚು ಭಕ್ತಾದಿಗಳು ಪಾದಯಾತ್ರೆ ಕೈಗೊಂಡಿದ್ದಾರೆ. ಪ್ರಾರಂಭದಲ್ಲಿ ಪಾದಯಾತ್ರೆ ತೆರಳುವ ಭಕ್ತರುಗಳ ಸಹಕಾರದಿಂದಲೇ ಅನ್ನದಾನ ನಡೆಸುತ್ತಿದ್ದೆವು, ಆದರೆ ಕಳೆದ ಐದು ವರ್ಷಗಳಿಂದ ಮಲೆ ಮಾದೇಶ್ವರ ಬೆಟ್ಟಕ್ಕೆ ತೆರಳುವ ಪಾದಯಾತ್ರಿಗಳಿಗೆ ಹನೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಭಕ್ತರುಗಳು ಆಹಾರ ಪದಾರ್ಥಗಳು, ಬಾಳೆಹಣ್ಣು, ಅಕ್ಕಿ ತರಕಾರಿ ದವಸ ಧಾನ್ಯಗಳನ್ನು ಉಚಿತವಾಗಿ ಕೊಡುತ್ತಿದ್ದಾರೆ. ಇದರಿಂದ ಪಾದಯಾತ್ರೆ ಕೈಗೊಳ್ಳುವ ಪ್ರತಿ ಭಕ್ತರಿಗೆ ಉಚಿತವಾಗಿ ತಿಂಡಿ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಭಕ್ತಾದಿಗಳು ನೀಡುವ ಕಾಣಿಕೆಗಳನ್ನು ಪೋಲು ಮಾಡಬಾರದೆಂಬ ದೃಷ್ಟಿಯಿಂದ ಸದ್ಭಾವ ಸೇವಾ ಸಮಿತಿ ರಚನೆ ಮಾಡಿ ಉಳಿತಾಯ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸದ್ಭಾವ ಸೇವಾ ಸಮಿತಿ ಉಪಾಧ್ಯಕ್ಷ ಶಂಕರ್ ಕಾರ್ಯದರ್ಶಿ ಶಶಿ ಖಜಾಂಚಿ ನಾರಾಯಣ, ಗುತ್ತಿಗೆದಾರ ನಿಂಗಣ್ಣ, ಕೃಷ್ಣ ಅನಿಲ್, ಸೇರಿದಂತೆ ಇನ್ನಿತರರು ಹಾಜರಿದ್ದರು.

ಇಬ್ಬರು ಸರಗಳ್ಳರ ಬಂಧನ

ಕೊಳ್ಳೇಗಾಲ, ನ.4– ಸರಗಳ್ಳತನ ಮಾಡಿದ್ದ ಇಬ್ಬರು ಕಳ್ಳರನ್ನು ಪಟ್ಟಣ ಪೊಲೀಸರು ಬಂಧಿಸಿದ್ದಾರೆ.

ಕುಶಾಲನಗರದ ನಾಗರಾಜು ಹಾಗೂ ಹುಣಸೂರು ತಾಲೂಕಿನ ಮಹದೇವಪುರದ ನಿವಾಸಿ ತುಳಸಿ ಬಂಧಿತರು. ಆರೋಪಿಗಳಿಂದ 8.5 ಲಕ್ಷ ರೂ. ಬೆಲೆ ಬಾಳುವ 170 ಗ್ರಾಂ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಗಳು ಬಸ್ ಸ್ಟ್ಯಾಂಡ್ ಬಳಿ ತಿರುಗಾಡುವಾಗ ಅನುಮಾನಗೊಂಡು ಹಿಡಿದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಯಳಂದೂರಲ್ಲಿ ಗ್ರಾಮಾಂತರ ಮತ್ತು ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೂರು ಪ್ರಕರಣ ಸೇರಿದಂತೆ ಒಟ್ಟು ಐದು ಪ್ರಕರಣಗಳಲ್ಲಿ ಕಳ್ಳತನ ಮಾಡಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾರೆ. ಬಂಧಿತ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ರಾಜೇಶ್ ನಿಧನ



ಚಾಮರಾಜನಗರ, ನ.4– ತಾಲೂಕಿನ ಲಿಂಗರಾಜಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾಗಿದ್ದ ಚಾಮರಾಜನಗರದ ರಾಮಸಮುದ್ರ ನಿವಾಸಿ ರಾಜೇಶ್ (53) ಅವರು ಶನಿವಾರ ಸಂಜೆ ನಿಧನರಾದರು. ಅನಾರೋಗ್ಯದಿಂದ ಬಳಲುತ್ತಿದ್ದ ಇವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು.

ಮೃತರು ತಾಯಿ, ಸಹೋದರರು, ಸಹೋದರಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಭಾನುವಾರ) ರಾಮಸಮುದ್ರದಲ್ಲಿ ನೆರವೇರಲಿದೆ.

ಮೈಸೂರು ಮಿತ್ರ

ಪಾಕಿಸ್ತಾನ ವಾಯುನೆಲೆ ಮೇಲೆ ಉಗ್ರರ ದಾಳಿ

9 ಭಯೋತ್ಪಾದಕರ ಹತ್ಯೆ

ಇಸ್ಲಾಮಾಬಾದ್, ನ.4– ಪಾಕಿಸ್ತಾನದ ಪಂಜಾಬ್‌ನ ಮಿಯಾನ್‌ವಾಲಿಯಲ್ಲಿರುವ ವಾಯು ನೆಲೆ ಮೇಲೆ ಶನಿವಾರ ಉಗ್ರರು ದಾಳಿ ನಡೆಸಿದ್ದಾರೆ. ಹಲವು ಆತ್ಮಾಹುತಿ ಬಾಂಬ್ ದಾಳಿ ಕೋರರು ವಾಯು ನೆಲೆಗೆ ನುಗ್ಗಿದ್ದಾರೆ. ಇದಕ್ಕೆ ಪ್ರತಿಯಾಗಿ ನಡೆಸಿದ ಗುಂಡಿನ ದಾಳಿಯಲ್ಲಿ 9 ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನ ವಾಯು ಪಡೆ (ಪಿಎಎಫ್) ತಿಳಿಸಿದೆ. ಭಾರಿ ಶಸ್ತ್ರಸಜ್ಜಿತರಾದ 5–6 ಮಂದಿ ಜನರ ಗುಂಪು ಶನಿವಾರ ಮುಂಜಾನೆ ತೀವ್ರ ಸ್ವರೂಪದ ದಾಳಿ ಆರಂಭಿಸಿದೆ. ಇದರಿಂದ ತೀವ್ರ ಗುಂಡಿನ ಚಕಮಕಿ ನಡೆದಿದೆ. ಈ ಘಟನೆಯನ್ನು ಖಚಿತಪಡಿಸಿರುವ ಪಿಎಎಫ್, ಉಗ್ರರು ವಾಯು ನೆಲೆ ಪ್ರವೇಶಿಸುವುದಕ್ಕೂ ಮುನ್ನವೇ ಅವರ ಪ್ರಯತ್ನವನ್ನು ವಿಫಲಗೊಳಿ ಸಲಾಗಿದೆ ಎಂದು ಹೇಳಿದೆ. ಇಂದು ಮುಂಜಾನೆ ಪಾಕಿಸ್ತಾನ ವಾಯು ಪಡೆಯ ಮಿಯಾನ್ ವಾಲಿ ತರಬೇತಿ ವಾಯು ನೆಲೆಯು ವಿಫಲ ಭಯೋತ್ಪಾದನಾ ದಾಳಿಗೆ ಒಳಗಾಗಿದೆ. ಇದಕ್ಕೆ ಪಡೆಗಳು ಪರಿಣಾಮಕಾರಿಯಾಗಿ ಪ್ರತಿಕ್ರಿಯೆ ನೀಡಿದೆ. ಈ ಪ್ರಯತ್ನವನ್ನು ವಿಫಲಗೊಳಿಸಿದ ಸಿಬ್ಬಂದಿ, ಆಸ್ತಿಯ ಸುರಕ್ಷೆ ಮತ್ತು ಭದ್ರತೆ ಯನ್ನು ಖಾತರಿಗೊಳಿಸಿವೆ ಎಂದು ಪಿಎಎಫ್ ತಿಳಿಸಿದೆ. ಅಸಾಧಾರಣ ಧೈರ್ಯ ಹಾಗೂ ಸಕಾಲಿಕ ಪ್ರತಿಕ್ರಿಯೆ ಪ್ರದರ್ಶಿಸುವ ಮೂಲಕ ಮೂವರು ಉಗ್ರರನ್ನು ವಾಯು ನೆಲೆ ಪ್ರವೇಶಿಸುವುದಕ್ಕೂ ಮುನ್ನವೇ ಹೊಡೆದುರುಳಿಸಲಾಗಿದೆ. ಸೇನಾ ಪಡೆಗಳ ಸಕಾಲಿಕ ಮತ್ತು ಪರಿಣಾಮಕಾರಿ ಪ್ರತಿಕ್ರಿಯೆ ಕಾರಣದಿಂದ ಉಳಿದ 6 ಮಂದಿ ಉಗ್ರರನ್ನು ಕೂಡ ಹತ್ಯೆ ಮಾಡಲಾಗಿದೆ ಎಂದು ಹೇಳಿದೆ.

ಮೈಸೂರು ಡಿಜಿಟಲ್ ಆರ್ಥಿಕತೆಯ ನಗರವಾಗಿ ಹೊರ ಹೊಮ್ಮುತ್ತಿದೆ

●ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್ ಮೆಚ್ಚುಗೆ ●ಕೌಶಲ್ಯಾಭಿವೃದ್ಧಿ ತರಬೇತಿಯಲ್ಲಿ ಆಯ್ಕೆ ಮುಖ್ಯ●ಮೈಸೂರಿಗೆ ಇತ್ತೀಚೆಗೆ 45 ಹೊಸ ಕಂಪನಿಗಳು ಬಂದಿವೆ ●ಹೊಸ ಪೀಳಿಗೆಯ ಆಲೋಚನೆ ಉದ್ಯಮಕ್ಕೆ ಉತ್ತೇಜನ



ಮೈಸೂರು, ನ.4(ಬಿಎಲ್‌ಯು)– ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರು ಈಗ ಡಿಜಿಟಲ್ ಆರ್ಥಿಕತೆಯ ನಗರವಾಗಿ ಹೊರ ಹೊಮ್ಮುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎನ್.ಕೆ.ಲೋಕನಾಥ್ ಹೇಳಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಇಂದು ನಡೆದ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಮಾವೇಶದಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿರುವ ಎಕ್ಸೆಲ್ ಸಾಫ್ಟ್ ಸೇರಿದಂತೆ ಹಲವು ಕಂಪನಿಗಳು ಇದಕ್ಕೆ ಭದ್ರ ಬುನಾದಿ ಹಾಕಿದೆ ಎಂದು ಹೇಳಿದರು.

ಹತ್ತಾರು ರೀತಿಯ ಕೌಶಲ್ಯಾಭಿವೃದ್ಧಿ ತರಬೇತಿಗಳಿರುತ್ತವೆ. ಆದರೆ ವಿದ್ಯಾರ್ಥಿಗಳು ಇದರಲ್ಲೇ ತಮಗೆ ಆಸಕ್ತಿ ಇರುವ ಎರಡು ಮೂರು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಪರಿಶ್ರಮ ವಿನಿಯೋಗಿಸಬೇಕು. ಅದು ಬಿಟ್ಟು ಹತ್ತಾರು ರೀತಿಯ ಕೌಶಲ್ಯಾಭಿವೃದ್ಧಿ ತರಬೇತಿ ಬಗ್ಗೆ ಗಮನ ಹರಿಸಿದರೆ ಗೊಂದಲ ಉಂಟಾಗುತ್ತದೆ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿ ಕೂಡ ಇದೇ ಮಾರ್ಗದರ್ಶನ ಮಾಡುತ್ತದೆ. ಒಂದೆರಡು ಕೌಶಲ್ಯಾಭಿವೃದ್ಧಿ ತರಬೇತಿ ಆಯ್ಕೆ ಮಾಡಿಕೊಂಡು ಅದರಲ್ಲಿ ಯಶಸ್ಸು ಗಳಿಸಿದರೆ ಉದ್ಯೋಗಾವಕಾಶ ದೊರೆಯುತ್ತದೆ ಎಂದು ಡಾ.ಲೋಕನಾಥ್ ಸಲಹೆ ನೀಡಿದರು.

ಯಾವುದೇ ರೀತಿಯ ಶಿಕ್ಷಣ ಪಡೆದರೂ ಕೌಶಲ್ಯ ಎಂಬುದು ಅತೀ ಮುಖ್ಯ, ಕೌಶಲ್ಯ ಹೊಂದಿದ ವ್ಯಕ್ತಿ ಗುರಿ ಮುಟ್ಟಲು ಸಾಧ್ಯ. ಇತ್ತೀಚೆಗೆ ಕೌಶಲ್ಯಾಭಿವೃದ್ಧಿ ಪಡೆಯುವ ಸಂಖ್ಯೆ ಹೆಚ್ಚಾಗುತ್ತಿದೆ. ಕಳೆದ ವರ್ಷ ಶೇಕಡ 42 ರಷ್ಟಿದ್ದ ಕೌಶಲ್ಯಾಭಿವೃದ್ಧಿ ಈ ವರ್ಷ ಶೇಕಡ 52 ರಷ್ಟಾಗಿದೆ. ಇನ್ನು ಮಹಿಳೆಯರು ಶೇಕಡ 56 ರಷ್ಟು ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ಮುಂದಿದ್ದಾರೆ ಎಂದು ಡಾ.ಲೋಕನಾಥ್ ಅಂಕಿ ಅಂಶಗಳ ವಿವರ ನೀಡಿದರು.

ಈ ವೇಳೆ ಮಾತನಾಡಿದ ಎಎನ್‌ಆರ್‌ಯುಡ್ ಐಐಸಿ ಶಿಕ್ಷಣ ಸಮಿತಿ ಅಧ್ಯಕ್ಷ ಡಾ.ಸಂದೀಪ್ ಸಂಚೆಟ್ಟಿ, ಶಿಕ್ಷಣದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟ ತಲುಪಲು ಈಗ ಜಾರಿಯಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ಹಲವು ಅಂಶಗಳನ್ನು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳ ಸಹಭಾಗಿತ್ವದಲ್ಲಿ ಭಾರತ ಇಂತಹ ಮಂಥನ ಕಾರ್ಯಕ್ರಮ ನಡೆಸುತ್ತಿದೆ ಎಂದು ಹೇಳಿದರು.

ತರುವಾಯ ಮಾತನಾಡಿದ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸಂಜೀವ್ ಗುಪ್ತ, ವಿಶ್ವದಲ್ಲಿ ತಂತ್ರಜ್ಞಾನ ಸೂಪರ್ ಪವರ್ ಆಗಿ ಕೆಲಸ ಮಾಡುತ್ತಿದೆ. ತಂತ್ರಜ್ಞಾನ ಅಭಿವೃದ್ಧಿ ಪೈಪೋಟಿಯಲ್ಲಿ ಭಾರತ ಜಾಗತಿಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಮತ್ತಷ್ಟು ಅಭಿವೃದ್ಧಿ ಹೊಂದಿದರೆ ಭಾರತ ಇನ್ನು 15–20 ವರ್ಷಗಳಲ್ಲಿ ಜಾಗತಿಕ ಅಗ್ರ ಆರ್ಥಿಕ ವ್ಯವಸ್ಥೆಯಾಗಿ ಹೊರ ಹೊಮ್ಮಲಿದೆ ಎಂದು ಅಭಿಪ್ರಾಯಪಟ್ಟರು.

ಆರೋಗ್ಯ ಹಾಗೂ ಶಿಕ್ಷಣ ಆರ್ಥಿಕತೆಯ ಎರಡು ಮುಖಗಳಾಗಿದ್ದಂತೆ. ಇತ್ತೀಚೆಗೆ ಸಣ್ಣ, ಅತಿ ಸಣ್ಣ ಹಾಗೂ ಸೂಕ್ಷ್ಮ ಕೈಗಾರಿಕೆಗಳಲ್ಲಿ ತಂತ್ರಜ್ಞಾನ ಹಾಸು ಹೊಕ್ಕಾಗಿ ಬೆಳವಣಿಗೆ ಸಾಧಿಸುತ್ತಿವೆ. ಇಡೀ ದೇಶದ ಸ್ಟಾರ್ಟಪ್‌ಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಮೈಸೂರು ಕೂಡ ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಬೆಳವಣಿಗೆ ಸಾಧಿಸುತ್ತಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಮೈಸೂರಿಗೆ 45 ಹೊಸ ಕಂಪನಿಗಳು ಬಂದಿದೆ ಎಂದು ಹೇಳಿದರು.

ಮೈಸೂರು, ಹುಬ್ಬಳ್ಳಿ, ಬೆಳಗಾವಿ ನಗರಗಳ ಆರ್ಥಿಕತೆ ಹಾಗೂ ಉದ್ಯಮಗಳ ಬೆಳವಣಿಗೆಗೆ ಸರ್ಕಾರ ಹೆಚ್ಚು ಆದ್ಯತೆ ನೀಡುತ್ತಿದೆ. ಇದಕ್ಕಾಗಿ ಅಗತ್ಯ ಹಾಗೂ ಪೂರಕ ಸೌಲಭ್ಯ ಕೂಡ ಒದಗಿಸುತ್ತಿದೆ. ಪ್ರಮುಖವಾಗಿ ಹೊಸ ಪೀಳಿಗೆಯ ಜನರು ಹೊಸ ಆಲೋಚನೆಯೊಂದಿಗೆ ಆರಂಭಿಸುವ ಉದ್ಯಮಗಳ ಸ್ಥಾಪನೆಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ತಿಳಿಸಿದರು.

ಹೊಸದಾಗಿ ಆರಂಭವಾಗುವ ಉದ್ಯಮಗಳ ಬೆಳವಣಿಗೆಗೆ ಮೈಸೂರು ವಿಶ್ವವಿದ್ಯಾನಿಲಯ ಸೇರಿದಂತೆ ಹಲವು ಸಂಸ್ಥೆಗಳು ಒತ್ತಾಸೆಯಾಗಿ ನಿಲ್ಲಬೇಕು ಎಂದು ಡಾ.ಸಂದೀಪ್ ಗುಪ್ತ ಮನವಿ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯ, ಎಎನ್‌ಆರ್‌ಯುಡ್ ಹಾಗೂ ಎಕ್ಸೆಲ್ ಸಾಫ್ಟ್ ಆಯೋಜಿಸಿದ್ದ ಸಮಾವೇಶದಲ್ಲಿ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಹಾಗೂ ಭಾರತದ ಪ್ರತಿನಿಧಿಗಳು ಭಾಗವಹಿಸಿದ್ದರು.

ಆಸ್ಟ್ರೇಲಿಯನ್ ಟ್ರೇಡ್ ಅಂಡ್ ಇನ್ವೆಸ್ಟ್‌ಮೆಂಟ್ ಕಮಿಷನ್‌ನ ದಕ್ಷಿಣ ಏಷಿಯಾ ಶಿಕ್ಷಣದ ನಿರ್ದೇಶಕ ಸಂತೋಷ್, ಎಕ್ಸೆಲ್ ಸಾಫ್ಟ್ ಮುಖ್ಯಸ್ಥ ಪ್ರಶಾಂತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಶ್ವದಲ್ಲಿ ಬಹಳ ಹಿಂದಿನಿಂದ ಇಲ್ಲಿ ತನಕ ಪೂರ್ವ ಪಶ್ಚಿಮಾಭಿಮುಖವಾಗಿ ವ್ಯಾಪಾರ ವಿನಿಮಯ, ವಿಚಾರ ವಿನಿಮಯ ನಡೆದಿದೆ. ಇಂದಿನ ಆಧುನಿಕ ತಂತ್ರಜ್ಞಾನದಲ್ಲಿ ವಿಶ್ವ ಒಂದು ಸಣ್ಣ ಹಳ್ಳಿಯಂತಾಗಿದೆ. ಯಾರು ಎಲ್ಲಿ ಕುಳಿತಾದರೂ ಕೆಲಸ ನಿರ್ವಹಿಸಬಹುದು. ಈ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಭಾರತ ಸೇರಿದಂತೆ ಹಲವು ದೇಶಗಳ ಜನರು ಸೇರಿ ಕೌಶಲ್ಯಾಭಿವೃದ್ಧಿ ಬಗ್ಗೆ ವಿಚಾರ ಮಂಥನ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ.

-ಡಾ.ಎನ್.ಕೆ.ಲೋಕನಾಥ್,
ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ

ಒಂದನೇ ಪುಟದಿಂದ

ಹಾದಿ ಬೀದಿಯಲ್ಲಿ ಮಾತಾಡಬೇಡಿ...!

ವ್ಯತಿರಿಕ್ತ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ವರಿಷ್ಠರು ನೀಡುವ ಎಚ್ಚರಿಕೆಗಳನ್ನು ನಿರ್ಲಕ್ಷ್ಯ ಮಾಡುತ್ತಿದ್ದೀರಿ. ಇದು ನಿಮಗೆ ಮುಂದೆ ಮುಳುವಾಗಬಹುದು ಎಂದ ಮುಖ್ಯಮಂತ್ರಿಗಳು, ಮಾಧ್ಯಮದವರು ನನ್ನ ಹೇಳಿಕೆಯನ್ನೇ ತಿರುಚಿದ್ದಾರೆ. ಅವರ ಅನುಕೂಲಕ್ಕೆ ತಕ್ಕಂತೆ ಸುದ್ದಿ ಮಾಡಿದ್ದಾರೆ. ನೀವು ಬಹಿರಂಗವಾಗಿ ಮಾತನಾಡುವಾಗ ಅದರಿಂದಾಗುವ ಪರಿಣಾಮಗಳ ಬಗ್ಗೆ ವಿವೇಚಿಸಿ ಹೇಳಿಕೆ ನೀಡಿ ಎಂದಿದ್ದಾರೆ.

28ರಲ್ಲಿ 20 ಕ್ಷೇತ್ರಗಳನ್ನು ಗೆಲ್ಲಲೇ ಬೇಕು ಎಂಬ ಗುರಿಯನ್ನು ವರಿಷ್ಠರು ನೀಡಿದ್ದಾರೆ. ನಿಮಗೆ ವಹಿಸಿದ್ದ ಜವಾಬ್ದಾರಿ ಇದುವರೆಗೂ ಮಾಡಿಲ್ಲ. ಕೆಲವರಂತೂ ಕ್ಷೇತ್ರ ಮತ್ತು ರಾಜಧಾನಿ ಬಿಟ್ಟು ಉಸ್ತುವಾರಿ ಜಿಲ್ಲೆಯಲ್ಲೂ ಪ್ರವಾಸ ಮಾಡುತ್ತಿಲ್ಲ. ನಿಮಗೆ ವಹಿಸಿರುವ ಮತ್ತು ನಿಮ್ಮ ಜಿಲ್ಲಾ ಉಸ್ತುವಾರಿ ವ್ಯಾಪ್ತಿಯ ಲೋಕಸಭಾ ಕ್ಷೇತ್ರಕ್ಕೆ ಮೂವರು ಸಮರ್ಥ ಅಭ್ಯರ್ಥಿಗಳ ಹೆಸರನ್ನು ಪಟ್ಟಿ ಮಾಡಿಕೊಡಿ. ತಕ್ಷಣದಿಂದಲೇ ಈ ಕಾರ್ಯ ಆಗಬೇಕು. ಹಿಂದೆ ನಿಮಗೆ ನೀಡಿದ್ದ ಗಡುವು ಈಗಾಗಲೇ ಮುಗಿದಿದೆ.

ಅಭ್ಯರ್ಥಿ ಆಯ್ಕೆ ಮಾಡಿ ಕಣಕ್ಕಿಳಿಸಿದ ಮೇಲೆ ಅವರನ್ನು ಸಂಸತ್ತಿಗೆ ಕಳುಹಿಸುವ ಜವಾಬ್ದಾರಿ ನಿಮ್ಮದು. ಚುನಾವಣೆಯ ಖರ್ಚು-ವೆಚ್ಚವೂ ನಿಮ್ಮದೆ. ನಮ್ಮಿಂದ ಏನನ್ನೂ ನಿರೀಕ್ಷಿಸಬೇಡಿ. ಒಂದು ವೇಳೆ ಚುನಾವಣೆಯಲ್ಲಿ ವ್ಯತ್ಯಾಸವಾದರೆ, ನಿಮ್ಮ ಅಧಿಕಾರಕ್ಕೆ ಕುತ್ತು ಬರಬಹುದು. ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪಿವೆಯೇ ಇಲ್ಲವೇ ಎಂಬುದನ್ನು ನೋಡಿಲ್ಲ. ಆ ಬಗ್ಗೆ ಸೂಕ್ತ ಪ್ರಚಾರವಾಗುತ್ತಿಲ್ಲ. ಮುಂದಿನ ಚುನಾವಣೆಗೆ ಪಂಚಗ್ಯಾರಂಟಿಗಳೇ ಅಸ್ತ್ರ. ಆದರೆ, ನೀವು ಸಮರ್ಥವಾಗಿ ಬಳಕೆ ಮಾಡಿಕೊಳ್ಳುತ್ತಿಲ್ಲ. ಬಿಜೆಪಿಯವರು ಬರ ಅಧ್ಯಯನ ಪ್ರವಾಸ ಹೊರಟಿದ್ದಾರೆ. ನೀವು ಮಾಡಿದ್ದೀರಾ? ಸರ್ಕಾರಕ್ಕೆ ವರದಿ ಕೊಟ್ಟಿದ್ದೀರಾ? ಜನರ ಅಹವಾಲು ಸ್ವೀಕಾರ ಮಾಡಿದ್ದೀರಾ? ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಮುಂದಿನ 15ದಿನದಲ್ಲಿ ಇಡೀ ಜಿಲ್ಲೆ ಪ್ರವಾಸ ಮಾಡಿ ತಾಲೂಕು ಕೇಂದ್ರಗಳಲ್ಲಿ ಸಭೆ ನಡೆಸಿ ಬರದ ಪರಿಸ್ಥಿತಿ ಮತ್ತು ಜಿಲ್ಲಾಡಳಿತ ಪರಿಹಾರ ಕಾಮಗಾರಿ ಯಾವ ರೀತಿ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಬೇಕು. ಕೇಂದ್ರ ಸ್ಥಾನದಲ್ಲಿ ಸುತ್ತುವುದನ್ನು ಬಿಡಿ. ಜನರ ಬಳಿಗೆ ಹೋಗಿ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಮನೆ ಮನೆಗೆ ಮುಟ್ಟಿಸಿ, ಜನಮಾನಸಕ್ಕೆ ತಲುಪಿಸಿ ಎಂಬ ಕಿವಿಮಾತು ಹೇಳಿದ್ದಾರೆ.

ಯೋಜನೆಯ ಅನುಷ್ಠಾನದಲ್ಲಿ ಕೆಲವೆಡೆ ಸಮಸ್ಯೆಗಳಿವೆ. ಆ ಸಮಸ್ಯೆಗಳನ್ನು ನೀವು ಪರಿಶೀಲಿಸಿ ಪರಿಹರಿಸಬೇಕು. ಅಧಿಕಾರಿಗಳಿಗೆ ಅದರ ಅವಶ್ಯಕತೆ ಇರುವುದಿಲ್ಲ. ಆದರೆ, ನಾವು ತಳಮಟ್ಟದವರೆಗೂ ಸ್ಪಂದಿಸಬೇಕಾಗಿದೆ.

ಅವರ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ

ಅದರಲ್ಲಿ ಕೆಲವರು ಮಾಡಿದ್ದಾರೆ. ಉಳಿದವರ ಕೆಲಸ ಪ್ರಗತಿಯಲ್ಲಿದೆ ಎಂದರು. ಬರದ ಬಗ್ಗೆ ನಾವು ಈಗಾಗಲೇ ಸರ್ಕಾರಕ್ಕೆ ವರದಿ ನೀಡಿದ್ದೇವೆ. ಬಿಜೆಪಿಯವರು ರಾಜಕೀಯವಾಗಿ ಈಗ ಜನರ ಬಳಿಗೆ ಹೋಗುತ್ತಿದ್ದಾರೆ. ಅದರ ಬದಲು ದೆಹಲಿಗೆ ತೆರಳಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಬರ ಪರಿಹಾರ ಕೊಡಿಸಲಿ ಎಂದು ಹೇಳಿದರು. ಇನ್ನು ಪಕ್ಷ ಹಾಗೂ ಸರ್ಕಾರದ ಆಂತರಿಕ ವಿಚಾರವಾಗಿ ಅನಗತ್ಯ ಹೇಳಿಕೆ ನೀಡದಂತೆ ಮುಖ್ಯಮಂತ್ರಿಗಳು ನೇರವಾಗಿ ತಿಳಿಸಿದ್ದಾರೆ. ನಾನು ಸೇರಿದಂತೆ ಯಾರೊಬ್ಬರೂ ಈ ವಿಚಾರವಾಗಿ ಮಾತನಾಡುವುದು ಬೇಡ.

ಮಾಧ್ಯಮಗಳು ಪ್ರಶ್ನೆ ಕೇಳುತ್ತಾರೆ, ಆದರೂ ಪ್ರತಿಕ್ರಿಯೆ ನೀಡಬೇಡಿ. ಮಾಧ್ಯಮಗಳ ರಾಜಕೀಯ ಬಲೆಗೆ ಬೀಳಬೇಡಿ ಎಂದು ಸೂಚಿಸಿದ್ದೇವೆ. ರಾಜ್ಯದ ಜನ ಐದು ವರ್ಷ ಅಧಿಕಾರ ಮಾಡಲು ಆಶೀರ್ವಾದ ಮಾಡಿದ್ದಾರೆ. ಹೀಗಾಗಿ ಈ ಅವಧಿಯಲ್ಲಿ ಅಧಿಕಾರ ಹಂಚಿಕೆ ಬಗ್ಗೆ ಚರ್ಚೆ ಅನಗತ್ಯ. ಸರ್ಕಾರದ ಗ್ಯಾರಂಟಿ ಯೋಜನೆಗಳ ಜಾರಿ ಹಾಗೂ ಅವುಗಳನ್ನು ಜನರಿಗೆ ತಲುಪಿಸುವುದರ ಬಗ್ಗೆ ಪರಿಶೀಲನಾ ಸಭೆ ಮಾಡುವಂತೆ ಸೂಚಿಸಲಾಗಿದೆ. ಇಂದು ಕೇವಲ 15 ಸಚಿವರ ಜತೆ ಚರ್ಚೆ ಮಾಡಲಾಗಿದ್ದು, ಉಳಿದವರ ಜತೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಲೋಕಸಭೆ ಚುನಾವಣೆ, ಗ್ಯಾರಂಟಿ ಯೋಜನೆ ಜಾರಿ ನಮ್ಮ ಪ್ರಮುಖ ಆದ್ಯತೆ ಎಂದು ಹೇಳಿದರು.

ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಆಯಾ ಸಚಿವರಿಗೆ ಆ ಜಿಲ್ಲೆ ಜವಾಬ್ದಾರಿ ನೀಡಿಲ್ಲ. ಭೈರತಿ ಸುರೇಶ್ ಅವರು ಕೋಲಾರ ಉಸ್ತುವಾರಿಗಳು, ಆದರೆ ಅಭ್ಯರ್ಥಿ ಆಯ್ಕೆ ಸಂಬಂಧ ಅವರಿಗೆ ಮಂಡ್ಯ ಹಾಗೂ ಮೈಸೂರು ಜಿಲ್ಲೆ ನೀಡಲಾಗಿದೆ. ಹಾಸನ ಉಸ್ತುವಾರಿ ರಾಜಣ್ಣ ಅವರಿಗಿದ್ದರೂ ಅಭ್ಯರ್ಥಿ ಆಯ್ಕೆ ಜವಾಬ್ದಾರಿಯನ್ನು ಚೆಲುವರಾಯಸ್ವಾಮಿ ಅವರಿಗೆ ನೀಡಿದ್ದೇವೆ. ರಾಮನಗರ ಉಸ್ತುವಾರಿ ರಾಮಲಿಂಗಾರೆಡ್ಡಿ ಅವರಿದ್ದರೂ ವೆಂಕಟೇಶ್ ಅವರಿಗೆ ಜವಾಬ್ದಾರಿ ನೀಡಿದ್ದೇವೆ. ಜಾರ್ಜ್ ಅವರು ಕೇಂದ್ರ ಚುನಾವಣಾ ಸಮಿತಿಯಲ್ಲಿರುವ ಕಾರಣ ಅವರಿಗೆ ಈ ಜವಾಬ್ದಾರಿ ನೀಡಿಲ್ಲ ಎಂದು ತಿಳಿಸಿದರು.

ವಾರದಲ್ಲಿ ಅಭ್ಯರ್ಥಿ ಪಟ್ಟಿ ನೀಡಿ: ಅಭ್ಯರ್ಥಿ ಆಯ್ಕೆ ವಿಚಾರವಾಗಿ ಒಂದು ವಾರದಲ್ಲಿ ವರದಿ ನೀಡುವಂತೆ ಸಚಿವರಿಗೆ ತಿಳಿಸಿದ್ದೇವೆ. ಪ್ರತಿ ಲೋಕಸಭೆ ಕ್ಷೇತ್ರದ ಸಂಭಾವ್ಯ ಅಭ್ಯರ್ಥಿಗಳ ಹೆಸರುಗಳ ಬಗ್ಗೆ ಸಮೀಕ್ಷೆ ಮಾಡಿಸುತ್ತೇವೆ. ಜನವರಿಗೂ ಮುನ್ನ ಅಭ್ಯರ್ಥಿ ಪಟ್ಟಿ ಪ್ರಕಟಿಸಿ ಕ್ಷೇತ್ರದಲ್ಲಿ ಓಡಾಡುವಂತೆ ತಿಳಿಸುತ್ತೇವೆ. ಕೆಲವರು ಹಣ ಬೇಡ, ಅಕ್ಕಿ ಕೊಡಿ ಎಂದು ಬೇಡಿಕೆ ಇಟ್ಟಿದ್ದಾರೆ. ಅದನ್ನು ಪೂರೈಸಲು ಅಗತ್ಯವಾಗಿರುವ ಟೆಂಡರ್ ಕರೆಯುತ್ತಿದ್ದೇವೆ ಎಂದು ಮಾಹಿತಿ ನೀಡಿದರು. ನಮ್ಮ ಸರ್ಕಾರ ಮಾಡುತ್ತಿರುವುದು ಸಾಮಾಜಿಕ ಆರ್ಥಿಕ ಸಮೀಕ್ಷೆ. ಈ ವರದಿ ಬಗ್ಗೆ ಕೆಲವು ಸಮುದಾಯದವರಿಗೆ ಅನುಮಾನಗಳಿದ್ದು, ಸರ್ಕಾರ ಅವುಗಳನ್ನು ಬಗೆಹರಿಸುತ್ತದೆ. ಈವರೆಗೂ ವರದಿ ಬಗ್ಗೆ ಸರಿಯಾದ ತೀರ್ಮಾನಗಳಾಗಿಲ್ಲ. ವರದಿ ಇನ್ನು ಸಲ್ಲಿಕೆಯಾಗಿಲ್ಲ ಎಂದು ತಿಳಿಸಿದರು.

ನಾನು ಯಾವ ತಪ್ಪು ಮಾಡಿಲ್ಲ : ಡಿ.ಕೆ. ಶಿವಕುಮಾರ್ ಅವರಿಗೆ ಐಟಿ, ಇಡಿ ನೋಟೀಸ್ ಕಿರುಕುಳ ಆರಂಭವಾಗಿದೆಯಾ ಎಂದು ಕೇಳಿದಾಗ, ಈಗ ಆ ವಿಚಾರ ಬೇಡ. ಯಾರು ನೋಟಿಸ್ ನೀಡುತ್ತಾರೋ, ಏನು ಮಾಡುತ್ತಾರೋ ಮಾಡಲಿ. ನಾನು ಯಾವುದೇ ತಪ್ಪು ಮಾಡಿಲ್ಲ. ನನ್ನ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಪ್ರಕರಣ ದಾಖಲಿಸಿರಬಹುದು. ನನ್ನ ಎಲ್ಲಾ ದಾಖಲೆಗಳು ಸಾರ್ವಜನಿಕವಾಗಿವೆ?.

ನಾನು ಹಾಗೂ ನನ್ನ ಹೆಂಡತಿ ಇಬ್ಬರೂ ತೆರಿಗೆ ಪಾವತಿದಾರರು. ಒಂದೇ ಕುಟುಂಬವಾದರೂ ನನ್ನದು ಬೇರೆ, ಆಕೆಯದ್ದು ಬೇರೆ. ನಾನು ಹೆಚ್ಚಿಗೆ ಆಸ್ತಿಗಳಿಕೆ ಮಾಡಿದ್ದೇನಾ ಇಲ್ಲವೇ ಎಂದು ನೀವೇ ಲೆಕ್ಕ ಹಾಕಬಹುದು. ಇದು ಸಿಬಿಐಗೆ ನೀಡುವ ಪ್ರಕರಣವಲ್ಲ ಎಂದು ಅಡ್ವೋಕೇಟ್ ಜನರಲ್ ಹೇಳಿದ್ದರೂ ಯಡಿಯೂರಪ್ಪ ಅವರ ಸರ್ಕಾರದ ಅವಧಿಯಲ್ಲಿ ಈ ಪ್ರಕರಣವನ್ನು ಸಿಬಿಐಗೆ ನೀಡಿದ್ದಾರೆ. ನೋಟೀಸ್ ಕೊಡುವುದಾದರೆ ಕೊಡಲಿ. ನಾನು ಅದಕ್ಕೆ ಉತ್ತರ ನೀಡುತ್ತೇನೆ. ಬಿ ರಿಪೋರ್ಟ್ ಬರೆಯುವ ಕಾಲ ಬರುತ್ತದೆ ಎಂದು ತಿಳಿಸಿದರು.

ಅಂತ್ಯಕ್ರಿಯೆ ವೇಳೆ ಸರ್ಕಾರಿ ಗೌರವ

ಭಾಗವಹಿಸುವಂತೆ ಪ್ರೇರೇಪಿಸಲು ಶೀಘ್ರದಲ್ಲೇ ನೀತಿಯೊಂದನ್ನು ರೂಪಿಸಲಿದೆ ಎಂದಿದ್ದಾರೆ. ಅಂಗಾಂಗಗಳ ವೈಫಲ್ಯದಿಂದ ಪ್ರತಿನಿತ್ಯ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸಾವು ಅನಿವಾರ್ಯವಾದಾಗ ಸಕ್ರಿಯ ಹಾಗು ಉತ್ತಮ ಸ್ಥಿತಿಯಲ್ಲಿರುವ ಅಂಗಾಂಗ ದಾನದಿಂದ ಬಹಳಷ್ಟು ಜೀವಗಳ ರಕ್ಷಣೆ ಸಾಧ್ಯವಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಅಂಗಾಂಗಗಳ ಬೇಡಿಕೆ ಮತ್ತು ಪೂರೈಕೆ ನಡುವೆ ಅಜಗಜಾಂತರ ವ್ಯತ್ಯಾಸವಿದ್ದು, ಅದನ್ನು ಸರಿದೂಗಿಸಲು ಸರ್ಕಾರ ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಿದೆ. ಈ ನಿಟ್ಟಿನಲ್ಲಿ ಅಂಗಾಂಗಗಳ ದಾನಿಗಳ ಅಂತ್ಯಕ್ರಿಯೆ ವೇಳೆ ಸರ್ಕಾರಿ ಗೌರವ ನೀಡುವ ನಿರ್ಣಯ ಮಹತ್ವದ ಉತ್ತೇಜನ ನೀಡಲಿದೆ ಎಂದು ಹೇಳಲಾಗುತ್ತಿದೆ.

ಅಣ್ಣನ ಮಗನನ್ನೇ ಕೊಂದ ರೌಡಿ ಚಿಕ್ಕಪ್ಪ

ಗುಂಡೇಟಿನಿಂದ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದನೆ ಎಂದು ಮೃತನ ಮತ್ತೋರ್ವ ಚಿಕ್ಕಪ್ಪ ನಂಜೇಗೌಡ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಘಟನೆ ಬಳಿಕ ರೌಡಿಶೀಟರ್ ಸೀಮೆಎಣ್ಣೆ ಕುಮಾರ್ ಪರಾರಿಯಾಗಿದ್ದು, ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣಗೊಂಡಿತ್ತು. ಅಲ್ಲದೇ ಗುಂಡಿನ ಸದ್ದು ಸ್ಥಳೀಯರನ್ನು ಬೆಚ್ಚಿ ಬೀಳಿಸಿದೆ. ಮೃತ ದೇಹವನ್ನು ನಾಗಮಂಗಲದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಯಿತು. ಈ ಸಂಬಂಧ ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಹಾಗೂ ಬಿಂಡಿಗನವಿಲೆ ಪೊಲೀಸರು ಪರಿಶೀಲನೆ ನಡೆಸಿದರು. ತಾಲೂಕು ಆಸ್ಪತ್ರೆ ಬಳಿ ಎಸ್ಪಿ, ಮೃತರ ಸಂಬಂಧಿಗಳಿಂದ ಮಾಹಿತಿ ಪಡೆದರು. ಜೊತೆಗೆ ಆರೋಪಿ ಶೀಘ್ರ ಪತ್ತೆಗೆ ಎಸ್ಪಿ ಯತೀಶ್ ಬಿಂಡಿಗನವಿಲೆ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ನ.11, ಹೈದರಾಬಾದ್‌ನಲ್ಲಿ ಮಾದಿಗರ ವಿಶ್ವರೂಪ ಮಹಾಸಭೆ




ಮೈಸೂರು,ನ.4(ಎಂಟಿವೈ)– ಪರಿಶಿಷ್ಟ ಸಮುದಾಯದಲ್ಲಿ ಒಳ ಮೀಸಲಾತಿ ವರ್ಗೀಕರಣಕ್ಕಾಗಿ ಆಗ್ರಹಿಸಿ ನ.11ರಂದು ಹೈದ್ರಾಬಾದ್‌ನಲ್ಲಿ ಮಾದಿಗರ ವಿಶ್ವರೂಪ ಮಹಾಸಭೆ ಆಯೋಜಿಸಲಾಗಿದೆ ಎಂದು ಸಭೆಯ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷ ಜೆ.ಎಂ. ದೇವರಾಜ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿಯೇ ಒಳ ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಹಲವು ವರ್ಷಗಳಿಂದ ಮಾದಿಗ ದಂಡೋರ–ಎಂಆರ್‌ಪಿಎಸ್ ಸಂಘಟನೆ ಹೋರಾಟ ಮಾಡುತ್ತಲೇ ಇದೆ. ಆದರೆ, ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಸೂಕ್ಷ್ಮ ಸಮುದಾಯಗಳು ಸರ್ಕಾರದ ಸೌಲಭ್ಯ ಪಡೆಯಲು ವಿಫಲವಾಗಿವೆ. ಇದರಿಂದ ಎಸ್‌ಸಿ ಸಮುದಾಯದಲ್ಲಿ ಹಲವು ಪಂಗಡಗಳು ಇಂದಿಗೂ ಸಂಕಷ್ಟದ ಸ್ಥಿತಿಯಲ್ಲಿ ಜೀವನ ಸಾಗಿಸುವಂತಾಗಿದೆ. ಇದರಿಂದ ಕೇಂದ್ರ ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಹೋರಾಟ ಮುಂದುವರೆಸಲಾಗಿದೆ ಎಂದರು.

ರಾಜ್ಯದಲ್ಲಿಯೂ ಈ ಹಿಂದೆ ಒಳ ಮೀಸಲಾತಿಗಾಗಿ ಆಗ್ರಹಿಸಿ ಅನೇಕ ಹೋರಾಟಗಳು ನಡೆದಿವೆ. ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಮಾರ್ಚ್ 24 ರಂದು ಪರಿಶಿಷ್ಟ ಜಾತಿಯ ಒಳ ಮೀಸಲಾತಿ ವರ್ಗೀಕರಣ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಆದರೆ ಯಾವುದೇ ಬೆಳವಣಿಗೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ನ. 11 ರಂದು 'ಹಲೋ ಮಾದಿಗ ಚಲೋ ಹೈದ್ರಾಬಾದ್' ಘೋಷಣೆಯೊಂದಿಗೆ ದಂಡೋರ ದಂಡೋರ(ಮಾದಿಗ ಮೀಸಲಾತಿ ಹೋರಾಟ ಸಮಿತಿ) ಹೈದರಾಬಾದ್‌ನಲ್ಲಿ ಮಾದಿಗರ ವಿಶ್ವರೂಪ ಮಹಾಸಭಾ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾದಿಗ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ದಕ್ಷಿಣ ಭಾರತದಲ್ಲಿ ಮಾದಿಗ ಸಮುದಾಯದ ಸುಮಾರು 25 ರಿಂದ 30 ಲಕ್ಷ ಮಂದಿ ಹೈದರಾಬಾದ್ ಮಹಾಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಕೇಂದ್ರ ಸರ್ಕಾರದ ಸಚಿವ ಸಂಪುಟವು ಪ.ಜಾತಿ ಒಳ ಮೀಸಲಾತಿ ಮಸೂದೆ ಮಂಡಿಸುವಂತೆ ಒತ್ತಾಯಿಸಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾದಿಗ ದಂಡೋರ ಸಮಿತಿಯ ಮುಖಂಡರಾದ ಎಂ.ವಿ. ವೆಂಕಟೇಶ್, ನರಸಿಂಹ, ಶ್ರೀನಿವಾಸ್, ರಾಚಪ್ಪ ಇದ್ದರು.

ವಿಶೇಷಚೇತನ ಕ್ರೀಡಾಪಟುಗೆ ಸನ್ಮಾನ



ಮೈಸೂರು,ನ.4(ಎಂಟಿವೈ)– ಈಜಿಪ್ಟಿನ ಕೈರೋದಲ್ಲಿ ನ.8ರಿಂದ 19ರವರೆಗೆ ನಡೆಯುವ ವಿಶೇಷಚೇತನರ ಸಿಟ್ಟಿಂಗ್ ವಾಲಿಬಾಲ್ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸುತ್ತಿರುವ ವಿಶೇಷ ಕ್ರೀಡಾಪಟು ಗಣೇಶ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ 'ನಮ್ಮೂರು ನಮ್ಮೋರು' ಸಮಾಜ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಕ್ರೀಡಾಪಟು ಗಣೇಶ್ ಅವರನ್ನು ಸನ್ಮಾನಿಸಿದರು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಅಂಬಲಾರ ಗ್ರಾಮದ ಕೃಷಿ ಕುಟುಂಬದ ಟಿ. ಗಣೇಶ್ ವಿಶೇಷ ಚೇತನರಾಗಿದ್ದು, ಅಂಗವೈಕಲ್ಯವನ್ನು ಮೆಟ್ಟಿ ನಿಂತು ಸಿಟ್ಟಿಂಗ್ ವಾಲಿಬಾಲ್ ಕ್ರೀಡೆಯಲ್ಲಿ ಸಾಧನೆ ಮಾಡುತ್ತಿದ್ದಾರೆ.

ಸನ್ಮಾನ ಕಾರ್ಯಕ್ರಮದಲ್ಲಿ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಸತೀಶ್‌ಗೌಡ ಬೀಡನಹಳ್ಳಿ ಮಾತನಾಡಿ, ವಿಶೇಷ ಕ್ರೀಡಾಪಟು ಗಣೇಶ್ ಅವರು ಅಂಗವೈಕಲ್ಯತೆಯನ್ನು ಮೆಟ್ಟಿ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ. ವಿಶ್ವಕಪ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗುವ ಮೂಲಕ ಮೈಸೂರಿನ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಹೆಚ್ಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಟ್ರಸ್ಟ್ ವತಿಯಿಂದ ಸನ್ಮಾನಿಸುವ ಮೂಲಕ ಅವರಿಗೆ 50 ಸಾವಿರ ರೂ. ಆರ್ಥಿಕ ನೆರವು ನೀಡಲಾಗಿದೆ. ತೆರೆಮರೆಯಲ್ಲಿರುವ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಮುಂದಾಗಬೇಕು ಎಂದರು. ಈ ಸಂದರ್ಭದಲ್ಲಿ ಟ್ರಸ್ಟ್ ಉಪಾಧ್ಯಕ್ಷ ಕುಮಾರ್‌ಗೌಡ, ಮೈಸೂರು ನಗರ ಒಕ್ಕಲಿಗರ ಸಂಘದ ನಿರ್ದೇಶಕ ಎ. ರವಿ, ಅಭಿಷೇಕ್ ಗೌಡ, ನಾಗೇಂದ್ರ ಇದ್ದರು.

ಯೋಗ ಶಿಕ್ಷಣ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣೆ



ಮೈಸೂರು,ನ.4(ಎಂಟಿವೈ)– ಮೈಸೂರಿನ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಯೋಗ ಶಿಕ್ಷಕರಾಗಿ ತರಬೇತಿ ಪಡೆದವರಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ತರಬೇತಿ ಪಡೆದ ಯೋಗ ಶಿಕ್ಷಕರಿಗೆ ಪ್ರಮಾಣ ಪತ್ರ, ಯೋಗದಲ್ಲಿ ಸಾಧನೆ ಮಾಡಿದವರಿಗೆ ಯೋಗಾಚಾರ್ಯ ಪ್ರಶಸ್ತಿ ವಿತರಿಸಿದರು.

ಬಳಿಕ ಎಸ್.ಟಿ. ರವಿಕುಮಾರ್ ಮಾತನಾಡಿ, ಯೋಗಕ್ಕೆ ಇಂದು ವಿಶ್ವದಾದ್ಯಂತ ಮನ್ನಣೆ ಹೆಚ್ಚಾಗುತ್ತಿದೆ. ಮೈಸೂರು ನಗರ ಯೋಗ ಪರಂಪರೆಯನ್ನೇ ಹೊಂದಿದೆ. ಇದರಿಂದಾಗಿ ಯೋಗಕ್ಕೆ ಮೈಸೂರು ಪ್ರಸಿದ್ಧವಾಗಿದೆ. ಬಹಳಷ್ಟು ಪ್ರತಿಷ್ಠಿತ ಯೋಗ ಸಂಸ್ಥೆಗಳು ಯೋಗ ಕಲಿಸುತ್ತಿವೆ. ಇದರಿಂದಾಗಿ ಯೋಗ ಕ್ಷೇತ್ರದಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಾನ್ಯತೆ ಮೈಸೂರಿಗೆ ಒದಗಿ ಬಂದಿದೆ. ಯೋಗ ಮಾನಸಿಕ, ದೈಹಿಕ ಆರೋಗ್ಯ ಕಾಪಾಡುತ್ತದೆ. ಆರೋಗ್ಯವಂತ ಜೀವನಕ್ಕೆ ಯೋಗ ಅಗತ್ಯ. ಇಂದು ಮನುಷ್ಯನ ಬದುಕು ಯಾಂತ್ರಿಕವಾಗಿದ್ದು, ಇದರಿಂದಾಗಿ ಅನಾರೋಗ್ಯಕ್ಕೀಡಾಗುತ್ತಿದ್ದಾರೆ. ಆದ್ದರಿಂದ ಇದಕ್ಕೆ ಯೋಗವೊಂದೇ ಪರಿಹಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪರಮಹಂಸ ಯೋಗ ಮಹಾವಿದ್ಯಾಲಯದ ಅಧ್ಯಕ್ಷ ಶಿವಪ್ರಕಾಶ್, ಪಿ.ಆರ್. ವಿಶ್ವನಾಥ್‌ಶೆಟ್ಟಿ, ಎಂ.ಎಸ್. ರಮೇಶ್‌ಕುಮಾರ್, ಇನ್ನಿತರರು ಹಾಜರಿದ್ದರು.

ಇಂದು ಭರತನಾಟ್ಯ ಕಿಂಕಿಣಿ ಪೂಜೆ

ಮೈಸೂರು, ನ.4(ಜಿಎ)–ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ಇದೇ ನ. 5ರಂದು ಸಂಜೆ 5.30ಕ್ಕೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಭರತನಾಟ್ಯ ಕಿಂಕಿಣಿ ಪೂಜಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಡಾ.ಚೇತನಾ ರಾಧಾಕೃಷ್ಣ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಮ್ಮ ಶಿಷ್ಯರಾದ ಐನ ಸೋಮಯ್ಯ ಮೂವೇರ ಮತ್ತು ಕುಮಾರಿ ಇಪುರು ಲಕ್ಷ್ಮಿ ಕಾರ್ತಿಕ ಕಾರ್ಯಕ್ರಮ ನಡೆಸಿಕೊಡುವರು. ಶಾಸಕ ಕೆ. ಹರೀಶ್ ಗೌಡ ಉದ್ಘಾಟಿಸುವರು, ಮುಖ್ಯ ಅತಿಥಿಗಳಾಗಿ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ. ಹೇಮಂತಕುಮಾರ್, ಇನ್ನಿತರರು ವೇದಿಕೆಯಲ್ಲಿರುವರು ಎಂದರು. ಸುದ್ದಿಗೋಷ್ಠಿಯಲ್ಲಿ ಪಿ.ಎಂ. ರಾಧಾಕೃಷ್ಣ, ಡಾ. ಶ್ರುತಿ, ಶಿವಜ್ಯೋತಿ ಉಪಸ್ಥಿತರಿದ್ದರು.

ಚೇತನ್‌ಕುಮಾರ್ ಬಿಜೆಪಿ ಟಿಕೆಟ್ ಆಕಾಂಕ್ಷಿ



ಮೈಸೂರು,ನ.4(ಎಂಟಿವೈ)– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸುವ ಆಕಾಂಕ್ಷೆ ಹೊಂದಿರುವುದಾಗಿ ಹಾಸನ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಎಂದು ಡಾ.ಕೆ.ಟಿ.ಚೇತನ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಜಿಲ್ಲೆ ಬೇಲೂರು ತಾಲೂಕಿನ ದೊಡ್ಡಕೋಡಿಹಳ್ಳಿ ಗ್ರಾಮ ಮೂಲದವರಾದ ನಾನು ಶಿಕ್ಷಣ ಸಂಸ್ಥೆ ಪ್ರಾರಂಭಿಸಿ, ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. 12 ವರ್ಷಗಳಿಂದ ಬಿಜೆಪಿ ಸಕ್ರಿಯ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದೇನೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಶಿಕ್ಷಣ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಮನವಿ ಮಾಡಿದ್ದು, ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈಗಾಗಲೇ ಪ್ರವಾಸ ಕೈಗೊಂಡು ಮತ ಯಾಚಿಸುತ್ತಿದ್ದೇನೆ. ಮತದಾರರ ಪಟ್ಟಿಗೆ ನೋಂದಾಯಿಸಿಕೊಳ್ಳುವ ಅವಕಾಶ ನೀಡಲಾಗಿದ್ದು, ಶಿಕ್ಷಕರು ನ.6 ರೊಳಗೆ ಹೆಸರು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವಿನಯ್‌ಕುಮಾರ್, ದರ್ಶನ್ ಇದ್ದರು.

ಮಹಿಳೆಯರು ಸಿಕ್ಕ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು



ಮೈಸೂರು, ನ.4(ಜಿಎ)–ಮಹಿಳೆಯರು ಚುನಾವಣೆಯಲ್ಲಿ ಗೆದ್ದು ರಾಜಕಿಯ ಅಧಿಕಾರವನ್ನು ಪಡೆದುಕೊಂಡರೂ ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು, ಅಧಿಕಾರಕ್ಕಾಗಿ ಕೆಲಸ ಮಾಡುವ ಬದಲು ಜವಾಬ್ದಾರಿಯಿಂದ ನಿರ್ವಹಿಸಿದರೆ, ಜನರು ಮತ್ತೊಮ್ಮೆ ಆಯ್ಕೆ ಮಾಡುತ್ತಾರೆ ಎಂದು ಸುಳ್ಯ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಲ್ಯ ಅಭಿಪ್ರಾಯಪಟ್ಟರು.

ನಗರದ ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ವತಿಯಿಂದ ಕೇಂದ್ರ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಒಳಗೊಳ್ಳುವ ರಾಜಕಾರಣ ದತ್ತ ಮಹಿಳೆಯರು' ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಆದರೆ, ಇಂದಿರಾ ಗಾಂಧಿ ಸೇರಿದಂತೆ ಕೆಲವು ಮಹಿಳಾ ನಾಯಕಿಯರು ರಾಜಕೀಯದಲ್ಲಿ ಸಾಧನೆ ಮಾಡಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಅವಕಾಶ ಕಡಿಮೆ ಇದೆ. ಹಾಗಾಗಿ ರಾಜ ಕಾರಣದಲ್ಲಿ ಇನ್ನಷ್ಟು ಹೆಚ್ಚು ಅವಕಾಶ ದೊರಕಿದರೆ ಸಮಾಜದಲ್ಲಿ ಬದಲಾವಣೆಯಾಗುವುದು. ಕೆಲವು ಮಹಿಳೆಯರು ಉತ್ತಮ ಸ್ಥಾನಮಾನ ಪಡೆದುಕೊಂಡು ತಮ್ಮ ಕಾರ್ಯವೈಖರಿ ಮೂಲಕ ಜವಾಬ್ದಾರಿಯನ್ನು ತೋರಿಸಿದ್ದಾರೆ ಎಂದರು.

ಮೀಸಲಾತಿ ಅನುಗುಣವಾಗಿ ಪಂಚಾಯತ್ ಮಟ್ಟದಲ್ಲಿ ಮಹಿಳೆಯರಿಗೆ ಶೇ.60 ರಷ್ಟು ಅವಕಾಶ ನೀಡಲಾಗಿದೆ. ಆದರೆ, ಅಂದುಕೊಂಡಷ್ಟು ವಿಧಾನಸಭಾ ಮತ್ತು ಲೋಕಸಭೆಯಲ್ಲಿ ಸ್ಪರ್ಧಿಸಲು ಸರಿಯಾದ ಅವಕಾಶ ದೊರೆತಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದಿಂದಾಗಿ ಮೀಸಲಾತಿ ಇದ್ದ ಕಾರಣ ಮಹಿಳೆಯರು ರಾಜಕಾರಣದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಸಿಕ್ಕಿದೆ. ಮಹಿಳೆಯರಿಗೆ ಅವಕಾಶ ನೀಡಿದಾಗ ಸಮಸ್ಯೆಗಳೇನೆಂಬುದನ್ನು ತಿಳಿದು ಅದರ ವಿರುದ್ಧ ನೇರವಾಗಿ ಹೋರಾಟ ಮಾಡಿದರಷ್ಟೇ ಸಮಾಜವನ್ನು ಬದಲಾವಣೆ ಮಾಡಬಹುದು ಎಂದು ಸಲಹೆ ನೀಡಿದರು.


ಕರ್ನಾಟಕದಲ್ಲಿ ಸಮರ್ಥ ನಾಯಕಿಯರಿದ್ದರೂ ಕೂಡ ಅವರಿಗೆ ಅಡತಡೆಗಳು ಸಾಕಷ್ಟಿರುತ್ತವೆ, ಅದನ್ನು ಲೆಕ್ಕಿಸದೇ ಮುನ್ನುಗ್ಗಿ ಬರುವ ಸಾಮರ್ಥ್ಯ ಮಹಿಳೆಯರಲ್ಲಿ ಇಲ್ಲದಿರುವುದರಿಂದ ಪುರುಷರೇ ಮಂತ್ರಿಗಳಾಗುವ ಸಾಧ್ಯತೆ ಉಂಟಾಗಿದ್ದು, ಸಮಾಜದಲ್ಲಿ ಮಹಿಳೆಯರಾದ ನಾವು ಸಮಾಜವನ್ನು ಮುನ್ನಡೆಸಿಕೊಂಡು ಹೋಗುವುದಕ್ಕೆ ಅಧಿಕಾರವೇ ಬೇಕಿಲ್ಲ. ಇತರೆ ಸಂಘ–ಸಂಸ್ಥೆಗಳ ಮೂಲಕ ಕೆಲಸ ಮಾಡಬಹುದು. ಹಾಗಾಗಿ ಮಹಿಳೆಯರಿಗೆ ಒಳ್ಳೆಯ ಪ್ರೋತ್ಸಾಹ ನೀಡುವುದಕ್ಕೆ ಪುರುಷರು ಸಹಕಾರ ನೀಡಬೇಕಿದೆ ಎಂದು ತಿಳಿಸಿದರು.

ನಂತರ ಸಾರ್ವಜನಿಕ ವ್ಯವಹಾರ ಕೇಂದ್ರದ ನಿರ್ದೇಶಕಿ ಪ್ರೊ ಛಾಯಾ ದೇಗಾಂವಕರ್ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಮಹಿಳೆ ಪರ ಹೆಚ್ಚಿನ ಕಾಳಜಿ ಇತ್ತು. ಮೀಸಲಾತಿ ಮೂಲಕ ಮಹಿಳೆಯರ ರಾಜಕಾರಣದ ಪ್ರವೇಶವಾಗಿದೆ. ಇದಕ್ಕೂ ಮುನ್ನ ಲಿಬರಲ್ ಕಮ್ಯುನಿಸಂನಲ್ಲಿ ಮಹಿಳೆಯ ಪರ ಧ್ವನಿ ಎದ್ದವು. ಮಹಿಳೆಯರಿಗಾಗಿ ಕಲ್ಯಾಣ ಕಾರ್ಯಕ್ರಮ ರೂಪಿಸಬೇಕೆಂಬ ನಿರ್ಣಯಗಳು ಆದವು. ಆದರೆ, ಜಾರಿಗೆ ಬರಲಿಲ್ಲ. ಆರ್ಥಿಕವಾಗಿ ಮಹಿಳಾ ಸಬಲೀಕರಣವಾದರೆ ಸಾಮಾಜಿಕ ಸಬಲೀಕರಣ ಜೊತೆ ಜೊತೆಯಾಗಲಿದೆ. ಕುಟುಂಬದಲ್ಲಿ ಮಹಿಳೆಗೆ ಸರಿಯಾದ ಸ್ಥಾನಮಾನ ಸಿಕ್ಕಿಲ್ಲ. ಉತ್ತರ ಪ್ರದೇಶ, ರಾಜಸ್ಥಾನಗಳಲ್ಲಿ ಮಹಿಳೆಯ ಪರವಾದ ಕಾನೂನುಗಳು ಸರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಈ ಕಾನೂನುಗಳ ಕುರಿತು ಅಧ್ಯಯನ ನಡೆಸಿದಾಗ ಕೆಲವು ಜಿಲ್ಲೆಗಳಲ್ಲಿ ಮಹಿಳಾ ಅಧಿಕಾರಿಗಳೇ ಇಲ್ಲ. ಹೀಗಾಗಿ ಕಾನೂನುಗಳು ಬರೀ ಹಾಳೆ ಮೇಲೆ ಉಳಿದಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಸಂಸತ್, ಸದನದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗ ಬೇಕು. ಇದಕ್ಕಾಗಿ ಮೀಸಲಾತಿ ಕೂಡ ಅನುಷ್ಠಾನ ಗೊಂಡಿದೆ. ಆದರೆ, ರಾಜ್ಯದ ಸದನದಲ್ಲಿ ಕೇವಲ ಶೇ.3ರಷ್ಟು ಮಾತ್ರ ಮಹಿಳೆಯರಿದ್ದಾರೆ. ಹೀಗಾಗಿ ಮಹಿಳೆ ಧ್ವನಿಗೆ ಬೆಲೆ ಸಿಗುತ್ತಿಲ್ಲ. ಹೆಣ್ಣು ಭ್ರೂಣ ಹತ್ಯೆಯ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸಿದ್ದರೂ ಹೆಣ್ಣು ಶಿಶು ಭ್ರೂಣ ಹತ್ಯೆ ಇಂದಿಗೂ ಜೀವಂತವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ, ನಿರ್ದೇಶಕ ಪ್ರೊ.ಜೆ. ಸೋಮಶೇಖರ್, ಹಾಗೂ ಅಧ್ಯಾಪಕರು, ಅಧ್ಯಾಪಕೇತರರು ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ನಂ.ಶ್ರೀಕಂಠಕುಮಾರ್ ಮೊ: 9481067333



ಶೃಂಗೇರಿ ಮಹಾಸನ್ನಿಧಾನಂಗಳವರ ಸ್ವರ್ಣಾಶೀರ್ವಾದ
ಭಾರತೀ ಕರುಣಾ ಪಾತ್ರಂ ಭಾರತೀ ಪದಭೂಷಣಂ ।
ಭಾರತೀ ಪರಮಾರೂಢಂ ಭಾರತೀತೀರ್ಥ ಮಾಶ್ರಯೇ॥

ಶೃಂಗೇರಿ ಶ್ರೀಗಳ ಸನ್ಯಾಸ ಸ್ವೀಕಾರ

ಸ್ವರ್ಣ ಮಹೋತ್ಸವ

ನವೆಂಬರ್ 3, 2023ರಿಂದ ನವೆಂಬರ್ 10ರವರೆಗೆ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸನ್ಯಾಸ ಸ್ವೀಕಾರ ಸ್ವರ್ಣ ಮಹೋತ್ಸವದ ಅಂಗವಾಗಿ ಲೇಖನ

ನವೆಂಬರ್ 10, 2023ರಂದು ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಸನ್ಯಾಸ ಸ್ವೀಕಾರ ಸ್ವರ್ಣ ಮಹೋತ್ಸವದ ಅಂಗವಾಗಿ ಶೃಂಗೇರಿ ಶ್ರೀಕ್ಷೇತ್ರದ ಮಾರುತಿ ಬೆಟ್ಟದಲ್ಲಿ ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರು ಮಹಾಸನ್ನಿಧಾನಂಗಳವರ ಸಮಕ್ಷಮದಲ್ಲಿ ಜಗದ್ಗುರು ಶ್ರೀ ಶ್ರೀ ಶಂಕರಭಗತ್ಪಾದಾಚಾರ್ಯರ ಮೂವತ್ತೆರಡು ಅಡಿ ಎತ್ತರದ, ಏಳುನೂರ ಐವತ್ತು ಟನ್ ತೂಕದ ಶಿಲಾಮಯದ ಭವ್ಯಮೂರ್ತಿ, ಶ್ರೀಭಗವತ್ಪಾದರ ಪ್ರಧಾನ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯ–ಪದ್ಮಪಾದಾಚಾರ್ಯ–ಹಸ್ತಾಮಲಕಾಚಾರ್ಯ– ತೋಟಕಾಚಾರ್ಯರ, ಶ್ರೀ ಶೃಂಗೇರಿ ಪೀಠದ 12ನೇಯ ಅಧಿಪತಿಗಳೂ ಆದ ಜಗದ್ಗುರು ಶ್ರೀ ವಿದ್ಯಾರಣ್ಯರ ಶಿಲಾಮೂರ್ತಿಗಳನ್ನು ಹಾಗೂ ವಸ್ತು ಪ್ರದರ್ಶನದ ಶಾಲೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಈ ಬೆಟ್ಟದಲ್ಲಿ ಸೂರ್ಯೋದಯ ಹಾಗೂ ಸೂರ್ಯಾಸ್ತ ವೀಕ್ಷಣೆಗೂ ವ್ಯವಸ್ಥೆ ಮಾಡಲಾಗಿದೆ. ಈ ಸ್ವರ್ಣಮಹೋತ್ಸವದ ತತ್ಸಂಬಂಧವಾಗಿ ಅತಿರುದ್ರ ಮಹಾಯಾಗ, ಲಕ್ಷಮೋದಕ ನರಸಿಂಹಹೋಮ, ಪಂಚಾಕ್ಷರಿ ಹೋಮ, ಆಂಜನೇಯ ಹೋಮ, ಮೇಧಾ ದಕ್ಷಿಣಾಮೂರ್ತಿ ಹೋಮ, ಸಹಸ್ರ ಚಂಡಿ ಮಹಾಯಾಗ, ಮಹಾವಿಷ್ಣು ಆರಾಧನೆ ಅಲ್ಲದೇ 50000 ವೃಕ್ಷಾರೋಪಣ ಕಾರ್ಯಕ್ರಮವೆಲ್ಲವೂ ಲೋಕ ಕಲ್ಯಾಣಾರ್ಥವಾಗಿ ಜರುಗಲಿರುವುದು ಆಸ್ತಿಕರೆಲ್ಲರಿಗೂ ಸಂತಸ ತಂದಿದೆ.

ಆಚಾರ್ಯ ಶ್ರೀ ಶಂಕರ ಭಗವತ್ಪಾದರು ಸ್ಥಾಪಿಸಿದ ನಾಲ್ಕು ವ್ಯಾಖ್ಯಾನ ಪೀಠಗಳಲ್ಲಿ ಪ್ರಥಮವಾದದ್ದು ದಕ್ಷಿಣಾಮ್ನಾಯ ಶೃಂಗೇರಿಯ ಶ್ರೀ ಶಾರದಾ ಪೀಠ. ವಿಶ್ವಕ್ಕೆ ಅದ್ವೈತವನ್ನು ಸಮಂಜಸವಾಗಿ ತಿಳಿಸುವ ತಪೋಬಲವು ಅವಿಚ್ಛಿನ್ನ ಗುರುಪರಂಪರೆಯಲ್ಲಿ ಸಾಗಿಬಂದಿದೆ. ಅಲ್ಲದೇ ಸಂನ್ಯಾಸವೆಂದರೆ ಲೌಕಿಕವೆಲ್ಲವನ್ನೂ ತ್ಯಜಿಸಿ ತನ್ನ ಮೋಕ್ಷವನ್ನು ತಾನು ಕಂಡುಕೊಳ್ಳುವುದಷ್ಟೇ ಅಲ್ಲದೇ, ಲೋಕಕಲ್ಯಾಣವನ್ನು ಮಾಡುವುದೂ ಆಗಿದೆ ಎಂದು ವೇದಗಳು ಹೇಳುವ ತತ್ವವಾಗಿದೆ. ಹಾಗಾಗಿ ಸನಾತನ ಧರ್ಮವು ವಿಶ್ವಮಾನ್ಯವಾಗುತ್ತಿದೆ.

ಆಂಧ್ರಪ್ರದೇಶದ ನಗುಲೇರು ಎಂಬ ನದಿಯ ತೀರದಲ್ಲಿನ ಪುಟ್ಟಗ್ರಾಮ ಅಲುಗು ಮಲ್ಲೇಪಾಡು. ಅಲ್ಲಿಯೇ ನದಿಯ ದಡದಲ್ಲಿ ಸುಂದರವಾದ ಶ್ರೀಭವಾನಿ ಶಂಕರರ ದೇವಸ್ಥಾನವಿದ್ದು ಗ್ರಾಮವೂ ಸಂಪದ್ಭರಿತವಾಗಿಯೂ ಯಾವುದೇ ಕೊರತೆ ಇರಲಿಲ್ಲ. ಸರಳ ಜೀವಿಗಳು, ವೇದಮೂರ್ತಿಗಳಾದ ಕುತ್ಸಸ ಗೋತ್ರದ, ಆಪಸ್ತಂಭ ಸೂತ್ರ, ಕೃಷ್ಣ ಯಜುರ್ವೇದ ಶಾಖೆಯ ಪರಂಪರೆಯ ಶ್ರೀ ತಂಗಿರಾಲ ವೆಂಕಟೇಶ ಅವಧಾನಿಗಳು ತಮ್ಮ ಧರ್ಮಪತ್ನಿ ಸೌಭಾಗ್ಯವತಿ ಅನಂತ ಲಕ್ಷ್ಮಮ್ಮನವರೊಂದಿಗೆ ಸಂತೋಷದ ತುಂಬು ಜೀವನ ನಡೆಸುತ್ತಿದ್ದರು. ಎಲ್ಲರೂ ಅವರನ್ನು ಪ್ರೀತಿ ಆದರದಿಂದ ಕಾಣುತ್ತಿದ್ದರು. ಅವಧಾನಿ ದಂಪತಿಗಳಿಗೆ ನಾಲ್ಕು ಹೆಣ್ಣು ಮಕ್ಕಳ ಜನನವಾಯಿತು. ಆದರೂ ಪುತ್ರ ಸಂತಾನವಾಗಲಿಲ್ಲ ಎಂಬ ಕೊರಗು ಅಂತರಂಗದಲ್ಲಿ ಉಂಟಾಯಿತು. ವರ್ಷಗಳು ಉರುಳಿದಂತೆ ಅವಧಾನಿಗಳು ಅಲುಗು ಮಲ್ಲೇಪಾಡುವಿನಿಂದ ಮಚಲೀಪಟ್ಟಣಕ್ಕೆ ತಮ್ಮ ವಾಸವನ್ನು ಬದಲಾಯಿಸಿದರು. ಅಲ್ಲಿನ ದೊಡ್ಡದಾದ ಶ್ರೀರಾಮದೇವಾಲಯದಲ್ಲಿ ಶ್ರೀರಾಮನ ಸೇವೆಯನ್ನು ಪ್ರಾರಂಭಿಸಿದರು. ಸಾಧ್ವಿ ಅನಂತಲಕ್ಷ್ಮಮ್ಮನವರು ದೈನಂದಿನ ಎಲ್ಲಾ ದೇವರ ಪೂಜೆಯೊಂದಿಗೆ ಅಲ್ಲಿಯೇ ಇದ್ದ ಮಾರುತಿ ಮೂರುತಿಯ ಮುಂದೆ ಬಹು ಭಕ್ತಿಯಿಂದ ಪುತ್ರ ಸಂತಾನ ಕರುಣಿಸುವಂತೆ ಪ್ರಾರ್ಥಿಸಿ ನನ್ನ ಮಗನಿಗೆ ಆಂಜನೇಯಲು ಎಂದು ಹೆಸರಿಸಿ ನಿತ್ಯ ಸ್ಮರಿಸುತ್ತೇನೆ ಎಂದು ಬೇಡುತ್ತಿದ್ದರು. ಒಂದು ದಿನ ಅನಂತಲಕ್ಷಮ್ಮ ಅವರಿಗೆ ಬೆಳಗಿನ ಜಾವ ಶ್ರೀಸೀತಾರಾಮನು ಆಂಜನೇಯನ ಮುಖಾಂತರ ಮೂರು ಮಾವಿನ ಹಣ್ಣುಗಳನ್ನು ಅನುಗ್ರಹಿಸಿದಂತೆ ಭಾಸವಾಯಿತು. ಸತ್ವ, ರಜಸ್ಸು, ತಮಸ್ಸು– ಈ ಮೂರು ಗುಣಗಳ ರೂಪವಾಗಿ ಬೆಳಗುವ ಪ್ರಭಾವಶಾಲಿಯಾದ ಚೈತನ್ಯವು ಉದಯಿಸುವುದೆಂಬುದರ ಸೂಚನೆಯಾಗಿ ಈ ಮೂರು ಫಲಗಳನ್ನು ಇತ್ತನೇ ಎಂದು ಯೋಚಿಸಿದರು.

ಆ ಶುಭದಿನ ಶ್ರೀಮತ್ ಖರನಾಮ ಸಂವತ್ಸರದ ಚೈತ್ರಮಾಸದ ಶುಕ್ಲಪಕ್ಷದ ಷಷ್ಠಿಯಂದು ಮೃಗಶಿರ ನಕ್ಷತ್ರದಲ್ಲಿ (11–04–1951) ಮಧ್ಯರಾತ್ರಿ ದಿವ್ಯಶಕ್ತಿಯ ಅವತಾರ ಧರೆಯಲ್ಲಿ ಉದಯಿಸಿತು. ತಂದೆಯು ನೆನೆದುಕೊಂಡಂತೆ ಸೀತಾರಾಮನೆಂದು ತಾಯಿಯ ಬಯಕೆಯಂತೆ ಆಂಜನೇಯಲು ಎಂದು ಎರಡನ್ನೂ ಸೇರಿಸಿ ಶ್ರೀ ಸೀತಾರಾಮಾಂಜನೇಯಲು ಎಂದು ನಾಮಕರಣ ಮಾಡಿದರು. ಮಗುವು ಬೆಳೆದಂತೆಲ್ಲಾ ಶಿವಭಕ್ತಿಯೂ ವೃದ್ಧಿಸತೊಡಗಿತು. ದಿನಗಳೆದಂತೆ ಪೂಜಾ ಸಮಯದಲ್ಲಿ ಕೆಲವು ಮಂತ್ರ, ಶ್ಲೋಕಗಳನ್ನು ತಂದೆಯವರೊಂದಿಗೆ ಕೂಡಿಸಿ ಹೇಳುವುದನ್ನು ಕಲಿತನು. ಗರ್ಭಾಷ್ಟಮಕಾಲ ಬಹು ಯೋಗ್ಯವಾದುದರಿಂದ ಬಾಲಕನಿಗೆ ಎಂಟು ವರ್ಷವಾಗುತ್ತಿದ್ದಂತೆ ಉಪನಯನವನ್ನು ಮಾಡಿದರು. ಅಂದಿನಿಂದ ಧರ್ಮದ ಆಸರೆ ಒದಗಿ ಧರ್ಮ ರಕ್ಷಣೆ ಮಾಡಲು ವಟುವು ಸಿದ್ಧನಾಗುತ್ತಾನೆ. ಬಾಲಕನಲ್ಲಿ ಸಂಸ್ಕೃತವನ್ನು ಕಲಿಯುವ ಆಸಕ್ತಿಯನ್ನು ಗಮನಿಸಿದ ಅವಧಾನಿಗಳು ಪಂಡಿತರ ಬಳಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿದರು. ಸಂಸ್ಕೃತದಲ್ಲಿ ಸರಳವಾಗಿ ಮಾತನಾಡುವ ಅಭ್ಯಾಸವು ದೊರೆಯಿತು. ಅವಧಾನಿಗಳು ವೇದ ಪಾರಂಗತರು ಮತ್ತು ಅನುಷ್ಠಾನ ವೇದಾಂತಿಗಳು ಎಂದು ಖ್ಯಾತಿ ಪಡೆದಿದ್ದರು. ಬಾಲಕ ಸೀತಾರಾಮಾಂಜನೇಯಲು ತಂದೆಯ ಬಳಿ ಮಂತ್ರಗಳನ್ನು ಏಕಸಂಧಿಗ್ರಾಹಿಯಾಗಿ ಕಲಿಯ ತೊಡಗಿದನು. ಚಿಕ್ಕ ಹುಡುಗನಾಗಿದ್ದರೂ ವೇದ ಪ್ರವರ್ಧಕ ವಿದ್ವತ್ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದನು.

1960ರಲ್ಲಿ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಆಂಧ್ರಪ್ರದೇಶದಲ್ಲಿ ವಿಜಯಯಾತ್ರೆ ಮಾಡುತ್ತಾ ನರಸರಾವ್ ಪೇಟೆಗೆ ಬಂದು ಬಿಡಾರ ಮಾಡಿದ್ದರು. ಅವಧಾನಿಗಳು ಮಗ ಸೀತಾರಾಮಾಂಜನೇಯಲುವನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಜಗದ್ಗುರುಗಳವರ ದರ್ಶನ ಪಡೆದರು. ಪ್ರಥಮಬಾರಿಗೆ ಗುರುಗಳ ದರ್ಶನ ಪಡೆದ ಬಾಲಕನ ಮನಸ್ಸಿನಲ್ಲಿ ವಿಶೇಷ ಗೌರವ ಮೂಡಿತು. ಬಾಲಕನು ಸಾಷ್ಟಾಂಗ ನಮಸ್ಕಾರ ಮಾಡಿದನು. ಗುರುಗಳು ಈರ್ವರನ್ನೂ ಹರಸಿದರು.

1966ರಲ್ಲಿ ಗ್ವಾಲಿಯರ್ ರಾಜಮಾತಾ ವಿಜಯರಾಜೇಸಿಂಧಿಯಾ ಅವರ ವಿನಂತಿಯ ಮೇರೆಗೆ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಚಾತುರ್ಮಾಸ ವ್ರತವನ್ನು ಉಜ್ಜಯನಿಯಲ್ಲಿ ಕೈಗೊಂಡಿದ್ದರು. ನರಸರಾವ್ ಪೇಟೆಯಿಂದ ಶ್ರೀ ಸ್ವಾಮಿ ವಿದ್ಯಾರಣ್ಯ ಭಾರತೀ ಎಂಬುವವರು ಜಗದ್ಗುರುಗಳ ದರ್ಶನಕ್ಕಾಗಿ ಉಜ್ಜಯಿನಿಗೆ ಪ್ರವಾಸ ಏರ್ಪಡಿಸಿದ್ದರು. ಬಾಲಕ ಆಂಜನೇಯಲು ಸಹ ಉಜ್ಜಯನಿಗೆ ಹೋಗಲು ಆಶಿಸಿದನು. ಜಗದ್ಗುರುಗಳವರ ದರ್ಶನಕ್ಕೆ ಮನಸ್ಸು ಹಾತೊರೆಯುತ್ತಿತ್ತು. ಉಜ್ಜಯನಿಯಲ್ಲಿ ಮಹಾಸ್ವಾಮಿಗಳವರ ದರ್ಶನ ಪಡೆದು ಕೃತಾರ್ಥನಾದನು. ಮಹಾಸ್ವಾಮಿಗಳವರು ಬಾಲಕನನ್ನು ಬಂದಿರುವ ಕಾರಣವಾದರೂ ಏನೆಂದು ಕೇಳಿದರು. ಬಾಲಕ ಮಹಾಸ್ವಾಮಿಗಳವರ ಬಳಿ ಶಾಸ್ತ್ರಾಭ್ಯಾಸವನ್ನು ಕಲಿಯಬೇಕು ಅನುಗ್ರಹಿಸಿ ಕಾಪಾಡಬೇಕು ಎಂದು ನಮ್ರನಾಗಿ ವಿನಂತಿಸಿದನು. ಮಾರನೆಯ ದಿನ ಬಾಲಕ ಆಂಜನೇಯಲು ರವರಿಗೆ ಗುರುಗಳವರಿಂದ ಒಪ್ಪಿಗೆ ಕರೆ ಬಂದಿತು. ಜಗದ್ಗುರುಗಳವರನ್ನು ಬಾಲಕ ಭೇಟಿ ಮಾಡಿ ಶ್ರದ್ಧಾಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿದನು. ಗುರುಗಳವರು ಆಶೀರ್ವದಿಸಿ ಅಂದಿನಿಂದಲೇ ತರ್ಕಸಂಗ್ರಹ ಪಾಠಗಳನ್ನು ಪ್ರಾರಂಭಿಸಿದರು. ಬಾಲಕ ಗುರುಪಾದಾರವಿಂದವನ್ನೇ ನಂಬಿ ಕೃತಾರ್ಥನಾದನು.ಇತ್ತ ತಂದೆ ವೆಂಕಟೇಶ ಅವಧಾನಿಗಳು, ತಾಯಿ ಅನಂತಲಕ್ಷ್ಮಮ್ಮನವರು ಚಿಂತಾಕ್ರಾಂತರಾಗಿದ್ದರು. ಮಾತಾಪಿತೃಗಳಿಗೆ ಬಾಲಕನು ಬರೆದ ಪತ್ರ ತಲುಪಿ ಜಗದ್ಗುರುಗಳವರ ಸಾನ್ನಿಧ್ಯ ಬಾಲಕನಿಗೆ ದೊರೆಕಿದ್ದು ತಿಳಿದು ಸಂತಸ, ನೆಮ್ಮದಿ ಉಂಟಾಯಿತು. ಜಗದ್ಗುರುಗಳವರು ಎಲ್ಲೇ ಯಾತ್ರೆ ಹೋದರೂ ಆ ಸ್ಥಳಗಳಲ್ಲಿ ವಿದ್ವತ್ ಸಭೆಗಳು ನಡೆಯುತ್ತಿರುತ್ತವೆ. ಅಂತಹ ವಿದ್ವತ್ ಸಭೆಗಳಲ್ಲಿ ಭಾಗವಹಿಸಲು ಶ್ರೀ ಸೀತಾರಾಮಾಂಜನೇಯಲುರವರಿಗೆ ಗುರುಗಳು ಸೂಚನೆ ಕೊಡುತ್ತಿದ್ದರು. ಗುರುಗಳು ಶಿಷ್ಯನ ಪರಿಣತಿಯನ್ನು ಮೆಚ್ಚಿ ಮುಗುಳು ನಗುವ ಮೂಲಕ ಒಪ್ಪಿಗೆಯ ಭಾವ ವ್ಯಕ್ತಪಡಿಸುತ್ತಿದ್ದರು.

ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ವಿಜಯಯಾತ್ರೆಯನ್ನು ಪೂರ್ಣಗೊಳಿಸಿ 1968ರ ಮಾರ್ಚ್‌ನಲ್ಲಿ ಶೃಂಗೇರಿಗೆ ಪುರಪ್ರವೇಶ ಮಾಡಿದರು. ಗುರುಗಳವರೊಂದಿಗೆ ಪ್ರಥಮಬಾರಿಗೆ ಶ್ರೀ ಸೀತಾರಾಮಾಂಜನೇಯಲು ರವರು ಸಹ ಶೃಂಗೇರಿಗೆ ಆಗಮಿಸಿದರು. ಮಾತೆ ಶಾರದೆಯು ತನ್ನ ಮತ್ತೊಬ್ಬ ಆರಾಧಕನನ್ನು ಅನುಗ್ರಹಿಸಲು ಅಭಯ ಹಸ್ತದಿಂದ ರಾರಾಜಿಸುತ್ತಿದ್ದಳು. ಜಗದ್ಗುರುಗಳವರು ತಮ್ಮ ಶಿಷ್ಯ ಶ್ರೀ ಸೀತಾರಾಮಾಂಜನೇಯಲುರಿಗೆ ನರಸಿಂಹವನದಲ್ಲಿ ಪ್ರತ್ಯೇಕ ಎಲ್ಲಾ ವ್ಯವಸ್ಥೆಯನ್ನೂ ಮಾಡಿಸಿದರು. ಶಿಷ್ಯನಿಗೆ ಗುರುಗಳವರ ಮೇಲಿನ ಅಭಿಮಾನ, ಭಕ್ತಿಯು ಇಮ್ಮಡಿಯಾಯಿತು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಉತ್ತಮ, ಶ್ರೇಷ್ಠ ಪಂಡಿತರನ್ನು ನೇಮಿಸಿದರು. ಅಲ್ಲದೇ ತಾವು ಸಹ ಶಿಷ್ಯನಿಗೆ ವಿಶೇಷ ಪ್ರೀತಿಯಿಂದ ಪಾಠ ಪ್ರವಚನಗಳನ್ನು ನೀಡಿ ಪರಿಪೂರ್ಣ ಪಾಂಡಿತ್ಯವು ಲಭಿಸಿತು. ಜೊತೆಗೆ ಜೀವನ ಶಿಕ್ಷಣವೂ ನಡೆಯಿತು.


ಪ್ರತಿವರ್ಷದಂತೆ 1974ರಲ್ಲಿ ನವರಾತ್ರಿ ಮಹೋತ್ಸವಕ್ಕೆ ಅವಧಾನಿಗಳು ಧರ್ಮಪತ್ನಿ ಸಮೇತರಾಗಿ ಶೃಂಗೇರಿಗೆ ಆಗಮಿಸಿ ಜಗದ್ಗುರುಗಳವರ ದರ್ಶನ ಪಡೆದರು. ಜಗದ್ಗುರುಗಳವರು ತಾವು ಶ್ರೀ ಶಾರದಾ ಮಾತೆಯ ಆಜ್ಞೆಯಂತೆ ಶ್ರೀ ಸೀತಾರಾಮಾಂಜನೇಯಲುರವರನ್ನು ಮುಂದಿನ ಪೀಠಾಧಿಪತಿಗಳನ್ನಾಗಿ ಆರಿಸಿ ಸನ್ಯಾಸ ಸ್ವೀಕಾರ ದೀಕ್ಷೆಯನ್ನು ಅನುಗ್ರಹಿಸಿದ್ದೇವೆ ಎಂದು ಆಶೀರ್ವದಿಸಿದರು. ಅವಧಾನಿಗಳು ಜಗದ್ಗುರುಗಳವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತಮ್ಮ ಕೃತಜ್ಞತೆಗಳನ್ನು ಸಮರ್ಪಿಸಿದರು. ನವರಾತ್ರಿಯ ಮಹೋತ್ಸವವು ಮುಗಿದಂತೆ ಶುಭದಿನದಂದು ಬೆಳಗ್ಗೆ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಶ್ರೀ ಶಾರದಾ ಅಮ್ಮನವರಿಗೆ ಪೂಜಾ ಕೈಂಕರ್ಯವನ್ನು ಮುಗಿಸಿ ದೇವಸ್ಥಾನದಲ್ಲಿ ನೆರೆದಿದ್ದ ಅಪಾರ ಭಕ್ತ ಸಮೂಹವನ್ನು ಉದ್ದೇಶಿಸಿ ಶ್ರೀ ಶಾರದಾಂಬೆಯ ಅಪ್ಪಣೆಯಂತೆ ನಾವು ಶ್ರೀ ಸೀತಾರಾಮಾಂಜನೇಯಲು ರವರನ್ನು ಮುಂದಿನ ಪೀಠಾಧಿಪತಿಗಳನ್ನಾಗಿ ಆರಿಸಿರುತ್ತೇವೆ. ಶಿಷ್ಯ ಸ್ವೀಕಾರ ಸಮಾರಂಭವು ನವೆಂಬರ್ 11, 1974ರಂದು ನೆರವೇರುವುದು ಎಂದು ಸೂಚಿಸಿದರು. ಭಕ್ತ ವೃಂದವು ಹರ್ಷ ವ್ಯಕ್ತಪಡಿಸಿತು. ಜಗದ್ಗುರು ಶ್ರೀ ಶ್ರೀ ಶಂಕರ ಭಗವತ್ಪಾದರು ಮುಂದಿನ ಪೀಠಾಧಿಪತಿಗಳನ್ನು ಆರಿಸಲು ಅನುಸರಿಸಬೇಕಾದ ನಿಯಮವನ್ನು ಮಹಾನುಶಾಸನದಲ್ಲಿ ಆಜ್ಞಾಪಿಸಿರುತ್ತಾರೆ. ಅದರ ನೀತಿ ನಿಯಮದಂತೆಯೇ ಶಿಷ್ಯ ಸ್ವೀಕಾರದ ಆಯ್ಕೆ ನಡೆದಿತ್ತು. ಶಿಷ್ಯ ಸ್ವೀಕಾರ ಸಮಾರಂಭದ ಶ್ರೀಮುಖವನ್ನು ಆಮ್ನಾಯ ಪೀಠಾಧಿಪತಿಗಳಿಗೆ, ಮೈಸೂರು ಸಂಸ್ಥಾನದ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರಿಗೆ ಹಾಗೂ ಭಕ್ತ ವೃಂದಕ್ಕೆ ರವಾನಿಸಲಾಯಿತು.

ಅಂದು ಆನಂದ ಸಂವತ್ಸರದ ಆಶ್ವಯುಜ ಕೃಷ್ಣ ಏಕಾದಶಿ ರವಿವಾರ (10–11–1974) ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ 83ನೇ ಜಯಂತಿಯಂದು ಶ್ರೀ ಸೀತಾರಾಮಾಂಜನೇಯಲು ರವರು ಗುರುವಂದನೆ ಸಲ್ಲಿಸಿ ಶುಭ ಸಮಾರಂಭದ ಕಾರ್ಯಗಳನ್ನು ಪ್ರಾರಂಭಿಸಿದರು. ಶ್ರೀ ಗಣಪತಿ ಹೋಮ, ಶ್ರೀ ಶಾರದಾ ಅಮ್ಮನವರಿಗೆ ವಿಶೇಷ ಪೂಜೆ, ನಂತರ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಮತ್ತು ಜಗದ್ಗುರು ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರ ಅಧಿಷ್ಠಾನದ ಪೂಜೆ ಸಲ್ಲಿಸಿ ಅಷ್ಟಶ್ರಾದ್ಧ ನೆರವೇರಿಸಿದರು. ಅಂದು ರಾತ್ರಿ ಪೂರ್ಣ ಜಾಗರಣೆ ಮಾಡುತ್ತಾ ಅಗ್ನಿಕಾರ್ಯವನ್ನು ನೆರವೇರಿಸಿದರು.

ಮಾರನೆಯ ದಿನ ಆಶ್ವಯುಜ ಕೃಷ್ಣ ದ್ವಾದಶಿ ಸೋಮವಾರದಂದು (11–11–1974) ಶ್ರೀ ಸೀತಾರಾಮಾಂಜನೇಯಲು ರವರು ಮುಂಜಾನೆ ತಮ್ಮ ಸಂಧ್ಯಾವಂದನೆಯನ್ನು ಮುಗಿಸಿ, ಆನಂತರ ಪುರುಷಸೂಕ್ತ ಹೋಮ, ವಿರಜಾಹೋಮವನ್ನು ನೆರವೇರಿಸಿದರು. ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರು ಅದೆಷ್ಟು ಶಿಷ್ಯರಿಗೆ ಸನ್ಯಾಸ ಗ್ರಹಣ ಮಾಡಿಸಿದರೋ ಅದೇ ಪವಿತ್ರ ತುಂಗಾ ತಟಕ್ಕೆ ತೆರಳಿದರು. ಶಿಷ್ಯನ ಆಗಮನಕ್ಕೆ ಮಹಾಸ್ವಾಮಿಗಳವರು ಎದುರು ನೋಡುತ್ತಾ ಇದ್ದರು. ಮುಂದಿನ ಪೀಠಾಧಿಪತಿಗಳಾಗಿ ಧರ್ಮದೀಕ್ಷೆ ಪಡೆಯಲು ಅನುವಾಗುವ ಕ್ಷಣಗಳು ಸಮೀಪಿಸಿತು. ತುಂಗೆಯನ್ನು ಬಲಗೈಯಲ್ಲಿ ಸ್ಪರ್ಶಿಸಿ ಆಶೀರ್ವಾದ ಪಡೆದರು. ನಿಧಾನವಾಗಿ ತುಂಗೆಗೆ ಇಳಿದರು. ತುಂಗೆಯು ಕಂಠದವರೆಗೂ ಬಂದಳು. ಆಗ ಒಂದೊಂದಾಗಿ ತಮ್ಮ ವಸ್ತ್ರಗಳನ್ನು ಕಳಚಿ ತುಂಗೆಯಲ್ಲಿ ವಿಸರ್ಜಿಸಿದರು. ಸೊಂಟಕ್ಕೆ ಕಟ್ಟಿದ್ದ ದಾರವನ್ನು, ಧರಿಸಿದ್ದ ಯಜ್ಞೋಪವೀತವನ್ನು ವಿಸರ್ಜಿಸಿದರು. ಪ್ರೈಷೋಚ್ಚಾರವನ್ನು ಉಚ್ಚರಿಸಿದರು. ಹಿಂದಿನ ಬಂಧನದಿಂದ ಮುಕ್ತರಾದರು. ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಸನ್ಯಾಸಿಯ ಸರ್ವಸ್ವವಾದ ಶುಭ್ರವಾದ ಕಾವಿಯ ವಸ್ತ್ರ, ದಂಡಕಮಂಡಲವನ್ನು ನೀಡಿದರು. ಎಲ್ಲೆಡೆ ಘಂಟಾನಾದ ಮಾರ್ದನಿಸುತ್ತಿತ್ತು. ವೇದ ಮಂತ್ರದ ಘೋಷ, ಭಕ್ತವೃಂದದ ಜಯಕಾರ ಮುಗಿಲು ಮುಟ್ಟಿತು. ನಂತರ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಅಧಿಷ್ಠಾನದಲ್ಲಿ ಗುರುಗಳು ಶಿಷ್ಯರಿಗೆ ಪ್ರಣವ ಮಂತ್ರ ಹಾಗೂ ಜಗದ್ಗುರು ಶ್ರೀ ಶ್ರೀ ಶಂಕರ ಭಗವತ್ಪಾದರು ತಮ್ಮ ನೇರ ಶಿಷ್ಯರಾದ ಜಗದ್ಗುರು ಶ್ರೀ ಶ್ರೀ ಸುರೇಶ್ವರ ಚಾರ್ಯರಿಗೆ ಉಪದೇಶ ಮಾಡಿ ಆನಂತರ ಅದು ಪರಂಪರೆಯಾಗಿ ಬಂದಿರುವ ವೇದಗಳ ಮಹಾಕಾವ್ಯವನ್ನು ಉಪದೇಶಿಸಿ ಪೂರ್ಣವಾಗಿ ಸನ್ಯಾಸ ನೀಡಿ ಆಶೀರ್ವದಿಸಿದರು.

ಎಲ್ಲಾ ಭಕ್ತವೃಂದವು ಕಾತುರದಿಂದ ಕಾಯುತ್ತಿದ್ದ ಶುಭ ವೇಳೆಯಲ್ಲಿ ಬ್ರಹ್ಮಚಾರಿಗೆ ಶ್ರೀಭಾರತೀತೀರ್ಥ ಎಂದು ನಾಮಕರಣ ಮಾಡಿ ಯೋಗಪಟ್ಟವನ್ನು ಘೋಷಿಸಿದರು. ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಮೂವತ್ತಾರನೇ ಶ್ರೇಷ್ಠ ಯತಿಗಳಾಗಿ, ಜಗದ್ಗುರುಗಳಾಗಿ ಅಲ್ಲಿನ ಶಿಷ್ಯ ಪರಂಪರೆಗೆ ಅನುಗ್ರಹಿಸಿರುವ ವ್ಯಾಖ್ಯಾನ ಪೀಠದ ಆರೋಹಣ ಮಾಡಿದರು. ಜಗದ್ಗುರುಗಳವರು ಶಿಷ್ಯರ ಶಿರದ ಮೇಲೆ ಸಾಲಿಗ್ರಾಮವನ್ನು ಇರಿಸಿ ವಿಧಿ ಪೂರ್ವಕವಾಗಿ ಪೂಜೆ ಸಲ್ಲಿಸಿದರು. ಈ ಪೂಜೆಯು ಮಾನವತ್ವದಿಂದ ದೈವತ್ವಕ್ಕೆ ಏರಿಸುವ ಪೂಜೆಯಾಗಿತ್ತು. ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳವರು ತಮ್ಮ ಗುರುದೇವರ ಪಾದ ಪೂಜೆಯನ್ನು ಭಕ್ತಿಯಿಂದ ನೆರವೇರಿಸಿದರು. ಪ್ರಸ್ತುತ ಶೃಂಗೇರಿ ಶ್ರೀ ಶಾರದಾ ಪೀಠದ ಮೂವತ್ತಾರನೇ ಪೀಠಾಧಿಪತಿಗಳಾಗಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು 50 ವರ್ಷಗಳಿಂದ ಪರಂಪರೆಯಂತೆ ಸನಾತನ ಧರ್ಮ ರಕ್ಷಣೆ ಮಾಡುತ್ತಾ, ಶ್ರೀ ಶಾರದಾ ಅಮ್ಮನವರು, ಶ್ರೀ ಚಂದ್ರ ಮೌಳೀಶ್ವರ ಸ್ವಾಮಿರವರನ್ನು ನಿತ್ಯ ಪೂಜಿಸುತ್ತಾ, ಶ್ರೀಪುಣ್ಯಕ್ಷೇತ್ರ ಶೃಂಗೇರಿಯನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸಿದ್ದಾರೆ.









ವಾರಭವಿಷ್ಯ

5.11.2023 ರಿಂದ 11.11.2023

ಈ ವಾರದಲ್ಲಿ ಗ್ರಹಗಳ ಸಂಚಾರ:– ರವಿ–ತುಲಾ, ಚಂದ್ರ–ಚಂದ್ರ, ಸಿಂಹ, ಕನ್ಯಾ, ಕುಜ–ತುಲಾ, ಬುಧ, ತುಲಾ, ಗುರು–ಮೇಷ, ಶುಕ್ರ–ಕನ್ಯಾ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಹಣಕಾಸಿನ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತದೆ. ವ್ಯಾಪಾರಗಳು ಕ್ರಮೇಣ ಲಾಭದಾಯಕವಾಗಿ ಸಾಗುತ್ತವೆ. ಮನೆಯ ಹೊರಗಿನವರೊಂದಿಗೆ ಪರಿಸ್ಥಿತಿಯ ಅನುಗುಣವಾಗಿ ಹೊಂದಿಕೊಂಡು ಮುಂದಿನ ಹೆಜ್ಜೆ ಇಡಿ. ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ. ತೆರಿಗೆ ಅಧಿಕಾರಿಗಳ ಕಿರುಕುಳ ಎದುರಾಗಬಹುದು. ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ಭಾಗವಹಿಸುತ್ತೀರಿ.
ಶ್ರೀ ಗಣೇಶ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದ ಆದಿಗೆ ಸುಖ, ಸಂತೋಷದಿಂದ ಕಾಲ ಕಳೆಯುವುದು. ಶಿಕ್ಷಣದ ವಿಷಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವಿರಿ. ಗೃಹ ನಿರ್ಮಾಣ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ಆಸ್ತಿ ವಿಷಯಗಳಲ್ಲಿ ಸಹೋದರರೊಂದಿಗೆ ಹೊಸ ಒಡಂಬಡಿಕೆಗಳು ಉಂಟಾಗುವುದು. ದ್ವಿದಳ ಧಾನ್ಯ ವ್ಯಾಪಾರ ತೇಜಿಯಾಗಿ ನಡೆದು ಹೆಚ್ಚಿನ ಧನಲಾಭ ದೊರೆಯುವುದು. ನರದೌರ್ಬಲ್ಯ ಕಾಡುವುದು.
ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–9.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದ ಆರಂಭಕ್ಕೆ ಹರುಷದ ನಕ್ಷತ್ರ ಮಿನುಗಲಿದೆ. ಗುರು ಕೃಪೆಯಿಂದ ಬದುಕು ಸಮೃದ್ಧವಾಗಲಿದೆ. ನೆರೆಹೊರೆಯಲ್ಲಿ ಸೌಜನ್ಯದ ಮಾತಿನಿಂದ ಮನಗೆಲ್ಲುವಿರಿ. ವ್ಯಾಪಾರ ವ್ಯವಹಾರಗಳು ಸುಗಮವಾಗಿ ಸಾಗುವುದು. ವಾರ ಮಧ್ಯೆ ನಿಮ್ಮ ಆರೋಗ್ಯದಲ್ಲಿ ವ್ಯತ್ಯಯವಾದೀತು. ಲಘುವಾಗಿ ಪರಿಗಣಿಸಬೇಡಿ. ಮನೆದೇವರ ದರ್ಶನ ಅಗತ್ಯವಾಗಿ ಮಾಡಿ.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಆತ್ಮೀಯರಿಂದ ದೊರೆತ ಆದರದ ಆಹ್ವಾನ ಆನಂದವನ್ನು ತರುತ್ತದೆ. ನಿರೀಕ್ಷಿತ ಹಣ ಸಮಯಕ್ಕೆ ಸರಿಯಾಗಿ ಕೈ ಸೇರುತ್ತದೆ. ಮನೆಗೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸುವಿರಿ. ಮುಖ್ಯ ಕೆಲಸಗಳಲ್ಲಿ ಉಂಟಾಗಿದ್ದ ಅಡೆತಡೆಗಳು ಅನುಭವಿಗಳ ಮಾರ್ಗದರ್ಶನದಿಂದ ನಿವಾರಣೆ ಆಗುತ್ತದೆ. ಅಷ್ಟಮ ಶನಿ ಸಂಚಾರ ಇರುವುದರಿಂದ ಡ್ರೈವಿಂಗ್ ವಿಷಯದಲ್ಲಿ ಎಚ್ಚರವಿರಿ.
ಶ್ರೀ ಮಾರುತಿದರ್ಶನ. ಶುಭ ಸಂಖ್ಯೆ–2.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಆಸ್ತಿ ವಿಷಯದಲ್ಲಿ ಹೊಸ ಒಪ್ಪಂದಗಳು ನಿಮ್ಮ ಅನುಕೂಲದಂತೆ ಆಗುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರುವುದು. ನಿಮ್ಮ ಕ್ರಿಯಾಶಕ್ತಿ ಉನ್ನತ ಮಟ್ಟದ್ದಾಗಿರುತ್ತದೆ. ಸಾಮಾಜಿಕ ಸೇವೆಯಿಂದ ನಿಮ್ಮ ಗೌರವ ಪ್ರತಿಷ್ಠೆಗಳು ಹೆಚ್ಚಳವಾಗುವುದು. ಮಾತಿನಂತೆ ನಡೆದು ಮನ್ನಣೆಗೆ ಪಾತ್ರರಾಗುವಿರಿ. ವಾರಾಂತ್ಯಕ್ಕೆ ಮಾನಸಿಕ ಭಾವೋದ್ರೇಕಕ್ಕೆ ಒಳಗಾಗುವಿರಿ.
ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–8.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಆರಂಭಕ್ಕೆ ಹಲವು ಗ್ರಹಗಳು ನಿಮ್ಮ ಅನುಕೂಲಕ್ಕೆ ಇಲ್ಲ. ಬರೀ ಕಷ್ಟ ಪಡುವುದರಿಂದಲೇ ಸುಖವನ್ನು ಸಾಧಿಸಲು ಆಗುವುದಿಲ್ಲ. ದೈವ ಸಹಾಯವೂ ಬೇಕಾಗುವುದು. ಮನೆಯಲ್ಲಿ ಪ್ರೀತಿ ವಾತ್ಸಲ್ಯದಿಂದ ಇರಲು ಪ್ರಯತ್ನಿಸಿ. ಕ್ಷೀರೋತ್ಪನ್ನ ಹಾಗೂ ಹೋಟೆಲ್ ಉದ್ಯಮಗಳು ಹೆಚ್ಚಿನ ಲಾಭವನ್ನು ನೀಡುವುದು. ವಾರದ ಕಡೆಗೆ ಭಾವೋದ್ವೇಗಕ್ಕೆ ಒಳಗಾಗದೆ ಶಾಂತವಾಗಿರಲು ಪ್ರಯತ್ನಿಸಿ.
ಶ್ರೀಮನ್ನಾರಾಯಣನಾಮ ಜಪಿಸಿ. ಶುಭ ಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಬೃಹಸ್ಪತಿ ಎಂಬ ಶುಭ ಗ್ರಹದ ವೀಕ್ಷಣೆ ನಿಮ್ಮ ಬೆಂಗಾವಲಿಗೆ ಇದೆ. ಶ್ರದ್ಧಾವಾನ್ ಲಭತೇ ಫಲಂ ಎಂಬ ಶಾಸ್ತ್ರೋಕ್ತಿಯಂತೆ ನೀವು ಮಾಡುವ ಕೆಲಸದಲ್ಲಿ ತನ್ಮಯತೆ ಇರಲಿ, ಶುಭ ಫಲ ನಿಮ್ಮದಾಗಲಿದೆ. ನಿಮ್ಮ ಮಾತೃಶ್ರೀಯವರ ಆಶೀರ್ವಾದದಿಂದ ಸಾಮಾಜಿಕ ಕೆಲಸಗಳು ಸುಖಾಂತ್ಯವಾಗುವುದು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಾಧ್ಯತೆ ಇದೆ.
ಶ್ರೀ ದೇವೀ ಪೂಜೆ. ಶುಭ ಸಂಖ್ಯೆ–4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ
ದೈನಂದಿನ ಕೆಲಸಗಳು ಮಾಮೂಲಿನಂತೆ ನಡೆಯುವುದು. ಹಣಕಾಸಿನ ವಿಷಯದ ಬಗ್ಗೆ ಹೆಚ್ಚು ಆತಂಕ ಪಡುವ ಅಗತ್ಯವಿಲ್ಲ. ಯಾಕೆಂದರೆ ಖರ್ಚಿನ ಸಮಯಕ್ಕೆ ಆದಾಯ ಒದಗಿ ಬರುವುದು. ಯಾರೊಡನೆಯೂ ವಾಗ್ವಾದಗಳಿಗೆ ಮುಂದಾಗದಿರಿ. ಅರ್ಧಾಷ್ಟಮ ಶನಿದೇವ ಪೊಲೀಸ್ ಠಾಣೆ ದರ್ಶನ ಮಾಡಿಸಬಹುದು. ವಾಹನ ಚಲಿಸುವಾಗ ತಾಳ್ಮೆ ಮೀರಿದರೆ ಬಾಳ್ಮೆಗೆಟ್ಟು ಹೋಗುವುದು.
ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕೆ ಸಜ್ಜನರ ಭೇಟಿ, ಶುಭ ಸಮಾಚಾರಗಳ ಸಂವಾದ. ಹಣಕಾಸಿನ ಪರಿಸ್ಥಿತಿ ಸುಧಾರಿಸಿ, ಮುಗ್ಗಟ್ಟುಗಳಿಂದ ಮುಕ್ತಿ ದೊರೆಯುವುದು. ಪಂಚಮ ಗುರುವಿನಿಂದ ನಿಮ್ಮ ಜೀವನದಲ್ಲಿ ಗುರುತರವಾದ ಬದಲಾವಣೆಯನ್ನು ಕಾಣುವಿರಿ. ಮನೆಯಲ್ಲಿ ಮಂಗಳ ವಾದ್ಯ ಮೊಳಗಲಿದೆ. ನಿಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಿ ಪ್ರತಿಫಲವನ್ನು ಸರ್ವಶಕ್ತನ ಮೇಲೆ ಬಿಡಿ.
ಶ್ರೀ ಗುರುಶತನಾಮಪಠಿಸಿ. ಶುಭ ಸಂಖ್ಯೆ –3

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬರದು. ದೈನಂದಿನ ಕೆಲಸಗಳು ಮಾಮೂಲಿನಂತೆ ನಡೆಯುವುದು. ಕೆಲವೊಂದು ಸಲ ದುಡುಕಿ ನಡೆದು ನಂತರ ಪಶ್ಚಾತ್ತಾಪಪಡುವಿರಿ. ನ್ಯಾಯಾಲಯ ವಿಚಾರಗಳು ನಿಮಗೆ ಅನುಕೂಲಕರವಾಗಿ ಇರುವುದಿಲ್ಲ. ಹಣದಾಸೆಗೆ ಒಳಗಾಗಿ ಕಾನೂನುಬಾಹಿರ ಕೃತ್ಯಗಳನ್ನು ಮಾಡಿ ತೊಂದರೆಗೆ ಒಳಗಾಗುವಿರಿ.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಆರ್ಥಿಕ ಪರಿಸ್ಥಿತಿಯಲ್ಲಿ ಅಲ್ಪಸ್ವಲ್ಪ ಸುಧಾರಣೆ ಕಂಡುಬರುವುದು. ಕಚೇರಿ ಕೆಲಸಗಳ ಹೊರೆ ಜಾಸ್ತಿಯಾಗಿ ದೇಹಾಯಾಸ. ಕುಟುಂಬ ಸದಸ್ಯರ ನೆರವಿನಿಂದ ಮುಖ್ಯ ಕೆಲಸಗಳು ಶುಭಾಂತ್ಯವಾಗುವುದು. ನಿಮ್ಮ ವೈಯಕ್ತಿಕ ವಿಚಾರಗಳನ್ನು ಯಾರಲ್ಲೂ ಹಂಚಿಕೊಳ್ಳಬೇಡಿ. ನಂಬಿಸಿ ಮೋಸ ಮಾಡುವವರಿದ್ದಾರೆ. ಜನ್ಮಸ್ಥ ಶನಿ ಸಂಚಾರವಿದೆ. ವಾಹನ ಡ್ರೈವಿಂಗ್‌ನಲ್ಲಿ ಎಚ್ಚರವಿರಲಿ.
ಶ್ರೀ ಶಿವಪಂಚಾಕ್ಷರಿ ಜಪ. ಶುಭ ಸಂಖ್ಯೆ–6.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ. ಶ್ರದ್ಧೆಯಿಂದ ಮಾಡುವ ಕೆಲಸಕ್ಕೆ ಸಫಲತೆ ದೊರೆಯುವುದು. ಹೊಸ ಉದ್ದಿಮೆ ಪ್ರಾರಂಭಿಸಲು ನಿಮ್ಮ ದಾಶ್ಯಾಧಿಪತಿ ಶ್ರೀ ಗುರುಧೈರ್ಯ ತುಂಬಲಿದ್ದಾರೆ. ಮನೆ ಮಂದಿಯಲ್ಲಿ ಪ್ರೇಮಾದರಗಳು ಮನೆ ಮಾಡುವುದು. ಆಧ್ಯಾತ್ಮ ಜ್ಞಾನದಲ್ಲಿ ಆಸಕ್ತಿ ಮೂಡುವುರು. ರಾಹು–ಕೇತುಗಳು ನಿಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದು.
ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ–2.

ಅನುದಾನವಿಲ್ಲದೆ ಅಭಿವೃದ್ಧಿ ಹೇಗೆ ಸಾಧ್ಯ?

● ಕೆಡಿಪಿ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಬೇಸರ ● ಮುಂದಿನ ದಿನಗಳಲ್ಲಿ ಗ್ರಾಪಂ ಮಟ್ಟದಲ್ಲಿ ಜನಸ್ಪಂದನ ಸಭೆ



ಹುಣಸೂರು, ನ.4– ಸರ್ಕಾರದಿಂದ ಯಾವುದೇ ಅನುದಾನ ಬರುತ್ತಿಲ್ಲ. ಇದರಿಂದ ಅಧಿಕಾರಿಗಳು ಧೃತಿಗೆಟ್ಟಿದ್ದಾರೆ ಎಂದು ತಿಳಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ, ಅನುದಾನವಿಲ್ಲದೆ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ ಎಂದರು.

ನಗರಸಭಾ ಸಭಾಂಗಣದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಪ್ರಥಮ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಏನೇ ಸಮಸ್ಯೆ ಇದ್ದರೂ ಅದನ್ನು ನನ್ನ ಗಮನಕ್ಕೆ ತನ್ನಿ. ಅದನ್ನು ಹೇಗೆ ಬಗೆಹರಿಸಬೇಕು ಎಂಬುದನ್ನು ತೀರ್ಮಾನಿಸೋಣ ಎಂದರು.

ರೈತರ ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಜನಪ್ರತಿನಿಧಿಗಳ ಸಹಕಾರದೊಂದಿಗೆ ನಿಮ್ಮಗಳ ಮಟ್ಟದಲ್ಲೇ ಬಗೆಹರಿಸಬೇಕು. ಆಗ ಯಾವುದೇ ದೂರುಗಳು ಬರುವುದಿಲ್ಲ. ಅಲ್ಲದೆ ಯಾವುದೇ ಅಡೆ–ತಡೆಗಳಿಲ್ಲದೆ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಯಾಗಬೇಕು ಎಂದು ಅವರು ಕಿವಿಮಾತು ಹೇಳಿದರು.

ಕ್ಷೇತ್ರದಲ್ಲಿ ಅಲೆಮಾರಿ ಜನಾಂಗದವರು ಪಡಿತರ ಚೀಟಿ ಇಲ್ಲದೆ ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಜನರ ಜೀವನಕ್ಕೆ ರೇಷನ್ ಕಾರ್ಡ್, ಆಧಾರ್ ಕಾರ್ಡ್ ಬಹು ಮುಖ್ಯವಾಗಿದ್ದು, ಇಂತಹ ಮೂಲ ಸವಲತ್ತುಗಳನ್ನು ಮೊದಲು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜನಸ್ಪಂದನ ಸಭೆಗಳನ್ನು ಕರೆದು ಸಮಸ್ಯೆಗಳನ್ನು ಸ್ಥಳದಲ್ಲಿಯೇ ಬಗೆಹರಿಸುವ ಕೆಲಸ ಮಾಡುತ್ತೇನೆ. ಇದರಿಂದ ಜನರು ತಾಲೂಕು ಕೇಂದ್ರ ಸ್ಥಾನಕ್ಕೆ ಅಲೆಯುವುದು ತಪ್ಪುತ್ತದೆ ಎಂದರು.

ಕೆಡಿಪಿ ಸಭೆ ಪ್ರಾರಂಭವಾಗುತ್ತಿದ್ದಂತೆ ರೈತ ಸಂಘದ ಬೆಟ್ಟೇಗೌಡ, ಮೊದೂರು ಮಹೇಶ್, ಕೃಷ್ಣೆಗೌಡ, ಬಸವೇಗೌಡ, ನಿಂಗಮ್ಮ ಅವರುಗಳು ಬಂದು ನಮಗೆ ರಾತ್ರಿ ವೇಳೆ ವಿದ್ಯುತ್ ಬೇಡ. ಹಗಲಿನ ವೇಳೆ ವಿದ್ಯುತ್ ಬೇಕು. ಕಾಡಂಚಿನ ಪ್ರದೇಶದಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ರಾತ್ರಿ ವೇಳೆ ಜಮೀನಿಗೆ ಹೋಗಲು ಜೀವ ಭಯವಿದೆ. ಇದರಿಂದ ರಾತ್ರಿ ವೇಳೆ ನೀಡುವ ಕರೆಂಟ್ ಬೇಡ ನಮಗೆ ಬೆಳಗ್ಗೆ ಸಮಯದಲ್ಲಿ ನೀಡಿ ಎಂದು ಶಾಸಕರನ್ನು ಒತ್ತಾಯಿಸಿದರು.

ರೈತರ ಸಮಸ್ಯೆಯನ್ನು ಆಲಿಸಿದ ಶಾಸಕರು ನಿಮ್ಮ ಸಮಸ್ಯೆ ನನಗೆ ತಿಳಿದಿದೆ. ಈ ಬಗ್ಗೆ ಚೆಸ್ಕಾಂ ಇಲಾಖೆ ಅಧಿಕಾರಿಗಳೊಂದಿಗೆ ಮಾತನಾಡಿ ಇಂದಿನ ಕೆಡಿಪಿ ಸಭೆಯಲ್ಲಿ ನಡಾವಳಿ ಮಾಡಿ ಸರ್ಕಾರಕ್ಕೆ ಕಳುಹಿಸುತ್ತೇನೆ ಎಂದು ಭರವಸೆ ನೀಡಿದರು.

ಈ ಬಾರಿ ತಾಲೂಕಿನಲ್ಲಿ ಶೇ.70 ರಷ್ಟು ಮಳೆ ಕಡಿಮೆಯಾಗಿದ್ದು, 6635 ಹೆಕ್ಟೇರ್ ಮುಸುಕಿನ ಜೋಳ, 495 ಹೆಕ್ಟೇರ್ ಹತ್ತಿ ಸೇರಿದಂತೆ 7130 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಇದರಿಂದ ಹುಣಸೂರು ತಾಲೂಕನ್ನು ಬರ ಪೀಡಿತ ಪ್ರದೇಶವೆಂದು ಸರ್ಕಾರ ಘೋಷಣೆ ಮಾಡಿದೆ. ತಾಲೂಕಿನಲ್ಲಿ 60 ಸಾವಿರ ರೈತರಿದ್ದು ಕೇವಲ 383 ಜನ ರೈತರು ಮಾತ್ರ ಬೆಳೆ ವಿಮೆ ಮಾಡಿಸಿದ್ದಾರೆ ಎಂದು ಸಹಾಯಕ ಕೃಷಿ ನಿರ್ದೇಶಕ ಈರಣ್ಣ ಸಭೆಗೆ ತಿಳಿಸಿದರು. ಇದು ನನ್ನ ಮೊದಲ ಕೆಡಿಪಿ ಸಭೆಯಾಗಿದ್ದು ಮುಂದಿನ ಸಭೆಗೆ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಪೂರ್ಣ ಮಾಹಿತಿಯೊಂದಿಗೆ ಬರಬೇಕು. ಯಾವುದೇ ಮಾಹಿತಿ ಇಲ್ಲಾ ಎಂದು ಸಬೂಬು ಹೇಳಬಾರದು ಎಂದು ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ತಾಲೂಕು ಕಚೇರಿ ಕಟ್ಟಡದಲ್ಲಿರುವ ಉಪ ನೋಂದಣಿ ಕಚೇರಿಯಲ್ಲಿ ಸಾರ್ವಜನಿಕರಿಗೆ ಬೇಕಾದ ಅಸನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂದು ನೋಂದವಣಾಧಿಕಾರಿಗೆ ಶಾಸಕರು ಸೂಚಿಸಿದರು.

ಸಭೆಯಲ್ಲಿ ಜಿಪಂನ ಲೆಕ್ಕಾಧಿಕಾರಿ ಹಾಗೂ ತಾಲೂಕು ಪಂಚಾಯಿತಿ ಆಡಳಿತಾಧಿಕಾರಿ ಸಿದ್ದಗಂಗಮ್ಮ, ತಾಪಂ ಇಒ ಮನು, ತಾಹಸಿಲ್ದಾರ್ ಡಾ.ಅಶೋಕ್, ಪೌರಾಯುಕ್ತರದ ಮಾನಸ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ನಂ.ಗೂಡು ಬಳಿ ಸಿಲಿಂಡರ್ ಸ್ಫೋಟ: ಮನೆ ನಾಶ

ಕುಟುಂಬಸ್ಥರು ಪ್ರಾಣಾಪಾಯದಿಂದ ಪಾರು



ಮಲ್ಕುಂಡಿ, ನ.4– ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಮನೆಯೊಂದು ಸಂಪೂರ್ಣವಾಗಿ ನಾಶವಾಗಿದ್ದು, ಕುಟುಂಬಸ್ಥರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಂಜನಗೂಡು ತಾಲೂಕಿನ ಕಂದೇಗಾಲ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಯಶೋಧ ಶುಕ್ರವಾರ ರಾತ್ರಿ 7 ಘಂಟೆ ಸಮಯದಲ್ಲಿ ಗ್ಯಾಸ್ ಹಚ್ಚಿ ಅಡುಗೆ ಮಾಡುತ್ತಿದ್ದಾಗ ಏಕಾಏಕಿ ಭಾರಿ ಶಬ್ದದೊಂದಿಗೆ ಸಿಲಿಂಡರ್ ಸ್ಫೋಟಗೊಂಡಿದೆ.

ಗಾಬರಿಗೊಂಡ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸುವಷ್ಟರಲ್ಲಿ ಮನೆಯಲಿದ್ದ ಆಹಾರ ಪದಾರ್ಥಗಳು ಸಂಪೂರ್ಣವಾಗಿ ಸುಟ್ಟು ಹೋಗಿವೆ. ಮನೆಯಲ್ಲಿ 18 ಗ್ರಾಂ ಚಿನ್ನ, 30 ಸಾವಿರ ಹಣ ಇದ್ದು ಅದು ಕೂಡ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದೆ.

ಸ್ಥಳಕ್ಕೆ ಹುಲ್ಲಹಳ್ಳಿ ಪಿಎಸ್ಐ ರಮೇಶ್ ಕಟ್ಟಿ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.


ಅಡುಗೆ ಮಾಡುವಾಗ ಯಶೋಧ ಸೇರಿದಂತೆ ಮನೆಯವರೆಲ್ಲಾ ಹೊರಗಡೆ ಇದ್ದುದರಿಂದ ಅವರೆಲ್ಲಾ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಿಲಿಂಡರ್ ಸಿಡಿದು ಮನೆಯಿಂದ ಸುಮಾರು 300 ಮೀಟರ್ ದೂರದಲ್ಲಿ ಬಿದ್ದಿದ್ದು, ಸಿಲಿಂಡರ್‌ಗಳು ಎರಡು ಭಾಗಗಳಾಗಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ರೈತ ಸಂಘದ ಉಪಾಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಅತೀ ಬಡ ಕುಟುಂಬದಲ್ಲಿ ವಾಸವಾಗಿದ್ದ ಯಶೋಧಮ್ಮ ಅವರ ಮನೆ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಮನೆಯಲ್ಲಿದ್ದ ಆಹಾರ ಪದಾರ್ಥಗಳು ಹಾಗೂ ಈರುಳ್ಳಿ ಬಿತ್ತನೆ ಬೀಜ ತರಲು ಸಾಲ ಮಾಡಿದ ಹಣವು ಕೂಡ ಸುಟ್ಟು ಹೋಗಿದೆ.

ಇದರಿಂದ ತುಂಬಾ ನಷ್ಟ ಉಂಟಾಗಿದೆ. ವಾಸ ಮಾಡಲು ಮನೆಕೂಡ ಇಲ್ಲದಂತಾಗಿದೆ. ಸರ್ಕಾರ ಸೂಕ್ತ ಪರಿಹಾರ ನೀಡಿ ವಾಸ ಮಾಡಲು ಮನೆ ನಿರ್ಮಾಣ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ಹುಲಿ ಸೆರೆಗೆ ಮುಂದುವರೆದ ಕಾರ್ಯಾಚರಣೆ

● ಸಿಗದ ಹುಲಿ ಸುಳಿವು ● ಮಳೆಯಿಂದ ಸ್ವಲ್ಪ ಅಡ್ಡಿ



ನಂಜನಗೂಡು, ನ4– ಹುಲಿ ಸೆರೆಗಾಗಿ ಹೆಡಿಯಾಲ ಭಾಗದಲ್ಲಿ ಕೈಗೊಂಡಿರುವ ಕಾರ್ಯಾಚರಣೆ ಎರಡನೇ ದಿನವಾದ ಶನಿವಾರವೂ ಮುಂದುವರೆದಿದ್ದು, ಹುಲಿಯ ಸುಳಿವು ಮಾತ್ರ ದೊರೆತಿಲ್ಲ.

ಹುಲಿ ಸಂರಕ್ಷಣಾ ಪಡೆಯ 25 ಸಿಬ್ಬಂದಿ ಹಾಗೂ ರಾಮಾಪುರ ಆನೆ ಶಿಬಿರದಿಂದ ಕರೆತಂದಿರುವ ಧರ್ಮ ಹಾಗೂ ಪಾರ್ಥ ಸಾಕಾನೆಗಳ ನೆರವಿನಿಂದ ಶನಿವಾರ ಹಾದನೂರು, ಒಡೆಯನಪುರ ಗ್ರಾಮದ ನಂದಿದೇವರ ಬೆಟ್ಟ ಹಾಗೂ ಹಾದನೂರು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿರುವ ಸಿಬ್ಬಂದಿಗೆ ಹುಲಿ ಸುಳಿವು ಸಿಕ್ಕಿಲ್ಲ.

ಕಾರ್ಯಾಚರಣೆಗೆ ಶನಿವಾರ ಮಧ್ಯಾಹ್ನದ ವೇಳೆ ಸ್ವಲ್ಪ ಮಳೆ ಅಡಚಣೆಯಾದರೂ ನಂತರದಲ್ಲಿ ಕಾರ್ಯಾಚರಣೆ ಕೈಗೊಳ್ಳಲಾಯಿತು. ದಿನವಿಡೀ ಕಾರ್ಯಾಚರಣೆ ನಡೆಸಿದರೂ ಹುಲಿ ಸೆರೆಗೆ ಸಿಕ್ಕಿಲ್ಲ. ಇನ್ನು ಹುಲಿಯ ಚಲನಾವಲನ ಗಮನಿಸುವ ಸಲುವಾಗಿ 20 ಕಡೆ ಕ್ಯಾಮರಾ ಅಳವಡಿಸಿದರೂ ಅಲ್ಲಿಯೂ ಅದರ ಹೆಜ್ಜೆ ಗುರುತು ದೊರೆತಿಲ್ಲ ಎಂದು ಹೆಡಿಯಾಲ ಆರ್‌ಎಫ್‌ಒ ನಾರಾಯಣ ರಾವ್ ತಿಳಿಸಿದ್ದಾರೆ.

ಇನ್ನು ಹುಲಿ ಸೆರೆ ಹಿಡಿಯುವುದಕ್ಕಿಂತ ಹೆಚ್ಚಾಗಿ ಅದನ್ನು ಕಾಡಿನ ಪ್ರದೇಶಕ್ಕೆ ಸೇರಿಸುವ ನಿಟ್ಟಿನಲ್ಲೂ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಇನ್ನು ಕಾಡಂಚಿನ ಪ್ರದೇಶಗಳಲ್ಲಿರುವ ಗ್ರಾಮಗಳ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ. ದನಗಾಯಿಗಳು ಒಬ್ಬಂಟಿಯಾಗಿ ಓಡಾಡದೇ ಗುಂಪಿನಲ್ಲಿರಬೇಕು. ಜತೆಗೆ ಕಾಡಿನ ಪ್ರದೇಶದೊಳಗೆ ನುಸುಳದೇ ಜಾನುವಾರುಗಳನ್ನು ಜಮೀನಿನಲ್ಲೇ ಮೇವಿಗೆ ಬಿಡುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಇದು ಗುರುವಂದನಾ ಕಾರ್ಯಕ್ರಮವಲ್ಲ, ಗುರು–ವಿದ್ಯಾರ್ಥಿಗಳ ಸ್ಪಂದನಾ ಕಾರ್ಯಕ್ರಮ



ಜಯಪುರ, ನ.4– ಕಳೆದೆರಡು ದಶಕಗಳ ಹಿಂದೆ ಶಿಕ್ಷಕರನ್ನು, ಗುರು ಬ್ರಹ್ಮ ಗುರು ವಿಷ್ಣು ಎಂದು ಗೌರವಿಸಲಾಗುತ್ತಿತ್ತು. ಆದರೆ ಇಂಬ ಗುರು ಏನು ಮಹಾಃ ಎಂಬಂತಾಗಿದೆ ಎಂದು ನಿವೃತ್ತ ಮುಖ್ಯೋಪಾಧ್ಯಾಯ ಎಚ್.ಕೆ.ಪ್ರಭಾಕರ್ ಮೂರ್ತಿ ಹೇಳಿದರು.

ಶನಿವಾರ ಜಯಪುರ ರಾಘವೇಂದ್ರ ಪ್ರೌಢಶಾಲೆಯಲ್ಲಿ 1996–97ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ಒಕ್ಕೂಟವು ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಗುರುವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ನನ್ನ ಹಳೆಯ ವಿದ್ಯಾರ್ಥಿಗಳಿಗೆ ಇದು ಗುರುವಂದನಾ ಕಾರ್ಯಕ್ರಮವಾಗಿದೆ. ಆದರೆ ನಮಗೆ ಇದು ಗುರು ಮತ್ತು ವಿದ್ಯಾರ್ಥಿಗಳ ಸ್ಪಂದನಾ ಕಾರ್ಯಕ್ರಮವಾಗಿದೆ. 1976ನೇ ಸಾಲಿನಿಂದ 2008ರವರೆಗೆ 32 ವರ್ಷಗಳ ಕಾಲ ಒಂದೇ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ಇದು ಕೇವಲ ಶಾಲೆಯಲ್ಲ ನಮಗೆ. ಶೈಕ್ಷಣಿಕ ಕುಟುಂಬವಾಗಿತ್ತು. ಜಯಪುರ ಹೋಬಳಿಯಲ್ಲಿ ಕೇವಲ ಒಂದೇ ಒಂದು ಪ್ರೌಢಶಾಲೆ ಇದ್ದುದರಿಂದ ಇಲ್ಲಿ ವ್ಯಾಸಂಗ ಮಾಡಲು ಬಹುಬೇಡಿಕೆಯಿತ್ತು ಎಂದು ಅವರು ಹೇಳಿದರು.

ಎರಡು ದಶಕಗಳ ಹಿಂದೆ ಗ್ರಾಮೀಣ ಭಾಗದ ಹೆಣ್ಣುಮಕ್ಕಳನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಪೋಷಕರು ಮೈಸೂರಿಗೆ ಕಳುಹಿಸುತ್ತಿರಲಿಲ್ಲ. ಹೆಣ್ಣುಮಕ್ಕಳ ಶಿಕ್ಷಣ ಮೊಟಕಾಗಬಾರದೆಂದು ನಿರಂತರ ಶ್ರಮವಹಿಸಿ ಜಯಪುರಕ್ಕೆ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರನ್ನು ತರಲಾಯಿತು ಎಂದು ಅವರು ನುಡಿದರು.

ಕಾರ್ಯಕ್ರಮದಲ್ಲಿ ರಾಘವೇಂದ್ರ ಶಾಲೆಯ ಮುಖ್ಯಶಿಕ್ಷಕ ಎಸ್.ವೈದ್ಯನಾಥ್ ಹಾಗೂ ಸೇವೆ ಸಲ್ಲಿಸಿ ನಿವೃತ್ತರಾದ ವೈದೇವರಾಜೇಗೌಡ, ಆರ್.ಜಯಶೇಖರ್, ಸಿ.ಎನ್ ಬಾಲಕೃಷ್ಣನ್ ಉಪಸ್ಥಿತರಿದ್ದರು.

ಸಂಘಟಿತ ಹೋರಾಟದಿಂದ ಸೌಲಭ್ಯ



ತಿ.ನರಸೀಪುರ, ನ.4– ಕರ್ನಾಟಕ ರಾಜ್ಯದಲ್ಲಿ ಮಾತ್ರ ಸರ್ಕಾರಿ ನೌಕರರ ಸಂಘ ಬಲಿಷ್ಠವಾಗಿದ್ದು, ಒಗ್ಗಟ್ಟಿನ ಹೋರಾಟದಿಂದ ನೌಕರರಿಗೆ ಸಿಗಬೇಕಾದ ಸೌಲಭ್ಯವನ್ನು ದೊರಕಿಸಲು ಸಂಘ ಕಾರ್ಯ ನಿರ್ವಹಿಸುತ್ತದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು ಹೇಳಿದರು

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ನೌಕರರ ಮಕ್ಕಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಬೇರೇ ಬೇರೆ ರಾಜ್ಯಗಳಲ್ಲಿ ನೌಕರರ ಸಂಘದಲ್ಲಿ ಹಲವು ಗುಂಪುಗಳಿವೆ. ಆದರೆ ಕರ್ನಾಟಕದಲ್ಲಿ ಮಾತ್ರ ಒಂದೇ ಸಂಘಟನೆ ಪ್ರಬಲವಾಗಿ ಕಾರ್ಯ ನಿರ್ವಹಿಸುತ್ತಿದ್ದು ನೌಕರರ ಹಿತ ಕಾಪಾಡುವಲ್ಲಿ ಯಶಸ್ವಿಯಾಗಿದೆ. ನವಂಬರ್ ತಿಂಗಳಲ್ಲಿ 7ನೇ ವೇತನ ಆಯೋಗದ ವರದಿ ಸಲ್ಲಿಕೆಯಾಗಲಿದೆ. ವರದಿ ನಂತರ ತೀರ್ಮಾನ ಕೈಗೊಳ್ಳುವ ಭರವಸೆಯನ್ನು ಸಿಎಂ. ಡಿಸಿಎಂ ನೀಡಿದ್ದಾರೆ. ಜತೆಗೆ ಸಚಿವ ಪರಮೇಶ್ವರ್ ಅವರು ಕೂಡ ಭರವಸೆ ನೀಡಿದ್ದಾರೆ. ಆರೋಗ್ಯ ಸಂಜೀವಿನಿ ಯೋಜನೆಯಡಿ ಆರೋಗ್ಯ ಸೌಲಭ್ಯ ಪಡೆಯಲು ನೌಕರರು ತಮ್ಮ ಅವಲಂಬಿತರನ್ನು ದಾಖಲಿಸಿಕೊಳ್ಳುವಂತೆ ಸಲಹೆ ಮಾಡಿದರು.

ಜಿಲ್ಲಾ ಮಟ್ಟದಲ್ಲಿ ನಡೆದ ಪ್ರತಿಭಾ ಪುರಸ್ಕಾರದಲ್ಲಿ ಈ ಬಾರಿ 250 ಮಂದಿ ಇದ್ದರು. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಹೆಚ್ಚಾಗಬೇಕು ಜತೆಗೆ ತಾಲ್ಲೂಕು ಸಂಘಟನೆ ವಿಶಿಷ್ಟವಾಗಿ ಕೆಲಸ ಮಾಡುತ್ತಿದ್ದು,ಮಕ್ಕಳನ್ನು ಪುರಸ್ಕರಿಸುವ ಈ ಕಾರ್ಯ ಶ್ಲಾಘನೀಯ ಎಂದರು

ಮುಖ್ಯ ಅತಿಥಿಯಾಗಿ ಮಾತನಾಡಿದ ಬಿಇಒ ಜಿ ಶೋಭ ಅವರು, ವಿದ್ಯಾರ್ಥಿಗಳಿಗೆ ನೀಡುವ ಇಂತಹ ಚಿಕ್ಕ ಚಿಕ್ಕ ಪುರಸ್ಕಾರ ಗಳು ಅವರನ್ನು ಹೆಚ್ಚು ಪ್ರೋತ್ಸಾಹಿಸುತ್ತವೆ. ಶಿಕ್ಷಣದಲ್ಲಿ ಅಂಕಗಳಿಸುವುದಷ್ಟೆ ಸಾಧನೆಯಲ್ಲ. ಉತ್ತಮ ರೀತಿಯ ನಡವಳಿಕೆ, ಮೌಲ್ಯಯುತ ಜೀವನವು ಅಷ್ಟೇ ಮುಖ್ಯವಾಗಿರುವುದರಿಂದ ವಿದ್ಯಾರ್ಥಿಗಳು ಈ ಬಗ್ಗೆ ಆಲೋಚಿಸ ಬೇಕು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ತಾಲೂಕಿನ ಸರ್ಕಾರಿ ನೌಕರರ 40 ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಂ ವಿ ಶಿವಶಂಕರ್ ಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುಟ್ಟಸ್ವಾಮಿ, ಜಿಲ್ಲಾ ನೌಕರ ಸಂಘದ ಕಾರ್ಯಾಧ್ಯಕ್ಷ ಆನಂದ್, ಪ್ರಧಾನ ಕಾರ್ಯದರ್ಶಿ ರೇವಣ್ಣ ಸಂಘಟನಾ ಕಾರ್ಯದರ್ಶಿ ಸತೀಶ್, ತಾಲೂಕು ನೌಕರ ಸಂಘದ ಗೌರವಾಧ್ಯಕ್ಷ ನಾಗರಾಜು, ರಾಜ್ಯ ಪರಿಷತ್ ಸದಸ್ಯ ಉಮೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್ ಡಿ ಮಾದಪ್ಪ, ಪುಟ್ಟರಾಜು, ಮಹದೇವ ಸ್ವಾಮಿ, ವೆಂಕಟರಾಮು, ಸಂಘದ ಪ್ರಧಾನ ಕಾರ್ಯದರ್ಶಿ ಬನ್ನೂರು ಸುಬ್ರಹ್ಮಣ್ಯ, ಚೆಲುವರಾಜು, ಮಹ ದೇವಯ್ಯ, ರಾಜಣ್ಣ, ಶ್ರೀಧರ್, ರಾಜಶೇಖರ್, ಜೇಮ್ಸ್, ಗಜೇಂದ್ರ ಪಿಡಬ್ಲ್ಯೂಡಿ ನಾಗರಾಜು, ನಾಗು, ಕೆಂಡಗಣ್ಣ ಸ್ವಾಮಿ, ನರಸಮ್ಮ, ಶೋಭಾ, ಪ್ರಭಾಕರ್, ಸೋಸಲೆ ನಾಗೇಶ್, ಮತ್ತಿತರರು ಇದ್ದರು.

ಕೆ.ಆರ್.ನಗರ ಆಸ್ಪತ್ರೆಗೆ ಲೋಕಾಯುಕ್ತ ಡಿವೈಎಸ್‌ಪಿ ದಿಢೀರ್ ಭೇಟಿ

● ಆಸ್ಪತ್ರೆ ಅವ್ಯವಸ್ಥೆ, ವೈದ್ಯರ ನಿರ್ಲಕ್ಷ್ಯ ಭ್ರಷ್ಟಾಚಾರ ಕಂಡು ತರಾಟೆ ● ಹಾಲು ಸುರಿದುಕೊಂಡು ಸುಟ್ಟ ಗಾಯಗಳಾಗಿದ್ದ ಮಗುವಿಗೆ ಚಿಕಿತ್ಸೆ ಕೊಡಿಸಿದ ಅಧಿಕಾರಿಗಳು



ಕೆ.ಆರ್.ನಗರ, ನ.4– ಸಾರ್ವಜನಿಕರ ದೂರಿನ ಮೇರೆಗೆ ಲೋಕಾಯುಕ್ತ ಡಿವೈಎಸ್‌ಪಿ ಮಾಲ್ತೇಶ್ ನೇತೃತ್ವದಲ್ಲಿ ಅಧಿಕಾರಿಗಳು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿ, ಆಸ್ಪತ್ರೆಯ ಅವ್ಯವಸ್ಥೆ ಮತ್ತು ಭ್ರಷ್ಟಾಚಾರವನ್ನು ಕಂಡು ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರಲ್ಲದೆ ಶಿಸ್ತುಕ್ರಮ ಜರುಗಿಸುವ ಎಚ್ಚರಿಕೆ ನೀಡಿದರು.

ಬಿಸಿ ಹಾಲು ಚೆಲ್ಲಿಕೊಂಡು ತೀವ್ರವಾಗಿ ಗಾಯಗೊಂಡಿದ್ದ ಒಂದೂವರೆ ವರ್ಷದ ಮಗುವಿಗೆ ಮೂರು ಗಂಟೆಗಳ ಕಾಲ ಕಾಯಿಸಿ ಚಿಕಿತ್ಸೆ ನೀಡದೇ ನಿರ್ಲಕ್ಷ್ಯ ಮಾಡಲಾಗಿತ್ತು. ಇದನ್ನು ಕಂಡ ಲೋಕಾಯುಕ್ತರು ಮಗುವಿಗೆ ಚಿಕಿತ್ಸೆ ಕೊಡಿಸಿ ನಿರ್ಲಕ್ಷ್ಯ ವಹಿಸಿದ್ದ ವೈದ್ಯರು ಮತ್ತು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಕೆ.ಆರ್.ನಗರ ತಾಲೂಕಿನ ಅರ್ಜುನಹಳ್ಳಿ ಗ್ರಾಮದ ಕೆಂಪರಾಜು, ಅಂಬಿಕಾ ದಂಪತಿಗಳ ಪುತ್ರ ಒಂದೂವರೆ ವರ್ಷದ ಹೇಮಂತ್ ಇಂದು ಬೆಳಗ್ಗೆ ಒಲೆಯ ಮೇಲಿದ್ದ ಬಿಸಿ ಹಾಲನ್ನು ತನ್ನ ಎದೆ ಭಾಗದ ಮೇಲೆ ಚೆಲ್ಲಿಕೊಳ್ಳಲಾಗಿ ತೀವ್ರ ಸುಟ್ಟ ಗಾಯಗಳಾಗಿದ್ದು ಚಿಕಿತ್ಸೆಗಾಗಿ ಪಟ್ಟಣದ ತಾಯಿ ಮಕ್ಕಳ ಆಸ್ಪತ್ರೆಗೆ ಬಂದಿದ್ದರು.

ಆಸ್ಪತ್ರೆಯ ಮಕ್ಕಳ ವೈದ್ಯರು ಚಿಕಿತ್ಸೆಗಾಗಿ ತಾಲೂಕು ಆಸ್ಪತ್ರೆಗೆ ಕಳುಹಿಸಿದ್ದಾರೆ. ಕೂಡಲೇ ಮಗುವನ್ನು ಕರೆದುಕೊಂಡು ತಾಲೂಕು ಆಸ್ಪತ್ರೆಗೆ ಬಂದಿದ್ದು ಸುಮಾರು ಮೂರು ಗಂಟೆ ಕಾದರೂ ಯಾವೊಬ್ಬ ಸಿಬ್ಬಂದಿಗಳು, ವೈದ್ಯರು ಚಿಕಿತ್ಸೆ ನೀಡದೇ ನಿರ್ಲಕ್ಷ್ಯ ತೋರಿದ್ದಾರೆ.

ಈ ವೇಳೆ ಮೈಸೂರಿನಿಂದ ಆಸ್ಪತ್ರೆಗೆ ಭೇಟಿ ನೀಡಿದ್ದ ಲೋಕಾಯುಕ್ತ ಡಿವೈಎಸ್‌ಪಿ ಮಾಲತೇಶ್ ಹಾಗೂ ಇನ್ಸ್‌ಪೆಕ್ಟರ್ ರವಿ ಕುಮಾರ್, ಸಿಬ್ಬಂದಿಗಳಾದ ಆಶಾ, ದಿವ್ಯ, ಸುಂದರೇಶ್, ದಿನೇಶ್ ಅವರುಗಳ ತಂಡ ಇದನ್ನು ಕಂಡು ಕರ್ತವ್ಯನಿರತ ವೈದ್ಯರು ಹಾಗೂ ಆಸ್ಪತ್ರೆ ಆಡಳಿತ ವೈದ್ಯರನ್ನು ಕರೆದು ತೀವ್ರ ತರಾಟೆ ತೆಗೆದು ಕೊಂಡರು. ಈ ಕೂಡಲೇ ಸುಟ್ಟಗಾಯಗಳಾಗಿರುವ ಮಗುವಿಗೆ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ತಾಕೀತು ಮಾಡಲಾಗಿ, ಆ ಕ್ಷಣದಲ್ಲಿ ಮಗುವಿಗೆ ಚಿಕಿತ್ಸೆ ನೀಡಲು ದಾಖಲು ಮಾಡಿಕೊಳ್ಳಲಾಯಿತು.

ಲೋಕಾಯುಕ್ತ ಡಿವೈಎಸ್ಪಿ ಮಾಲ್ತೇಶ್ ತಂಡ ಆಸ್ಪತ್ರೆಯ ಎಲ್ಲಾ ಕಡೆ ಪರಿಶೀಲನೆ ನಡೆಸಿ ರೋಗಿಗಳಿಂದ ಹಾಗೂ ಸ್ಥಳೀಯ ಜನರಿಂದ ಆಸ್ಪತ್ರೆಯ ಬಗ್ಗೆ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಗೆ ಬೆಳಗ್ಗೆ ಬಂದಿದ್ದೇವೆ. ಇಷ್ಟೊತ್ತಾದರೂ ಸಾರ್ವಜನಿಕರೊಬ್ಬರು ಇಷ್ಟೊತ್ತಾದರೂ ಇಲ್ಲಿ ಕೇಳುವವರೇ ಇಲ್ಲ. ತಮ್ಮ ದೂರುಗಳನ್ನು ಹೇಳಿಕೊಂಡರು, ಔಷಧಿ, ಮಾತ್ರೆ ವಿತರಣಾ ಕೇಂದ್ರದಲ್ಲಿ ಫಾರ್ಮಸಿಸ್ಟ್ ಇಲ್ಲದೆ ಬೇರೊಬ್ಬರು ಮಾತ್ರೆ ಕೊಡುತ್ತಿರುವುದನ್ನು ಕಂಡು ಎಲ್ಲೀ ನಿಮ್ಮ ಫಾರ್ಮಸಿಸ್ಟ್ ಎಂದು ತೀವ್ರ ತರಾಟೆ ತೆಗೆದು ಕೊಂಡ ಲೋಕಾಯುಕ್ತರು ಜನರಲ್ ವಾರ್ಡ್, ತುರ್ತು ಚಿಕಿತ್ಸಾ ವಿಭಾಗ, ಹೊರರೋಗಿಗಳ ಚಿಕಿತ್ಸೆ ವಿಭಾಗ ಸೇರಿದಂತೆ ಆಸ್ಪತ್ರೆಯ ಅನೇಕ ಕಡೆಗಳಲ್ಲಿ ಪರಿಶೀಲನೆ ಮಾಡಿದರು.

ಈ ಸಂಬಂಧ ಎಲ್ಲವನ್ನು ಪರಿಶೀಲನೆ ಮಾಡಿದ್ದೇವೆ. ಈ ಆಸ್ಪತ್ರೆಯ ಲೋಪ–ದೋಷಗಳನ್ನು ಪಟ್ಟಿ ಮಾಡಿ ವರದಿಯನ್ನು ಲೋಕಾಯುಕ್ತ ಎಸ್.ಪಿ ಅವರಿಗೆ ಸಲ್ಲಿಸುವುದಾಗಿ ತಿಳಿಸಿದರು.

ದಿಢೀರ್ ಆಸ್ಪತ್ರೆಗೆ ಭೇಟಿ ನೀಡಲು ಕಾರಣವೇನು ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಲೋಕಾಯುಕ್ತ ಡಿವೈಎಸ್ಪಿ ತಾಲೂಕು ಆಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯಗಳು ಇದ್ದರೂ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ ಎಂದು ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಬಂದಿದ್ದೇವೆ ಎಂದು ತಿಳಿಸಿದರು. ಸಾರ್ವಜನಿಕರು ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ನೀಡದಿರುವ ಬಗ್ಗೆ ದೂರುಗಳು ಇದ್ದರೆ ತಿಳಿಸಿ ಎಂದರು. ನೆರೆದಿದ್ದ ಜನರು ಆಸ್ಪತ್ರೆ ಬಗ್ಗೆ ದೂರಿನ ಸುರಿಮಳೆಗೈದರು.

ಇನ್ಸ್‌ಪೆಕ್ಟರ್ ರವಿಕುಮಾರ್, ಸಿಬ್ಬಂದಿಗಳಾದ ಆಶಾ, ದಿವ್ಯ, ಸುಂದರೇಶ್, ದಿನೇಶ್, ತಾಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ನಾಗೇಂದ್ರ ವೈದ್ಯರಾದ ಡಾ.ಶಿವಶಂಕರ್, ಪುರಸಭೆ ಮಾಜಿ ಜಿ.ಪಿ.ಮಂಜುನಾಥ್, ಆಸ್ಪತ್ರೆ ಸಿಬ್ಬಂದಿ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಟೈಗರ್ ನಾಗೇಶ್ವರ್ ರಾವ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯಾರಿಯನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭಗವತಿ ಕೇಸರಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಮಾ ಊರಿ ಪಾಲಿಮೆರಿ ಪಾರ್ಟ್–2 (ತೆ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಭಾವಪೂರ್ಣ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ(ತ)	4 ಪ್ರದರ್ಶನಗಳು
ಪ್ರಭಾ	
ಟಿಆರ್‌ಪಿ ರಾಮ(ಕ)	2 ಪ್ರದರ್ಶನಗಳು
ಗರುಡ ಪುರಾಣ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟಗರುಪಲ್ಯ (ಕ): ಬೆ.10.45ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, ಲಿಯೋ (ತ): ಸಂ.4ಕ್ಕೆ, ಘೋಸ್ಟ್ (ಕ): ರಾ.9.50ಕ್ಕೆ.
ಸ್ಕ್ರೀನ್ 2	ಗರುಡ ಪುರಾಣ (ಕ): ಬೆ.10.50ಕ್ಕೆ, ಲಿಯೋ (ತ): ಮ.1.35ಕ್ಕೆ, ಯುಟಿ 69 (ಹಿಂ): ಸಂ.4.45ಕ್ಕೆ, ಕೀಡಾ ಕೋಲ (ತೆ): ರಾ.7.15ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	12th ಫೇಲ್ (ಹಿಂ): ಬೆ.10.45ಕ್ಕೆ, ರಾ.7ಕ್ಕೆ, ಕ್ರೇಜಿ ಕೀರ್ತಿ (ಕ): ಮ.1.45ಕ್ಕೆ, ಟಗರುಪಲ್ಯ (ಕ): ಸಂ.4.15ಕ್ಕೆ, ಗರುಡನ್ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಟಗರು ಪಲ್ಯ (ಕ): ರಾ.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಘೋಸ್ಟ್ (ಕ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 2	ಟಗರುಪಲ್ಯ (ಕ): ರಾ.10.05ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಲಿಯೋ (ತ): ಮ.12.55ಕ್ಕೆ.
ಸ್ಕ್ರೀನ್ 3	ಕೀಡಾ ಕೋಲ (ತೆ): ಬೆ.9.55ಕ್ಕೆ, ಮ.3.25ಕ್ಕೆ, ಟಗರು ಪಲ್ಯ (ಕ): ಮ.12.35ಕ್ಕೆ, ಲಿಯೋ (ಕ): ಸಂ.6.05ಕ್ಕೆ, ಲಿಯೋ (ತ): ರಾ.9.30ಕ್ಕೆ.
ಸ್ಕ್ರೀನ್ 4	ಲಿಯೋ (ತ): ಬೆ.10.30ಕ್ಕೆ, ಟಗರುಪಲ್ಯ (ಕ): ಮ.1.55ಕ್ಕೆ, ಟಿ.ಆರ್.ಪಿ. ರಾಮ (ಕ): ಸಂ.4.45ಕ್ಕೆ, ಗರುಡನ್ (ಮ): ರಾ.7.30ಕ್ಕೆ, ಕೀಡಾ ಕೋಲ(ತೆ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೋಟೆ ಬಳಿ ಸಿಡಿಲಿಗೆ ಎರಡು ಹಸು ಬಲಿ




ಹೆಚ್.ಡಿ.ಕೋಟೆ ನ4– ಸಿಡಿಲು ಬಡಿದು 2 ಲಕ್ಷದೂ ಮೌಲ್ಯದ ಎರಡು ಹಸುಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಬೆಳಗನಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಗ್ರಾಮದ ರಾಜೇಶ್ ಎಂಬುವರಿಗೆ ಸೇರಿದ ಹಸು ಸಿಡಿಲಿಗೆ ಬಲಿಯಾಗಿದ್ದು, ಇಡೀ ಕುಟುಂಬ ಆತಂಕಗೊಂಡಿದೆ. ಶುಕ್ರವಾರ ತಮ್ಮ ಜಮೀನಿನಲ್ಲಿ ಹಸುಗಳನ್ನು ಮೇಯಿಸಿಕೊಂಡು ಬಂದು ಮನೆ ಮುಂಭಾಗ ಕಟ್ಟಿ ಹಾಕಿದ ಸಂದರ್ಭದಲ್ಲಿ ಘಟನೆ ನಡೆದಿದೆ.

ಶನಿವಾರ ವಿಚಾರ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ತಹಶಿಲ್ದಾರ್ ಸಣ್ಣರಾಮಪ್ಪ ಪರಿಶೀಲನೆ ನಡೆಸಿ ಜಾನುವಾರು ಕಳೆದುಕೊಂಡ ರೈತನಿಗೆ ಸಾಂತ್ವನ ಹೇಳಿ ಸರ್ಕಾರದ ವತಿಯಿಂದ ಸಿಡಿಲು ಬಡಿದು ಮೃತಪಟ್ಟ ಒಂದು ಜಾನುವಾರಿಗೆ 37,500 ರೂ ನಂತೆ ನಿಮಗೆ 75 ಸಾವಿರ ರೂ ಪರಿಹಾರ ಕೊಡಿಸಿ ಕೊಡುವುದಾಗಿ ಭರವಸೆ ನೀಡಿದರು.

ಜಾನುವಾರು ಕಳೆದುಕೊಂಡ ರೈತ ಯೋಗೇಶ್ ಮಾತನಾಡಿ ನಮ್ಮ ಕುಟುಂಬ ಹಸುಗಳನ್ನು ಸಾಕಿಕೊಂಡು ಜೀವನ ಸಾಗಿಸುತ್ತಿದ್ದೆವು. ಎರಡು ಹಸುವು ಎರಡು ಲಕ್ಷಕ್ಕೂ ಹೆಚ್ಚು ಬೆಲೆ ಬಾಳುತ್ತದೆ ಎರಡು ಹಸುವು ಗರ್ಭಗೊಂಡಿದ್ದವು, ಸರ್ಕಾರದ ವತಿಯಿಂದ ಎರಡು ಹಸುವಿಗೆ 75,000 ಹಣ ನೀಡುತ್ತದೆ, ಆದರೆ ಈ ಹಣ ಒಂದು ಹಸುವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ, ಆದ್ದರಿಂದ ಸರ್ಕಾರದ ನಮ್ಮಂತ ಬಡ ಕುಟುಂಬಗಳನ್ನು ಗುರುತಿಸಿ ಹೆಚ್ಚಿನ ಪರಿಹಾರ ಕೊಡಬೇಕು ಎಂದು ಮನವಿ ಮಾಡಿದ್ದಾರೆ.



ತಿ.ನರಸೀಪುರ ಪಟ್ಟಣದ ವಿದ್ಯೋದಯ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಅವರಿಗೆ ಶಿಕ್ಷಕ ವರ್ಗದವರು ಸನ್ಮಾನಿಸಿದರು. ಕೆ.ಪಿ.ಉದಯಕುಮಾರ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಟಿ.ಎಸ್ ಬಸವಣ್ಣಸ್ವಾಮಿ, ಬಿ.ಎಸ್.ಸುನೀತ, ಎನ್. ಕಲ್ಪನ, ಮಾನಸ, ಎಂ.ಸುರೇಶ, ಸಿದ್ದರಾಜು, ನಂದೀಶ, ಸುಧಾ, ರವೀಶ್ ಕುಮಾರ್, ಶಿವನಂಜಪ್ಪ ಶಿವಶಂಕರ , ಆರ್.ಎಸ್. ಮಹದೇವಸ್ವಾಮಿ, ಬಿ. ಜೆ.ರವಿಕುಮಾರ್, ರಾಮನಾಥನ್, ತಾ.ಪಂ.ಮಾಜಿ ಅಧ್ಯಕ್ಷ ಹ್ಯಾಕನೂರು ಉಮೇಶ್, ಸೀಹಳ್ಳಿ ಗುರುಮೂರ್ತಿ, ಹೆಳವರಹುಂಡಿ ಮೂರ್ತಿ, ನಿಲಸೋಗೆ ಶೇಖರಪ್ಪ,ಬೋಗಯ್ಯನಹುಂಡಿ ಪ್ರಭುಸ್ವಾಮಿ,ಕರೋಹಟ್ಟಿ ಗ್ರಾ.ಪಂ.ಸದಸ್ಯ ಪ್ರಭು,ಎಸ್. ಎಂ.ಆರ್.ಪ್ರಕಾಶ್,ಹೆಮ್ಮಿಗೆ ಮಹದೇವಸ್ವಾಮಿ ಮತ್ತಿತರರಿದ್ದರು.

ಶ್ರದ್ಧಾಂಜಲಿ



ಶ್ರೀ ಕೃಷ್ಣ ಹೆಚ್.ಬಿ.

ವ್ಯವಸ್ಥಾಪಕ ನಿರ್ದೇಶಕರು
ಸಾಯಿ ಕಾರ್ಟನ್ ಮ್ಯಾನ್ಯುಫ್ಯಾಕ್ಚರಿಂಗ್ ಕಂ. ಪ್ರೈ. ಲಿ.,
ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯ, ಮೈಸೂರು

ನಿಧನ: 26.10.2023 (ಗುರುವಾರ)

ಇವರ ವೈಕುಂಠ ಸಮಾರಾಧನೆ ಕಾರ್ಯವನ್ನು ತಾ. 06-11-2023ನೇ ಸೋಮವಾರ ಬೆಳಿಗ್ಗೆ 10-30 ಗಂಟೆಗೆ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಕುಟುಂಬವರ್ಗ ಮತ್ತು ಬಂಧುಮಿತ್ರರು

ಹಸಿರು ನಮ್ಮ ಉಸಿರು

ಭೂಶಾಂತಿ ಉತ್ತರಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಕೆ. ವಿಜಯ

ನಿಧನ: 26.10.2023

ಇವರ ಉತ್ತರಕ್ರಿಯಾದಿ ಕಾರ್ಯವನ್ನು ದಿ. 6.11.2023 ಸೋಮವಾರ ಬೆಳಿಗ್ಗೆ 10.30ಕ್ಕೆ ಮೈಸೂರಿನ ಕುವೆಂಪುನಗರ, ಕಾವೇರಿ ಸ್ಕೂಲ್ ಹತ್ತಿರದ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಭೋಜನ: 12.30

ದುಃಖತಪ್ತರು: ಕುಟುಂಬವರ್ಗದವರು

3ನೇ ವರ್ಷದ ಸವಿನೆನಪು



ಲೇ. ಪಿ .ಕೃಷ್ಣಪ್ಪ ನವರು

ನಿಧನ 05–11–2020

ಶ್ರೀ ಚಾಮುಂಡೇಶ್ವರಿ ಜ್ಯುವೆಲರ್ಸ್ ಮಾಲೀಕರು.
ಬಜಾರ್ ರಸ್ತೆ, ನಂಜನಗೂಡು.

ಇಂತಿ ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷೀದಾರರು ಅದರ ಮಾಲೀಕರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.
ಷೆಡ್ಯೂಲ್ ಸ್ವತ್ತಿನ ಪರಬಾರೆಯು ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1, ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಗ್ರಾಮದ ಸರ್ವೆ ನಂಬರ್, 176/1ರಲ್ಲಿನ ಎರಡು ಎಕರೆ ಇಪ್ಪತ್ತಾರುವರೆ ಗುಂಟೆ (2.26.08.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ
ಪೂರ್ವಕ್ಕೆ : ಸರ್ವೆ ನಂಬರ್ 176/2, ಪಶ್ಚಿಮಕ್ಕೆ : ಸರ್ವೆ ನಂಬರ್ 177, ಉತ್ತರಕ್ಕೆ : ಮೈಸೂರು – ತಿ.ನರಸೀಪುರ ರಸ್ತೆ, ದಕ್ಷಿಣಕ್ಕೆ : ಸರ್ವೆ ನಂಬರ್ 175 ಮತ್ತು 178,

ಐಟಂ ಸಂ. 2, ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಗ್ರಾಮದ ಸರ್ವೆ ನಂಬರ್, 176/2ರಲ್ಲಿನ ಎರಡು ಎಕರೆ ಇಪ್ಪತ್ತಾರುವರೆ ಗುಂಟೆ (2.26.08.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ
ಪೂರ್ವಕ್ಕೆ : ಸರ್ವೆ ನಂಬರ್ 174, ಪಶ್ಚಿಮಕ್ಕೆ : ಸರ್ವೆ ನಂಬರ್ 176/1, ಉತ್ತರಕ್ಕೆ : ಮೈಸೂರು– ತಿ.ನರಸೀಪುರ ರಸ್ತೆ, ದಕ್ಷಿಣಕ್ಕೆ : ಸರ್ವೆ ನಂಬರ್ 175 ಮತ್ತು 178.

ಸಹಿ/– ಎಂ.ಎನ್. ಪ್ರಕಾಶ್ ಕಾಳಪ್ಪ
ವಕೀಲರು, ನಂ. 2–3, ಒಂದನೇ ಮಹಡಿ,
ಪಿ.ಆರ್.ಐ ಕಾಂಪ್ಲೆಕ್ಸ್, 67/7ಎ,
ನ್ಯೂ ಸಯ್ಯಾಜಿರಾವ್ ರಸ್ತೆ,
ಫೋರ್ಟ್ ಮೊಹಲ್ಲಾ, ಮೈಸೂರು–04,
ಮೊ: 9343112535



ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಕಾರ್ಯಯೋಜನೆ, ಅರಣ್ಯ ಭವನ,
ಅಶೋಕಪುರಂ, ಮೈಸೂರು–570008
ಕ.ದೂ.ಸಂ.: 0821–2483917 ಇ–ಮೇಲ್: cfwpmys@gmail.com
ಸಂಖ್ಯೆ: ಎ2/ಬಿಯುಡಿ/ಇ–ಟೆಂಡರ್/ಸಿಆರ್–7/2023–24 ದಿ: 31.10.2023

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ–08/2023–24

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) (e-procurement)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯಯೋಜನೆ, ಮೈಸೂರು ರವರು 2023–24ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಮೋಜಣಿ ಮತ್ತು ಆರ್‌ಸಿಸಿ ಪಿಲ್ಲರ್‌ಗಳನ್ನು ಅಳವಡಿಸುವ ಕೆಲಸಗಳಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿತ್ತು. ಆದರೆ ಅಲ್ಪಾವಧಿ ಮರು ಇ–ಟೆಂಡರ್‌ನಲ್ಲಿ ಪರಿಶಿಷ್ಟ ಜಾತಿಯ ಯಾರೊಬ್ಬರು ಭಾಗವಹಿಸದಿರುವುದರಿಂದ ಹಾಗೂ ಪರಿಶಿಷ್ಟ ಪಂಗಡದ ಒಬ್ಬರೇ ಗುತ್ತಿಗೆದಾರರು ಭಾಗವಹಿಸಿ ತಿರಸ್ಕೃತಗೊಂಡಿದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೊಂದಾಯಿತ ಗುತ್ತಿಗೆದಾರರು ಟೆಂಡರ್‌ನ್ನು ಸಲ್ಲಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಫಾರಂಗಳನ್ನು ವೆಬ್‌ಸೈಟ್ www.kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ದಿ: 08.11.2023ರ ಅಪರಾಹ್ನ 4.00 ಗಂಟೆಯವರೆಗೆ ಟೆಂಡರ್ ಅನ್ನು ಸಲ್ಲಿಸಬಹುದು. ತಾಂತ್ರಿಕ ಬಿಡ್ ಅನ್ನು ದಿ: 09.11.2023 ರಂದು ಅಪರಾಹ್ನ 04.10 ಗಂಟೆಗೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ ಅನ್ನು ದಿ: 10.11.2023 ರಂದು ಅಪರಾಹ್ನ 4.20 ಗಂಟೆಗೆ ತೆರೆಯಲಾಗುವುದು. ಇ.ಎಂ.ಡಿ ಹಣವನ್ನು ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಆನ್‌ಲೈನ್‌ನಲ್ಲಿಯೇ ಸಂಬಂಧಿಸಿದ ಬ್ಯಾಂಕ್‌ನಲ್ಲಿ ಪಾವತಿಸಬೇಕಾಗುತ್ತದೆ. ಇನ್ನುಳಿದ ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದು. ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಮೈಸೂರು.
DIPR/DDMYS/KSMCA/583/2023-24